ಸಂಪುಟ: 06 ಸಂಚಿಕೆ: 97 ಪುಟಗಳು: 08 ಶನಿವಾರ 20 ಜೂನ್ 2026 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ನಮಗೇನು ಬೇಕು ಎಂಬುದನ್ನು ಶ್ರಮದಿಂದ ಪಡೆಯಬೇಕು. ಅದಾಗದಿದ್ದರೆ ಕಳೆದುಕೊಂಡಾಗ ಕೂಗುವುದಕ್ಕೆ ಅರ್ಥವೇನಿದೆ..?!

# ಅಡ್ಡ ಮತದಾನ ಕಮಲದಲ್ಲೇ ಭುಗಿಲೆದ್ದ ಅಸಮಾಧಾನ

## ಬಿಜೆಪಿ ನಾಯಕರಿಗೆ ಹೈಕಮಾಂಡ್ ಬುಲಾವ್

ತಲೆದಂಡವಾಗುತ್ತಾ?

ಮತದಾನ

ಕೆಲವರು ಮೂವರು, ಇನ್ನು ಕೆಲವರು ನಾಲ್ಕು ಅಂತಿದ್ದಾರೆ. ಒಟ್ಟಿನಲ್ಲಿ, ಬಿಜೆಪಿ, ಜೆಡಿಎಸ್ ಸೇರಿ ಹನ್ನೊಂದು ಅಡ್ಡಮತದಾನಗಳಾಗಿವೆ. ರಾಜ್ಯ ಬಿಜೆಪಿ ಘಟಕದಲ್ಲಿ ಬಣ ರಾಜಕೀಯ, ಹೊಂದಾಣಿಕೆ ರಾಜಕೀಯದ ಬಗ್ಗೆ ಭಾರೀ ಅಸಮಾಧಾವಿದೆ. ಇಂತಹ ಪರಿಸ್ಥಿತಿಯಲ್ಲಿ, ಕಾಂಗ್ರೆಸ್ಸಿನ ಐದನೇ ಅಭ್ಯರ್ಥಿಗೆ 32 ಮತಗಳು ಬೀಳಲು ಹೇಗೆ ಸಾಧ್ಯ, ಈ ಅಡ್ಡ ಮತದಾನದ ಹಿನ್ನಡೆಯ ಜವಾಬ್ದಾರಿಯನ್ನು ವಹಿಸಿಕೊಳ್ಳುವವರು ಯಾರು? ಈ ಚುನಾವಣೆಯಲ್ಲೂ ಹೊಂದಾಣಿಕೆ ನಡೆದಿದೆಯಾ ಎನ್ನುವ ಪ್ರಶ್ನೆ, ಬಿಜೆಪಿಗರಿಗೆ ಆರಂಭವಾಗಿದೆ. ಬಿಜೆಪಿಯ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ಅಡ್ಜಸ್ಟ್‌ಮೆಂಟ್ ಪಾಲಿಟಿಕ್ಸ ಬಗ್ಗೆ ಉಲ್ಲೇಖಿಸುತ್ತಲೇ ಇರುತ್ತಾರೆ. ಬಿಜೆಪಿ ಅಭ್ಯರ್ಥಿಗೆ ಮತವನ್ನು ಹಾಕಿದ್ದೇನೆ ಎಂದು ಅವರೇ ಹೇಳಿಕೊಂಡಿದ್ದಾರೆ. ಇನ್ನು, ಟ್ರೈನಿಂಗ್ ಕೊಟ್ಟರೂ, ಬಿಜೆಪಿಯ ಒಬ್ಬರ ಮತ ಅಸಿಂಧುಗೊಂಡಿದ್ದು ಹೇಗೆ ಎನ್ನುವುದು ಚರ್ಚೆಯ ವಿಷಯವಾಗಿದೆ.

**ಬಣ ರಾಜಕೀಯ**

**ಸಮಗ್ರ ವರದಿಗೆ ಡೆಡ್‌ಲೈನ್**

ಸಮಿತಿಯು ಜೂನ್ 25 ರೊಳಗೆ ಸಮಗ್ರ ವರದಿಯನ್ನು ನೀಡಲು ಬಿಜೆಪಿ ರಾಜ್ಯಾಧ್ಯಕ್ಷರು ಸೂಚನೆ ನೀಡಿದ್ದಾರೆ. ಈ ಮೂಲಕ ಅಡ್ಡ ಮತದಾನ ಮಾಡಿದವರಿಗೆ ಸಂಕಷ್ಟ ಎದುರಾಗಲಿದೆ.

**ಬೇಷರತ್ ಬೆಂಬಲ ಎಂದ ಕಾಂಗ್ರೆಸ್ ಉಸ್ತುವಾರಿ**

ರಾಜ್ಯ ವಿಧಾನ ಪರಿಷತ್ ಚುನಾವಣೆ ಹೊಸ ಇತಿಹಾಸವನ್ನೇ ಸೃಷ್ಟಿಸಿದ್ದು, ರಾಹುಲ್ ಗಾಂಧಿ ಅವರು ಪ್ರತಿಪಾದಿಸುತ್ತಾ ಬಂದಿರುವ ಪ್ರಗತಿ ಮತ್ತು ನ್ಯಾಯ ರಾಜಕಾರಣಕ್ಕೆ ದೊರೆತ ಬೇಷರತ್ ಬೆಂಬಲದ ಸಂದೇಶ ಇದಾಗಿದೆ ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಬಣ್ಣಿಸಿದ್ದಾರೆ. ಕಾಂಗ್ರೆಸ್ ಪಕ್ಷವು ತನ್ನ 135 ಶಾಸಕರ ಜತೆಗೆ, 3 ಪಕ್ಷೇತರ ಶಾಸಕರ ಬೆಂಬಲ ಸೇರಿ ಒಟ್ಟು 138 ಶಾಸಕರ ಬಲ ಹೊಂದಿದೆ. ಹೀಗಿದ್ದರೂ ಪರಿಷತ್ ಚುನಾವಣೆಯಲ್ಲಿಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಿಗೆ 151 ಪ್ರಥಮ ಪ್ರಾಶಸ್ತ್ಯದ ಮತಗಳು ಲಭಿಸಿವೆ. ಇದು ಸಕಾರಾತ್ಮಕತೆ ಹಾಗೂ ಒಳಗೊಳ್ಳುವಿಕೆ ರಾಜಕಾರಣಕ್ಕೆ ಬಿದ್ದ ಮತ ಎಂದು ಅವರು ಹೇಳಿದ್ದಾರೆ.



## ರಾಜ್ಯ ನಾಯಕರ ಮೇಲೆ ಹೈಕಮಾಂಡ್ ಗರಂ

## ಮತದಾನ ಬಿಜೆಪಿಯಲ್ಲಿ ಕದನ

• ಉದಯವಾಹಿನಿ, ಬೆಂಗಳೂರು

ವಿಧಾನಪರಿಷತ್ ಚುನಾವಣೆಯಲ್ಲಿ ಪಕ್ಷದ ಕೆಲವು ಶಾಸಕರು ವಿಪ್ ಉಲ್ಲಂಘಿಸಿ ಅಡ್ಡಮತದಾನ ನಡೆಸಿರುವುದು ಬಿಜೆಪಿ ರಾಜ್ಯ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮತ್ತು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಅವರ ಕಾರ್ಯವೈಖರಿಯ ವಿರುದ್ಧ ಪಕ್ಷದೊಳಗೇ ಅಸಮಾಧಾನ ಭುಗಿಲೆದ್ದಿದೆ. ಪಕ್ಷದ ಕೆಲ ಹಿರಿಯ ನಾಯಕರು ಮತ್ತು ಕಾರ್ಯಕರ್ತರು ನಾಯಕತ್ವದ ವೈಫಲ್ಯದ ಬಗ್ಗೆ ಬೇಸರ ವ್ಯಕ್ತಪಡಿಸುತ್ತಿದ್ದಾರೆ. ಚುನಾವಣಾ ಫಲಿತಾಂಶದ ಬೆನ್ನಲ್ಲೇ, ರಾಜ್ಯ ಬಿಜೆಪಿಯಲ್ಲಿ ನಾಯಕತ್ವ ಬದಲಾವಣೆ ಆಗಬಹುದು ಎಂಬ ಮಾತುಗಳು ಕೇಳಿಬರುತ್ತಿವೆ. ಕಳೆದ ಕೆಲವು ಸಮಯದಿಂದ ರಾಜ್ಯ ಬಿಜೆಪಿ ನಾಯಕತ್ವದ ವಿರುದ್ಧ ಬಂಡಾಯದ ಸ್ವರಗಳು ಕೇಳಿಬರುತ್ತಿದ್ದು, ಪಕ್ಷದ ಸಂಘಟನೆಯಲ್ಲಿ ಬದಲಾವಣೆ ತರಬೇಕೆಂಬ ಆಗ್ರಹಗಳು ವ್ಯಕ್ತವಾಗಿವೆ. ಕೆಲವು ನಾಯಕರು ವಿಜಯೇಂದ್ರ ಅವರನ್ನು ಅಧ್ಯಕ್ಷ ಸ್ಥಾನದಿಂದ ಬದಲಾಯಿಸಬೇಕು ಎಂಬ ಚರ್ಚೆಯನ್ನೂ ನಡೆಸಿದ್ದಾರೆ. 2023ರ ವಿಧಾನಸಭಾ ಚುನಾವಣೆ ನಂತರ ಪ್ರತಿಪಕ್ಷದ ನಾಯಕರ ಆಯ್ಕೆಯ ಸಂದರ್ಭದಲ್ಲೇ ಪಕ್ಷದೊಳಗೆ ಭಿನ್ನಮತ ಉಂಟಾಗಿತ್ತು. ಅಂದಿನಿಂದಲೂ ಪಕ್ಷದ ಆಂತರಿಕ ನಿರ್ಧಾರಗಳ ಕುರಿತು ಕೆಲ ನಾಯಕರ ನಡುವೆ ಭಿನ್ನಾಭಿಪ್ರಾಯಗಳಿವೆ. ಇತ್ತೀಚಿನ ದಿನಗಳಲ್ಲಿ, ವಿಧಾನಸಭೆಯಲ್ಲಿ ಪ್ರತಿಪಕ್ಷದ ನಾಯಕರಾಗಿ ಆರ್. ಅಶೋಕ್ ಅವರ ನೇತೃತ್ವದಲ್ಲಿ ಹಲವು ರಾಜಕೀಯ ಚಟುವಟಿಕೆಗಳು ನಡೆಯುತ್ತಿದ್ದು, ಅದರಲ್ಲೂ ಪಕ್ಷದ ಶಾಸಕರ ಅಮಾನತು ಸೇರಿದಂತೆ ಕೆಲ ವಿಷಯಗಳಲ್ಲಿ ಪಕ್ಷದ ಒಳಗೇ ಭಿನ್ನಾಭಿಪ್ರಾಯಗಳು ತೀವ್ರವಾಗಿವೆ. ಪಕ್ಷದ ಶಿಸ್ತಿನ ಗೆರೆಯನ್ನು ದಾಟದ ಬಿಜೆಪಿ ಈ ಚುನಾವಣೆಯಲ್ಲಿ ತೀವ್ರ ಮುಖಭಂಗವನ್ನು ಎದುರಿಸಿದೆ. ದೇಶದೆಲ್ಲಡೆ ಪ್ರಾದೇಶಿಕ ಪಾರ್ಟಿಗಳಲ್ಲಿ ಬಿರುಕು ಮೂಡಲು ಬಿಜೆಪಿಯ ರಾಜಕಾರಣ ಕಾರಣ ಎಂದು ವ್ಯಾಖ್ಯಾನಿಸಲಾಗುತ್ತಿರುವ ಹೊತ್ತಿನಲ್ಲಿ, ತಮದೇ ಪಾರ್ಟಿಯಲ್ಲಿ ಕ್ರಾಸ್ ವೋಟಿಂಗ್, ಬಿಜೆಪಿಗೆ ತೀವ್ರ ಮುಜುಗರ ತಂದಿದೆ. ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಮತ್ತು ವಿಪಕ್ಷದ ನಾಯಕ ಆರ್.ಅಶೋಕ ಅವರ ನಾಯಕತ್ವದ ಬಗ್ಗೆ, ಬಿಜೆಪಿ ಹೈಕಮಾಂಡ್ ತೀವ್ರ ಅಸಮಾಧಾನವನ್ನು ಹೊರಹಾಕಿದ್ದಾರೆ ಎಂದು ಹೇಳಲಾಗುತ್ತಿದೆ.ಐದನೇ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರ ಆಪ್ತರೂ ಆಗಿರುವ ವಿನಯ್ ಕಾರ್ತಿಕ್ ಪ್ರಕಾಶ್, ಎಲ್ಲರಿಗಿಂತ ಹೆಚ್ಚು (32) ಮತವನ್ನು ಪಡೆದು, ಚುನಾವಣಾ ರಣಕಣವನ್ನು ಹುಬ್ಬೇರುವಂತೆ ಮಾಡಿದ್ದಾರೆ. ಬಿಜೆಪಿಯ ಇಬ್ಬರು ಅಭ್ಯರ್ಥಿಗಳು ಗೆಲುವನ್ನು ಸಾಧಿಸಿದರೂ, ಸ್ವಲ್ಪ ಎಡವಟ್ಟಾಗಿದ್ದರೂ, ಇನ್ನಷ್ಟು ಮುಖಭಂಗವನ್ನು ಎದುರಿಸುವ ಪರಿಸ್ಥಿತಿ ಎದುರಾಗುತ್ತಿತ್ತು.ಈ ಚುನಾವಣೆಯಲ್ಲಿ, ಯಾರು ಯಾರಿಗೆ ಮತವನ್ನು ಹಾಕಬೇಕು, ಯಾರಿಗೆ ಎಷ್ಟು ಮತವನ್ನು ಹಾಕಬೇಕು ಎನ್ನುವ ವಿಚಾರದಲ್ಲಿ ಬಿಜೆಪಿಯಲ್ಲಿ ಕೊನೇ ಗಳಿಗೆಯವರೆಗೂ ಗೊಂದಲವಿತ್ತು ಎಂದು ಹೇಳಲಾಗುತ್ತಿದೆ. ಯಾಕೆಂದರೆ, ಕೆಲವರು ಒಬ್ಬರಿಗೆ 30 ಮತಗಳು ಎನ್ನುತ್ತಿದ್ದರೆ ಮತ್ತೊಬ್ಬರು 29 ಮತ ಎನ್ನುತ್ತಿದ್ದರು. ರಾಜ್ಯಾಧ್ಯಕ್ಷರ ಬದಲಾವಣೆಯ ಸುದ್ದಿ, ರಾಜ್ಯ ಬಿಜೆಪಿಯಲ್ಲಿ ಬಲವಾಗಿ ಹರಿದಾಡುತ್ತಿರುವ ಈ ಸಮಯದಲ್ಲಿ, ವಿಜಯೇಂದ್ರಗೆ ವೈಯಕ್ತಿಕವಾಗಿ ಈ ವಿದ್ಯಮಾನ, ಹೈಕಮಾಂಡ್ ಅಂಗಣದಲ್ಲಿ ಯಾವ ರೀತಿ ತಿರುವನ್ನು ಪಡೆಯುತ್ತದೆ ಎನ್ನುವುದು ಕುತೂಹಲಕ್ಕೆ ಕಾರಣವಾಗಿದೆ. ಅಡ್ಡ ಮತದಾನ ಮಾಡಿದ ಬಿಜೆಪಿ ಶಾಸಕರು ಯಾರು ಎನ್ನುವ ಕೆಲವೊಂದು ಹೆಸರುಗಳು ಓಡಾಡುತ್ತಿದೆ. ಆದರೆ, ಇದು ಗೌಪ್ಯ ಮತದಾನದ ಪದ್ದತಿ ಮತ್ತು ಹೆಸರನ್ನು ಬಿಜೆಪಿ ಪ್ರಮುಖರು ಇನ್ನೂ ಬಹಿರಂಗ ಪಡಿಸಲಿಲ್ಲ. ಬಿಜೆಪಿಯ ಮೀರ್ ಸಾದಿಕ್ ಯಾರು ಎನ್ನುವುದನ್ನು ಸದ್ಯದಲ್ಲೇ ಪತ್ತೆ ಹಚ್ಚುವುದಾಗಿ ಆರ್.ಅಶೋಕ್ ಹೇಳಿದ್ದಾರೆ. ಒಟ್ಟು ಅಡ್ಡಮತದಾನವಾಗಿದ್ದದ್ದು ಎಷ್ಟು ಎನ್ನುವ ಬಗ್ಗೆಯೂ ಬಿಜೆಪಿ ನಾಯಕರಲ್ಲಿ ಗೊಂದಲವಿದೆ.

### ಬಿಜೆಪಿಗೆ ಭಾರೀ ಮುಜುಗರ

ಬಿಜೆಪಿಯ 4 ಶಾಸಕರು ಅಡ್ಡ ಮತದಾನ ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ಇದನ್ನು ಗಂಭೀರವಾಗಿ ಪರಿಗಣಿಸಿರುವ ಪಕ್ಷದ ಹೈಕಮಾಂಡ್ ರಾಜ್ಯ ನಾಯಕರಿಂದ ಮಾಹಿತಿ ಪಡೆದಿದೆ.



ಪ್ರತಿಷ್ಠೆಯಾಗಿದ್ದ ಮೇಲ್ಮನೆ ಚುನಾವಣೆಯಲ್ಲಿ ಪಕ್ಷದ ಶಾಸಕರು ವಿಪ್ ಉಲ್ಲಂಘಿಸಿ ಅಡ್ಡ ಮತದಾನ ಮಾಡಿರುವುದು ಬಿಜೆಪಿಗೆ ತೀವ್ರ ಮುಜುಗರ ತಂದಿದೆ.

ಮೂವರು ಶಾಸಕರು ನೇರವಾಗಿ ಅಡ್ಡಮತದಾನ ಮಾಡಿದ್ದರೆ ಒಬ್ಬ ಶಾಸಕರ ಮತ ಅಸಿಂಧುವಾಗಿದ್ದು, ಅದು ಸಹ ಉದ್ದೇಶಪೂರ್ವಕ ಕೃತ್ಯ ಎಂಬ ಮಾತಿದೆ.

### ದೋಸ್ತಿಗಳಲ್ಲೇ ಅಡ್ಡಮತದಾನದ ಸಂಖ್ಯೆ ಗೊಂದಲ

ಹೌದುಬಿಜೆಪಿ ಹಾಗೂ ಜೆಡಿಎಸ್ ದೋಸ್ತಿಗಳ ನಡುವೆ ಅಡ್ಡಮತದಾನದ ಸಂಖ್ಯೆಯ ಗೊಂದಲ ಸೃಷ್ಟಿಯಾಗಿದೆ. ಒಟ್ಟು 11 ಶಾಸಕರು ಅಡ್ಡಮತದಾನ ಮಾಡಿದ್ದಾರೆ ಅನ್ನೋದು ಅಧಿಕೃತ ಮಾಹಿತಿ. ಆದ್ರೆ ಈ ಸಂಖ್ಯೆಯಲ್ಲಿ ಬಿಜೆಪಿಯವರು ಎಷ್ಟು ಜೆಡಿಎಸ್ ಶಾಸಕರು ಇನ್ನೆಷ್ಟು ಎನ್ನುವ ಪ್ರಶ್ನೆ ಎದ್ದಿದೆ. ಕೇಂದ್ರ ಸಚಿವ ಕುಮಾರಸ್ವಾಮಿ ತಮ್ಮ ಪಕ್ಷದ ನಾಲ್ವರು ಶಾಸಕರು ಅಡ್ಡಮತದಾನ ಮಾಡಿರೋದಾಗಿ ಹೇಳ್ತಿದ್ದಾರೆ. ಆದ್ರೆ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ದಳ ಪಡೆಯ ಆರೇಳು ಶಾಸಕರು ಕ್ರಾಸ್ ವೋಟಿಂಗ್ ಮಾಡಿದ್ದಾರೆ ಅಂತಿದ್ದಾರೆ. ಹೀಗಾಗಿ ಮೈತ್ರಿ ನಾಯಕರ ನಡುವೆ ಅಂಕಿ ಸಂಖ್ಯೆಯ ಗೊಂದಲ ಇರುವುದು ಇಲ್ಲಿ ಕಾಣುತ್ತಿದೆ.ರಾಜ್ಯ ರಾಜಕಾರಣದಲ್ಲಿ ಬದಲಾಗುತ್ತಿರುವ ರಾಜಕೀಯ ಸಮೀಕರಣಗಳ ಪ್ರಭಾವ ಅಡ್ಡಮತದಾನದ ಮೇಲೆ ಬಿದ್ದಿದೆ ಅನ್ನೋದು ರಾಜಕೀಯ ವಿಶ್ಲೇಷಣೆ. ಕಾಂಗ್ರೆಸ್ ಬೆಂಬಲಿಸಿದವರಿಗೆ ಮುಂದಿನ ಚುನಾವಣೆಗೆ ಟಿಕೆಟ್, ಬಿಜೆಪಿ-ಜೆಡಿಎಸ್ ಶಾಸಕರ ಅಭಿವೃದ್ಧಿಗೆ ಅನುದಾನದ ಭರವಸೆ ಕೊಟ್ಟಿರೋ ಮಾತು ರಾಜಕೀಯ ಪಡಸಾಲೆಯಲ್ಲಿ ಹರಿದಾಡ್ತಿದೆ. ಕೇಸರಿ-ದಳ ಶಾಸಕರಿಗೆ ಸಕಲ ರೀತಿಯಲ್ಲಿ ಸಹಾಯ ಹಸ್ತ ಭರವಸೆ ಕಾರಣಕ್ಕೆ ಕ್ರಾಸ್ ವೋಟಿಂಗ್ ಆಗಿರೋದಾಗಿ ತಿಳಿದುಬಂದಿದೆ.

1 ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದ ಪಕ್ಷ ದ್ರೋಹಿಗಳ ಪತ್ತೆಗೆ ಬಿಜೆಪಿ ಸಮಿತಿ ರಚನೆ.

2 ಸಮಿತಿಯಲ್ಲಿ ಸಿಟಿ ರವಿ ಸೇರಿ 3 ಮಂದಿ ಹಿರಿಯರ ನೇಮಕ.

3 ಸತ್ಯಾಸತ್ಯತೆ ಮತ್ತು ವಾಸ್ತವಿಕತೆ ತಿಳಿಯಲು ಸಮಿತಿ ರಚನೆ ಎಂದ ಬಿವೈ ವಿಜಯೇಂದ್ರ.

**ವಿಜಯೇಂದ್ರ, ಅಶೋಕ್ ಕಾರ್ಯವೈಖರಿ ಬಂಡಾಯ ಬಜಾರಿ**

### ನಾಯಕರನ್ನು ಭೇಟಿ ಮಾಡುತ್ತಿರುವ ಶಾಸಕರು

ಅಡ್ಡಮತದಾನ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ಬಿಜೆಪಿಯ ಕೆಲ ಶಾಸಕರು, ತಮ್ಮ ನಾಯಕರುಗಳನ್ನ ಭೇಟಿ ಮಾಡುತ್ತಿದ್ದಾರೆ. ಬೈರತಿ ಬಸವರಾಜ್, ಚಂದ್ರು ಲಮಾಣಿ ಹಾಗೂ ಕೃಷ್ಣಾ ನಾಯ್ಕ್ ವಿರುದ್ಧ ಅಡ್ಡಮತದಾನ ಆರೋಪ ಕೇಳಿಬಂದಿದೆ. ಹೀಗಾಗಿ ಈ ಎಲ್ಲಾ ಶಾಸಕರು ರಾಜ್ಯಾಧ್ಯಕ್ಷ, ವಿಪಕ್ಷ ನಾಯಕರನ್ನು ಭೇಟಿ ಮಾಡಿ ಸ್ಪಷ್ಟನೆ ನೀಡಿದ್ದಾರೆ. ಈ ಬಗ್ಗೆ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಪ್ರತಿಕ್ರಿಯಿಸಿದ್ದು, ನಾವು ನಿಗದಿ ಮಾಡಿದ್ದ ನಾಲ್ಕ ಮತಗಳು ಜೆಡಿಎಸ್‌ಗೆ ಹೋಗಿವೆ.

ದುರ್ಯೋಧನ ಐಹೊಳೆ, ಚಂದ್ರು ಲಮಾಣಿ, ಕೃಷ್ಣಾ ನಾಯ್ಕ್ ಮತ್ತು ಯತ್ನಾಳ್ ಹೆಸರು ಮಾಧ್ಯಮದಲ್ಲಿ ಕೆಲವು ಬರುತ್ತಿರುವ ಕಾರಣ ಕೃಷ್ಣಾ ನಾಯ್ಕ್ ಮತ್ತು ಚಂದ್ರು ಲಮಾಣಿ ಬೇಸರಗೊಂಡಿದ್ದಾರೆ. ನಮ್ಮ ವರದಿ ಬರುವವರೆಗೂ ಯಾರ ಮೇಲೂ ಅನುಮಾನ ವ್ಯಕ್ತಪಡಿಸುವುದಿಲ್ಲ.

## ಶವರ್ಮಾ, ಕಬಾಬ್ ಪ್ರಿಯರಿಗೆ ಶಾಕ್ ..? ಕ್ಯಾನ್ಸರ್ ಕಾರಕ ಅಂಶ ಪತ್ತೆ

• ಉದಯವಾಹಿನಿ,ಬೆಂಗಳೂರು

ಶವರ್ಮಾ, ಕಬಾಬ್ ಪ್ರಿಯರಿಗೆ ಆಹಾರ ಸುರಕ್ಷತಾ ಇಲಾಖೆ ಶಾಕ್ ನೀಡಿದ್ದು, ಕ್ಯಾನ್ಸರ್ ಕಾರಕ ಅಂಶ ಪತ್ತೆಯಾಗಿದೆ. ಬೆಂಗಳೂರಿನ 39 ಕಡೆ ಶವರ್ಮಾ ಸ್ಯಾಂಪಲ್ ಸಂಗ್ರಹಿಸಲಾಗಿತ್ತು. 32 ಸ್ಯಾಂಪಲ್‌ನ್ನ ಲ್ಯಾಬ್‌ಗೆ ರವಾನೆ ಮಾಡಲಾಗಿತ್ತು. ಇದರಲ್ಲಿ 24 ಕಡೆ ಸುರಕ್ಷಿತ, 8 ಕಡೆ ಅಸುರಕ್ಷಿತ ಅಂತಾ ವರದಿ ಮಾಡಿದೆ. ಬಣ್ಣ ಬೆರೆಸಿ ಶವರ್ಮಾ ತಯಾರು ಮಾಡಿರೋದು ಬೆಳಕಿಗೆ ಬಂದಿದೆ. ಇನ್ನು, ಬೆಂಗಳೂರಿನ 16 ಕಡೆ ಕಬಾಬ್ ಸ್ಯಾಂಪಲ್ ಕಲೆಕ್ಷನ್ ಮಾಡಿದ್ದು, ಇದರಲ್ಲಿ 14 ಕಡೆ ಸೇಫ್, 2 ಕಡೆ ಅನ್ ಸೇಫ್ ಅಂತಾ ವರದಿ ಬಂದಿದೆ.

ಕಬಾಬ್‌ಗೆ ಕಲರ್ ಹಾಕಬಾರದು ಆದೇಶ ಇದ್ರೂ ಕಲರ್ ಬೆರಕೆ ಮಾಡ್ತಾ ಇರೋದು ಪತ್ತೆಯಾಗಿದೆ. ಕೆಲ ತಿಂಗಳ ಹಿಂದೆ ಕಾಟನ್ ಕ್ಯಾಂಡಿ, ಗೋಬಿ ಮಂಚೂರಿಯನ್‌ಗಳಲ್ಲಿ ಕೃತಕ ಬಣ್ಣಗಳ ಬಳಕೆಯನ್ನು ನಿಷೇಧಿಸಿದ್ದ ಸರ್ಕಾರ, ಕಬಾಬ್ ,ಶವರ್ಮಾಗಳ ಮೇಲೆಯೂ ತನ್ನ ನಿಗಾ ಇಟ್ಟಿತ್ತು.

## ಯತ್ನಾಳ್ ವಿರುದ್ಧದ ಪ್ರಕರಣಗಳನ್ನ ರದ್ದು ಪಡಿಸಿದ ಹೈಕೋರ್ಟ್

• ಉದಯವಾಹಿನಿ, ಬೆಂಗಳೂರು

ದಿನೇಶ್‌ಗುಂಡೂರಾವ್ ಮನೆಯಲ್ಲಿ ಅರ್ಧ ಪಾಕಿಸ್ತಾನ ಇದೆ ಎಂಬುದಾಗಿ ಆಕ್ಷೇಪಾರ್ಹ ಹೇಳಿಕೆ ಹಾಗೂ ಪ್ರಚೋದನಕಾರಿ ಭಾಷಣದ ಮಾಡಿದ ಆರೋಪದಲ್ಲಿ ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ವಿರುದ್ಧ ರಾಜ್ಯದ ವಿವಿಧ ನಾಲ್ಕು ಪೊಲೀಸ್ ಠಾಣೆಗಳಲ್ಲಿ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣಗಳನ್ನು ಹೈಕೋರ್ಟ್ ರದ್ದುಪಡಿಸಿದೆ. ತಮ್ಮ ವಿರುದ್ಧ ವಿಜಯಪುರದ ಗಾಂಧಿ ಚೌಕ್, ಬೆಂಗಳೂರಿನ ಸಂಜಯ್‌ನಗರ, ಬೆಳಗಾವಿ ಜಿಲ್ಲೆ ಬೈಲಹೊಂಗಲ, ಬಾಗಲಕೋಟೆ ಜಿಲ್ಲೆ ಮುಧೋಳ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಎಫ್‌ಐಆರ್‌ಗಳು ಮತ್ತು ಅದಕ್ಕೆ ಸಂಬಂಧಿಸಿದ ವಿಚಾರಣಾ ಪ್ರಕ್ರಿಯೆ ರದ್ದು ಕೋರಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಗಳನ್ನು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಆದೇಶ ನೀಡಿದೆ.

ಸುಪ್ರೀಂಕೋರ್ಟ್‌ನ ವಿವಿಧ ಪ್ರಕರಣಗಳನ್ನು ಉಲ್ಲೇಖಿಸಿದ ನ್ಯಾಯಪೀಠ, ಅರ್ಜಿದಾರರ ಭಾಷಣ ಪ್ರಚೋದನೆ ನೀಡಿದಂತಾಗುವುದಿಲ್ಲ ಎಂದು ತಿಳಿಸಿ ಪ್ರಕರಣವನ್ನು ರದ್ದುಪಡಿಸಿ ಆದೇಶಿಸಿದೆ.

**ಪ್ರಕರಣ:** ಕಳೆದ ಲೋಕಸಭೆ ಚುನಾವಣೆ ಸಂದರ್ಭದಲ್ಲಿ ವಿಜಯಪುರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡುತ್ತ ಸಚಿವ ದಿನೇಶ್ ಗುಂಡೂರಾವ್ ಅವರ ಮನೆಯಲ್ಲಿ ಪಾಕಿಸ್ತಾನ ಇದೆ ಎಂದು ಹೇಳಿದ್ದರು. ಈ ಸಂಬಂಧ ವಿಜಯಪುರದ ಗಾಂಧಿ ಚೌಕ್ ಪೊಲೀಸ್ ಠಾಣೆಯಲ್ಲಿ ಚುನಾವಣಾ ಕರ್ತವ್ಯದಲ್ಲಿದ್ದ ಅಧಿಕಾರಿ 2024ರ ಏಪ್ರಿಲ್‌ನಲ್ಲಿ ದೂರು ದಾಖಲಿಸಿದ್ದರು.

## ಕುಟುಂಬ ಸಮೇತರಾಗಿ ತಿರುಪತಿ ವೆಂಕಟೇಶ್ವರಸ್ವಾಮಿ ದರ್ಶನ ಪಡೆದ ಡಿಕೆಶಿ

• ಉದಯವಾಹಿನಿ, ಬೆಂಗಳೂರು

ಮೊದಲಿನಿಂದಲೂ ದೇವರಲ್ಲಿ ಅಪಾರ ಭಕ್ತಿ, ನಂಬಿಕೆ ಹೊಂದಿರುವ ಸಿಎಂ ಡಿ.ಕೆ ಶಿವಕುಮಾರ್ ಅವರು ರಾಜ್ಯದ ಒಂದಿಲ್ಲೊಂದು ದೇವಸ್ಥಾನಗಳಿಗೆ ಭೇಟಿ ನೀಡುತ್ತಲೇ ಇರುತ್ತಾರೆ. ಕುಟುಂಬ ಸಮೇತರಾಗಿ ತೆರಳಿ ವಿಶೇಷ ಪೂಜೆ ಸಲ್ಲಿಸಿ, ದೇವರಲ್ಲಿ ಪ್ರಾರ್ಥಿಸುತ್ತಾರೆ. ಅದೇ ರೀತಿ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಭರ್ಜರಿ ಗೆಲುವು ಸಾಧಿಸಿದ ಬೆನ್ನಲ್ಲೇ ಸಿಎಂ ಡಿ.ಕೆ ಶಿವಕುಮಾರ್ ಅವರು ಪತ್ನಿ ಉಷಾ ಅವರ ಜೊತೆ ತಿರುಪತಿ ತಿರುಮಲ ದೇವಸ್ಥಾನಕ್ಕೆ ತೆರಳಿದ್ದಾರೆ. ಶುಕ್ರವಾರ ತೆರಳಿ ವೆಂಕಟೇಶ್ವರ ದೇವರ ದರ್ಶನ ಪಡೆದಿದ್ದಾರೆ. ದೇವಸ್ಥಾನದಲ್ಲಿ ಸೆರೆ ಹಿಡಿದ ಫೋಟೋಗಳನ್ನ ತಮ್ಮ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ತಿರುಪತಿಯ ಶ್ರೀ ವೆಂಕಟೇಶ್ವರ ಸ್ವಾಮಿಯ ಸನ್ನಿಧಿಗೆ ಧರ್ಮಪತ್ನಿಯೊಂದಿಗೆ ಭೇಟಿ ನೀಡಿ, ದೇವರ ದಿವ್ಯ ದರ್ಶನ ಪಡೆದು ನಾಡಿನ ಒಳಿತಿಗಾಗಿ ಪ್ರಾರ್ಥಿಸಿದ್ದೇನೆ. ಜಗದೋದ್ಧಾರಕ ಶ್ರೀನಿವಾಸನ ಅನುಗ್ರಹವೂ ಪ್ರತಿಯೊಬ್ಬರ ಮೇಲಿರಲಿ, ನಾಡು ಸಮೃದ್ಧಿಯಾಗಲಿ ಎಂದು ಆಶಿಸಿದ್ದಾರೆ.

ನಗರ ದೇವತೆ ಅಣ್ಣಮ್ಮ ದೇವಿ (ದೇವಸ್ಥಾನಕ್ಕೆ ಬಂದು ಮುಖ್ಯಮಂತ್ರಿಗಳು ಹರಕೆ ತೀರಿಸಿದ್ದರು. ರಾಜ್ಯದ ಮುಖ್ಯಮಂತ್ರಿಯಾದರೆ, ಅಣ್ಣಮ್ಮದೇವಿ ಸನ್ನಿಧಾನಕ್ಕೆ ಬಂದು ಹರಕೆ ತೀರಿಸುವುದಾಗಿ ಹರಕೆ ಹೊತ್ತಿದ್ದ ಡಿಕೆಶಿ ನುಡಿದಂತೆ ನಡೆದುಕೊಂಡಿದ್ದರು. ಉಪ್ಪು, ಮೊಸರು ಹಾಕಿ, ಸುಃಖ, ಶಾಂತಿ, ನೆಮ್ಮದಿ ನೀಡುವಂತೆ ಪ್ರಾರ್ಥಿಸಿದ್ದಾರೆ. ತಾಯಿ ಅಣ್ಣಮಗೆ ನಮಿಸಿ ಆಶೀರ್ವಾದ ಪಡೆದುಕೊಂಡಿದ್ದರು. ಇದೇ ವೇಳೆ ಬಿಸಿಲು ಮಾರಮ್ಮನಿಗೂ ಉಪ್ಪು, ಮೊಸರು ಹಾಕಿ ನಮಿಸಿದ್ದರು.

## ಶುರುವಾಯ್ತಾ ಮೈತ್ರಿ ಕುಸ್ತಿ ಹೆಚ್‌ಡಿ ರೇವಣ್ಣಗೆ ಮಾತಾಡೋ ಅಧಿಕಾರವಿಲ್ಲ: ಅಶೋಕ್ ತಿರುಗೇಟು

• ಉದಯವಾಹಿನಿ,ಬೆಂಗಳೂರು

ಮಾಜಿ ಸಂಸದೆ ಸುಮಲತಾ ಅಂಬರೀಶ್‌ಗೆ ಬಿಜೆಪಿ ರಾಜ್ಯಸಭಾ ಟಿಕೆಟ್ ನೀಡುವ ವಿಚಾರದಲ್ಲಿ ಭರವಸೆ ನೀಡಿ ನಂತರ ನಿರಾಕರಿಸಿದೆ ಎಂಬರ್ಥದಲ್ಲಿ ಜೆಡಿಎಸ್ ಶಾಸಕ ಹೆಚ್‌ಡಿ ರೇವಣ್ಣ ನೀಡಿರುವ ಹೇಳಿಕೆಗೆ ವಿಪಕ್ಷ ನಾಯಕ ಆರ್. ಅಶೋಕ್ ತೀವ್ರವಾಗಿ ಪ್ರತಿಕ್ರಿಯೆ ನೀಡಿದ್ದಾರೆ. ರೇವಣ್ಣ ಈ ಹೇಳಿಕೆಯು ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿತ್ತು. ಇದಕ್ಕೆ ಪ್ರತಿಕ್ರಿಯೆ ನೀಡಿದ ಆರ್. ಅಶೋಕ್, ಇದು ತಮ್ಮ ಪಕ್ಷದ ಆಂತರಿಕ ವಿಚಾರ ಎಂದು ಸ್ಪಷ್ಟಪಡಿಸಿದರು. ಈ ಬಗ್ಗೆ ಜೆಡಿಎಸ್ ಪಕ್ಷದ ನಾಯಕರಾದ ಹೆಚ್.ಡಿ. ರೇವಣ್ಣಗಾಗಲಿ ಅಥವಾ ಇತರ ಯಾವುದೇ ಹೊರಗಿನವರಿಗಾಗಲಿ ಮಾತನಾಡುವ ಅಧಿಕಾರ ಇಲ್ಲ ಎಂದು ಅವರು ಖಡಾಖಂಡಿತವಾಗಿ ಹೇಳಿದ್ದಾರೆ.

ಬಿಜೆಪಿ ಯಾರಿಗೂ ರಾಜ್ಯಸಭಾ ಟಿಕೆಟ್ ಭರವಸೆ ನೀಡಿರಲಿಲ್ಲ ಎಂದು ಆರ್. ಅಶೋಕ್ ಸ್ಪಷ್ಟಪಡಿಸಿದ್ದಾರೆ. ಪಕ್ಷದ ನಿಯಮಾನುಸಾರ, ನಾವು ನಮ್ಮ ನಿಷ್ಠಾವಂತ ಕಾರ್ಯಕರ್ತರಿಗೆ ಮಾತ್ರ ರಾಜ್ಯಸಭಾ ಟಿಕೆಟ್ ನೀಡಿದ್ದೇವೆ.

## ಬಿಡದಿ ಟೌನ್‌ಶಿಪ್ ಅಧಿಸೂಚನೆ ರದ್ದತಿಗೆ ಜೆಡಿಎಸ್ ಆಗ್ರಹ

• ಉದಯವಾಹಿನಿ, ಬೆಂಗಳೂರು

ಬಿಡದಿ ಮತ್ತು ಹಾರೋಹಳ್ಳಿ ಹೋಬಳಿಯ ಅತ್ಯಂತ ಫಲವತ್ತಾದ ಕೃಷಿ ಭೂಮಿ ಸ್ವಾಧೀನಪಡಿಸಿಕೊಳ್ಳಲು ಹೊರಡಿಸಿರುವ ಅಂತಿಮ ಅಧಿಸೂಚನೆಯನ್ನು ರದ್ದುಗೊಳಿಸಬೇಕು ಎಂದು ಆಗ್ರಹಿಸಿ ಜೆಡಿಎಸ್ ರಾಜ್ಯದ ಮುಖ್ಯ ಕಾರ್ಯದರ್ಶಿ ಅವರಿಗೆ ಮನವಿ ಮಾಡಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಜೆಡಿಎಸ್ ಅಧ್ಯಕ್ಷ ಎಚ್.ಎಂ.ರಮೇಶ್‌ಗೌಡ ಅವರ ನೇತೃತ್ವದಲ್ಲಿ ಜೆಡಿಎಸ್ ನಿಯೋಗ ಮುಖ್ಯ ಕಾರ್ಯದರ್ಶಿಯವರಿಗೆ ಮನವಿ ಪತ್ರ ಸಲ್ಲಿಸಿದೆ.

ಇದಕ್ಕೂ ಮುನ್ನ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಮೇಶ್‌ಗೌಡ, ಬಿಡದಿ ಟೌನ್‌ಶಿಪ್‌ಗೆ 7,500 ಎಕರೆ ಭೂ ಸ್ವಾಧೀನ ಪ್ರಕ್ರಿಯೆಯನ್ನು ಆರಂಭದಲ್ಲೇ ಕೈಬಿಡಬೇಕು. ಮಾಸಿಕ 6 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ರೇಷ್ಮೆ, ತೋಟಗಾರಿಕೆ ಅವಲಂಬಿಸಿರುವ ರೈತರು ಟೌನ್‌ಶಿಪ್ ಅನ್ನು ವಿರೋಧಿಸುತ್ತಿದ್ದಾರೆ ಎಂದರು.

ಟೌನ್‌ಶಿಪ್ ವಿರೋಧಿಸಿ ಒಂದು ವರ್ಷಕ್ಕೂ ಹೆಚ್ಚು ಕಾಲದಿಂದ ರೈತರು ಪ್ರತಿಭಟನಾ ಧರಣಿ ನಡೆಸುತ್ತಿದ್ದಾರೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ರವರು ಹಠಕ್ಕೆ ಬಿದ್ದು ಯೋಜನೆಯನ್ನು ಪ್ರತಿಷ್ಠೆಯಾಗಿ ಪರಿಗಣಿಸಿದ್ದಾರೆ. ಈ ಯೋಜನೆಯನ್ನು ತೀವ್ರವಾಗಿ ವಿರೋಧಿಸಿ ರೈತರಿಗೆ ಬೆಂಬಲ ವ್ಯಕ್ತಪಡಿಸಿದ್ದೇವೆ ಎಂದು ಹೇಳಿದರು. ಸರ್ಕಾರಿ ಸ್ವಾಮ್ಯದ ಬಿಡಿಎ,



ಬಿಎಂಆರ್‌ಡಿಎ, ಕೆಎಚ್‌ಬಿ ಇದ್ದರೂ ಖಾಸಗಿ ಸಹಭಾಗಿತ್ವದಲ್ಲಿ ಟೌನ್‌ಶಿಪ್ ಮಾಡಲು ಸರ್ಕಾರ ಮುಂದಾಗಿದೆ. ಖಾಸಗಿಯವರು ಪಡೆಯುವ ಬ್ಯಾಂಕ್ ಸಾಲಕ್ಕೆ ಸರ್ಕಾರವೇ ಖಾತ್ರಿ ಕೊಡಬೇಕಿದೆ ಎಂದರು. ಈಗಾಗಲೇ ಆರಂಭಿಸಿದ ಅರ್ಕಾವತಿ, ಶಿವರಾಮ ಕಾರಂತ ಬಡಾವಣೆಗಳೇ ಪೂರ್ಣಗೊಂಡಿಲ್ಲ. ಅಲ್ಲಿ ಜಮೀನು ಕಳೆದುಕೊಂಡವರು ಇನ್ನೂ ಸಂಕಷ್ಟದಲ್ಲಿದ್ದಾರೆ. ಬಿಡದಿ ಭಾಗದ ರೈತರನ್ನು ಟೌನ್‌ಶಿಪ್ ಮೂಲಕ ಮತ್ತಷ್ಟು ಸಂಕಷ್ಟದ ಕೂಪಕ್ಕೆ ತಳ್ಳಲಾಗುತ್ತದೆ ಎಂದು ಆರೋಪಿಸಿದರು.

ಮಾಗಡಿ ಶಾಸಕ ಎಚ್.ಸಿ.ಬಾಲಕೃಷ್ಣ ಅವರು ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ವಾಸ್ತವಾಂಶವನ್ನು ತಿಳಿಸಬೇಕು ಎಂದು ಆಗ್ರಹಿಸಿದ ಅವರು, ಜೂ. 20 ರಂದು ಜೆಡಿಎಸ್ ಯುವಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹಾಗೂ ಮಾಜಿ ಶಾಸಕ ಎ.ಮಂಜುನಾಥ್ ನೇತೃತ್ವದಲ್ಲಿ ಪಾದಯಾತ್ರೆ ನಡೆಸಲಾಗುತ್ತದೆ ಎಂದರು.

## ಗ್ಯಾರಂಟಿ ಯೋಜನೆಗಳ ಬಗ್ಗೆ ಕಟ್ಟುನಿಟ್ಟಿನ ಕ್ರಮ

• ಉದಯವಾಹಿನಿ, ಬೆಂಗಳೂರು

ವಿವಿಧಾನಸೌಧದಲ್ಲಿ ನಡೆದ ಗ್ಯಾರಂಟಿ ಯೋಜನೆಗಳಅನುಷ್ಠಾನದ ಹಿರಿಯ ಅಧಿಕಾರಿಗಳು ಹಾಗೂ ಸಚಿವರ ಉನ್ನತ ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ. ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಲಾಭ ಪಡೆಯುತ್ತಿರುವ ಒಬ್ಬನೇ ಒಬ್ಬ ಅರ್ಹ ಫಲಾನುಭವಿಗೂ ತೊಂದರೆಯಾಗಬಾರದು. ಆದರೆ, ಯೋಜನೆಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿರುವ ಅನರ್ಹರಿಗೆ ಮಾತ್ರ ತಕ್ಷಣವೇ ಬ್ರೇಕ್ ಹಾಕಬೇಕು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಮರಣ ಹೊಂದಿದ ಫಲಾನುಭವಿಗಳ ವಿವರಗಳು ಸಕಾಲದಲ್ಲಿ ಸಿಗದೇ ಇರುವುದರಿಂದ, ಮೃತಪಟ್ಟವರ ಖಾತೆಗಳಿಗೂ ಗೃಹಲಕ್ಷ್ಮಿ ಹಣ ಜಮೆಯಾಗುತ್ತಿರುವುದು ಪತ್ತೆಯಾಗಿದೆ. ಇನ್ನು ಮುಂದೆ ಇ-ಕೆವೈಸಿ ಪ್ರಕ್ರಿಯೆಯನ್ನು ಕಡ್ಡಾಯಗೊಳಿಸಿ ಇದಕ್ಕೆ ತಡೆ ಒಡ್ಡಲು ನಿರ್ಧರಿಸಲಾಗಿದೆ. ಗ್ಯಾರಂಟಿ ಯೋಜನೆಯ ಹಣ ಪಡೆಯುವ ಫಲಾನುಭವಿಗಳ ಬ್ಯಾಂಕ್ ಖಾತೆಗಳು ಕರ್ನಾಟಕ ರಾಜ್ಯದಲ್ಲೇ ಇರಬೇಕು. ಆದರೆ, ಬೇರೆ ರಾಜ್ಯಗಳ ಬ್ಯಾಂಕ್ ಖಾತೆಗಳಿಗೆ ಹಣ ಹೋಗುತ್ತಿರುವುದು ಪತ್ತೆಯಾಗಿದ್ದು, ಇತರೆ ರಾಜ್ಯಗಳ ಮತದಾರರು ಇದರ ಲಾಭ ಪಡೆಯುತ್ತಿರುವುದನ್ನು ತಡೆಯಲು ಸೂಚಿಸಿದ್ದಾರೆ. ಏರ್‌ಟೆಲ್



ಪೇಮೆಂಟ್ಸ್ ಬ್ಯಾಂಕ್‌ನಲ್ಲಿ ಯುಪಿಐ ಖಾತೆಗಳನ್ನು ಸೃಷ್ಟಿಸಿ ಯೋಜನೆಯ ಹಣವನ್ನು ದುರುಪಯೋಗಪಡಿಸಿಕೊಳ್ಳುತ್ತಿರುವ ಪ್ರಕರಣಗಳನ್ನು ಸಹ ಅಧಿಕಾರಿಗಳು ಸಭೆಯ ಗಮನಕ್ಕೆ ತಂದಿದ್ದಾರೆ.

ಅನರ್ಹರನ್ನು ತಡೆಯುವಾಗ ನಿಜವಾದ ಬಡವರಿಗೆ ಸಮಸ್ಯೆಯಾಗಬಾರದು ಎಂದು ಸಿಎಂ ಡಿಕೆ ಶಿವಕುಮಾರ್ ಕೆಲವು ಪ್ರಮುಖ ನಿರ್ದೇಶನಗಳನ್ನು ನೀಡಿದ್ದಾರೆ.

ಹಲವು ಫಲಾನುಭವಿಗಳು ಬ್ಯಾಂಕ್ ಸಾಲ ಪಡೆದಿದ್ದು, ಗೃಹಲಕ್ಷ್ಮಿ ಹಣ ಜಮೆಯಾದ ತಕ್ಷಣ ಬ್ಯಾಂಕಿನವರು ಅದನ್ನು ಸಾಲದ ಮೊತ್ತಕ್ಕೆ ಕಡಿತ ಮಾಡಿಕೊಳ್ಳುತ್ತಿದ್ದಾರೆ.

ಹೀಗಾಗಿ ಫಲಾನುಭವಿಗಳು ತಮ್ಮ ಖಾತೆಗಳನ್ನು ಬದಲಾಯಿಸುತ್ತಿದ್ದು, ಅಂತಹ ಖಾತೆ ಬದಲಾವಣೆ ಪ್ರಕ್ರಿಯೆಯಲ್ಲಿ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲು ಸೂಚಿಸಲಾಗಿದೆ. ಗೃಹಲಕ್ಷ್ಮಿ ಯೋಜನೆಯ ಹಣ ಖಾತೆಗೆ ಜಮೆಯಾದ ತಕ್ಷಣ ಫಲಾನುಭವಿಗಳಿಗೆ ವಾಯ್ಸ್ ಮೆಸೇಜ್ ಮೂಲಕ ಮಾಹಿತಿ ನೀಡುವ ತಂತ್ರಜ್ಞಾನ ತರಲು ಸೂಚಿಸಿದ್ದಾರೆ.

# ಮೇಕೇದಾಟು ಕ್ಯಾತೆ ನಡುವೆಯೇ ಕರ್ನಾಟಕಕ್ಕೆ ಮತ್ತೊಂದು ತಲೆಬಿಸಿ

• ಉದಯವಾಹಿನಿ, ಬೆಂಗಳೂರು

ಕಾವೇರಿ ನದಿ ನೀರಿನ ವಿಚಾರವಾಗಿ ಕರ್ನಾಟಕ ಮತ್ತು ತಮಿಳುನಾಡು ನಡುವಿನ ವಿವಾದಕ್ಕೆ ಬಹುದೊಡ್ಡ ಇತಿಹಾಸವೇ ಇದೆ. ನೀರು ಹಂಚಿಕೆ ಸೇರಿ ಮೇಕೆದಾಟು ಯೋಜನೆಗೆ ನೆರೆ ರಾಜ್ಯದಿಂದ ಕ್ಯಾತೆ ನಡೆದುಕೊಂಡೇ ಬಂದಿದ್ದು, ಈ ನಡುವೆ ಮಳೆಯ ತೀವ್ರ ಅಭಾವದ ಕಾರಣ ಕಾವೇರಿ ನದಿ ಒಡಲು ಸಂಪೂರ್ಣ ಬರಿದಾಗಿರೋದು ಕರ್ನಾಟಕಕ್ಕೆ ಟೆನ್ಷನ್ ಹೆಚ್ಚಿಸಿದೆ. ಪರಿಸ್ಥಿತಿ ಹೀಗೆ ಮುಂದುವರಿದರೆ ತಮಿಳುನಾಡಿಗೆ ನೀರು ನೀಡೋದು ಹಾಗಿರಲಿ ಮೈಸೂರು, ಬೆಂಗಳೂರಿನಲ್ಲಿಯೇ ಕುಡಿಯುವ ನೀರಿಗೂ ಪರದಾಟ ನಡೆಸಬೇಕಾದ ಸ್ಥಿತಿ ಬರಬಹುದೆಂಬ ಆತಂಕ ಶುರುವಾಗಿದೆ. ಜೂನ್ ತಿಂಗಳಲ್ಲಿ ಧಾರಾಕಾರ ಮಳೆ ನಿರೀಕ್ಷಿಸಲಾಗಿದ್ದ ಕೊಡಗು ಜಿಲ್ಲೆಯ ಕಾವೇರಿ ನದಿ ಪಾತ್ರದಲ್ಲಿ, ನದಿ ಹರಿವು ಗಣನೀಯವಾಗಿ ಕುಸಿದಿದೆ.

ಕೊಡಗು-ಮೈಸೂರು ಗಡಿಯಲ್ಲಿರುವ ಕೊಪ್ಪ ಸೇತುವೆ ಬಳಿ ಕಾವೇರಿ ನದಿಯ ಸ್ಥಿತಿಗತಿ ಪರಿಶೀಲಿಸಿದಾಗ, ಸಾಮಾನ್ಯವಾಗಿ 10-15 ಅಡಿ ಹರಿಯಬೇಕಿದ್ದ ನದಿ ಈಗ ಕೇವಲ ಅರ್ಧದಿಂದ ಒಂದು ಅಡಿ ನೀರಿಗೆ ಸೀಮಿತವಾಗಿದೆ. ನದಿಯ ಒಡಲು




ಕಲ್ಲುಗಳಿಂದ ಕೂಡಿದ್ದು, ಜಲಮಾಪಕದಲ್ಲಿ ನೀರು ಶೂನ್ಯ ಮಟ್ಟವನ್ನು ತಲುಪಿದೆ. ಕಾವೇರಿ ನದಿಯ ಪ್ರಮುಖ ಜಲಾಶಯಗಳಾದ ಕೆಆರ್‌ಎಸ್ ಮತ್ತು ಹಾರಂಗಿ ಸಹ ತುಂಬದೆ ಇರುವುದರಿಂದ ಮುಂಬರುವ ದಿನಗಳಲ್ಲಿ ಜಲಸಂಕಷ್ಟ ಮತ್ತಷ್ಟು ಹೆಚ್ಚಾಗುವ ಸಾಧ್ಯತೆಯಿದೆ. 49 ಟಿಎಂಸಿ ಸಾಮರ್ಥ್ಯ ಹೊಂದಿರುವ ಕೆಆರ್‌ಎಸ್ ಡ್ಯಾಂನಲ್ಲಿ ಈಗ ಲಭ್ಯವಿರೋದು ಕೇವಲ 11 ಟಿಎಂಸಿ ಮಾತ್ರ. ಹಾಗೆಯೇ 5.7 ಟಿಎಂಸಿ ಗರಿಷ್ಠ ಸಾಮರ್ಥ್ಯವಿರುವ ಹಾರಂಗಿ ಜಲಾಶಯದಲ್ಲಿ ಈಗ 2.3 ಟಿಎಂಸಿ ಮಾತ್ರ ಲಭ್ಯವಿದ್ದು, ಆ ಪೈಕಿ ಬಳಕೆಗೆ ಸಿಗೋದು 1.3 ಟಿಎಂಸಿ ಮಾತ್ರ. ಜಲಾಶಯದ ಒಳಹರಿವು 255 ಕ್ಯೂಸೆಕ್ ಇದ್ದರೆ ಹೊರ ಹರಿವು 180 ಕ್ಯೂಸೆಕ್‌ನಷ್ಟಿದೆ. ಕಳೆದ ವರ್ಷ ಇದರ ಪ್ರಮಾಣ 2853 ಮತ್ತು 3416 ಕ್ಯೂಸೆಕ್‌ಗಳಷ್ಟಿತ್ತು ಎನ್ನುವುದಿಲ್ಲಿ ಗಮನಾರ್ಹ ವಿಷಯವಾಗಿದೆ. ಮತ್ತೊಂದೆಡೆ ಕಬಿನಿ ಜಲಾಶಯದಲ್ಲಿಯೂ ನೀರಿನ ಸಂಗ್ರಹ ಆತಂಕಕಾರಿ ಮಟ್ಟಕ್ಕೆ ತಲುಪಿದೆ.

ಶುಕ್ರವಾರ (ಜೂನ್ 19) ಬೆಳಗ್ಗೆ 8 ಗಂಟೆಯ ವೇಳೆಗೆ ಜಲಾಶಯದ ನೀರಿನ ಮಟ್ಟ 53.38 ಅಡಿ ಇದ್ದು, ಒಟ್ಟು 5.05 ಟಿಎಂಸಿ ನೀರು ಸಂಗ್ರಹವಾಗಿದೆ. ಜಲಾಶಯದ ಗರಿಷ್ಠ ಮಟ್ಟ 84 ಅಡಿ ಹಾಗೂ ಗರಿಷ್ಠ ಸಂಗ್ರಹ ಸಾಮರ್ಥ್ಯ 19.52 ಟಿಎಂಸಿ ಆಗಿದೆ. ಜಲಾಶಯಕ್ಕೆ ಪ್ರಸ್ತುತ 796 ಕ್ಯೂಸೆಕ್ ನೀರು ಮಾತ್ರ ಒಳಹರಿದು ಬರುತ್ತಿದ್ದು, ನದಿಗೆ ಹಾಗೂ ಎಡ ಮತ್ತು ಬಲದಂಡೆ ಕಾಲುವೆಗಳಿಗೆ ಯಾವುದೇ ನೀರು ಬಿಡುಗಡೆ ಮಾಡಲಾಗುತ್ತಿಲ್ಲ. ಹೀಗಾಗಿ ಒಟ್ಟು ಹೊರಹರಿವು ಶೂನ್ಯ ಕ್ಯೂಸೆಕ್ ಆಗಿದೆ. ಕಳೆದ ವರ್ಷದ ಇದೇ ದಿನಕ್ಕೆ ಹೋಲಿಸಿದರೆ ಕಬಿನಿ ಜಲಾಶಯದಲ್ಲಿ ನೀರಿನ ಮಟ್ಟ ಮತ್ತು ಸಂಗ್ರಹ ಎರಡೂ ಗಣನೀಯವಾಗಿ ಕಡಿಮೆಯಾಗಿದೆ.

### ಮೇಕೆದಾಟು ವಿರೋಧಿಸಿ ತಮಿಳುನಾಡು ನಿರ್ಣಯ

ಕರ್ನಾಟಕ ಸರ್ಕಾರವು ಉದ್ದೇಶಿಸಿರುವ ಮೇಕೆದಾಟು ಯೋಜನೆಗೆ ತಮಿಳುನಾಡು ತೀವ್ರ ವಿರೋಧ ವ್ಯಕ್ತಪಡಿಸಿದ್ದು, ತಮಿಳುನಾಡು ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಅವರು ಮಂಡಿಸಿದ ಮೇಕೆದಾಟು ವಿರೋಧಿ ನಿರ್ಣಯವನ್ನು ಸದನವು ಸರ್ವಾನುಮತದಿಂದ ಅಂಗೀಕರಿಸಿದೆ.

ಈ ಯೋಜನೆಗೆ ಯಾವುದೇ ರೀತಿಯ ತಾಂತ್ರಿಕ ಅಥವಾ ಪರಿಸರ ಇಲಾಖೆಯ ಅನುಮತಿಯನ್ನು ನೀಡಬಾರದು ಎಂದು ತಮಿಳುನಾಡು ಸರ್ಕಾರವು ಈ ನಿರ್ಣಯದ ಮೂಲಕ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

**ಈ ದಿನದ ದರ** ಪೆಟ್ರೋಲ್: 110.93 ₹/L ಡೀಸೆಲ್ : 99.80₹/L ಬಂಗಾರ: ₹ 14,951/Gram 24ct ₹13,705/Gram 22ct ಬೆಳ್ಳಿ: ₹250.00/Gram

# ಮಾವು ಬೆಳೆಗಾರರಿಗೆ ಬೆಂಬಲ ಬೆಲೆಗೆ ಮನವಿ

• ಉದಯವಾಹಿನಿ, ಕೋಲಾರ


ಉದಯವಾಹಿನಿ ಚಿತ್ರ

ಬೆಲೆ ಕುಸಿತದಿಂದ ಕಂಗೆಟ್ಟಿರುವ ಮಾವಿನ ರಾಜಧಾನಿ ಶ್ರೀನಿವಾಸಪುರ ಸೇರಿದಂತೆ ರಾಜ್ಯದ ಮಾವು ಬೆಳೆಗಾರರ ನೆರವಿಗೆ ಧಾವಿಸುವಂತೆ ವಿಧಾನಪರಿಷತ್ ಮಾಜಿ ಮುಖ್ಯ ಸಚೇತಕ ಡಾ.ವೈ.ಎ.ನಾರಾಯಣಸ್ವಾಮಿ ಅವರು, ಕೇಂದ್ರದ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ.

ಈ ಸಂಬಂಧ ಪತ್ರ ಬರೆದಿರುವ ಅವರು, ಕರ್ನಾಟಕವು ಗಮನಾರ್ಹವಾದ ಮಾವು ಬೆಳೆಯುವ ಪರಿಸರ ವ್ಯವಸ್ಥೆಯನ್ನು ಹೊಂದಿದ್ದು, ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯ ರೈತರ ಆದಾಯ ಮತ್ತು ಜೀವನೋಪಾಯವನ್ನು ಈ ಬೆಳೆ ಉಳಿಸಿಕೊಳ್ಳುತ್ತದೆ.

ಜೂ.2026ರಲ್ಲಿ, ಕೋಲಾರ, ಚಿಕ್ಕಬಳ್ಳಾಪುರ ಮತ್ತು ರಾಮನಗರದಂತಹ ಪ್ರಮುಖ ಮಾರುಕಟ್ಟೆಗಳಲ್ಲಿ ತೋತಾಪುರಿ ಮಾವಿನ ಮಾದರಿ ಬೆಲೆಗಳು ಗಮನಾರ್ಹವಾಗಿ ಕಡಿಮೆಯಾದವು, ಇದು ಬೆಳೆಗಾರರಿಗೆ ಗಂಭೀರ ತೊಂದರೆಯನ್ನುಂಟುಮಾಡಿದ್ದು, ರೈತರು ತೀವ್ರ ಸಂಕಷ್ಟಕ್ಕಿಡಾಗಿದ್ದಾರೆ ಎಂದು ತಿಳಿಸಿದ್ದಾರೆ.

ಪ್ರತಿಕೂಲ ಹವಾಮಾನ ಪರಿಸ್ಥಿತಿಗಳಿಂದಾಗಿ, ಮಾವಿನ ಉತ್ಪಾದನೆ ಕುಸಿದಿದೆ, ಮತ್ತು ಕಡಿಮೆ ಮಾರುಕಟ್ಟೆ ಬೆಲೆಗಳು ರೈತರಿಗೆ ಆರ್ಥಿಕ ನಷ್ಟವನ್ನುಂಟುಮಾಡಿವೆ ಮತ್ತು ಗಂಭೀರ ಸಂಕಷ್ಟಕ್ಕೆ ದೂಡಿವೆ. ತೋತಾಪುರಿ ಮಾವು ಬೆಳೆಗಾರರ ಹಿತಾಸಕ್ತಿಗಳನ್ನು ಕಾಪಾಡುವ ದೃಷ್ಟಿಯಿಂದ, ಹಿಂದಿನ ವರ್ಷದಂತೆ ಪ್ರಸಕ್ತ ವರ್ಷವೂ ಬೆಲೆ ಕೊರತೆ ಪಾವತಿ ಯೋಜನೆ (ಪಿಡಿಪಿಎಸ್) ಅಡಿಯಲ್ಲಿ ಮಾವು ಬೆಳೆಗಾರರನ್ನು ಬೆಂಬಲಿಸುವಂತೆ ಅವರು ಮನವಿ ಮಾಡಿದ್ದಾರೆ.

ಮಾರುಕಟ್ಟೆ ಬೆಲೆ ಕುಸಿತ ಮತ್ತು ಹೆಚ್ಚುತ್ತಿರುವ ಕೃಷಿ ವೆಚ್ಚಗಳಿಂದಾಗಿ ಮಾವು ಬೆಳೆಗಾರರು ಎದುರಿಸುತ್ತಿರುವ ಸವಾಲುಗಳನ್ನು ತಮ್ಮ ಪತ್ರದಲ್ಲಿ ಕೃಷಿ ಸಚಿವರ ಗಮನಕ್ಕೆ ತಂದಿರುವ ಡಾ.ವೈ.ಎ.ನಾರಾಯಣಸ್ವಾಮಿ, ರೈತರು ಮತ್ತು ತೋಟಗಾರಿಕೆ ವಲಯದ ಹಿತಾಸಕ್ತಿಯ ದೃಷ್ಟಿಯಿಂದ ಈ ವಿಷಯವನ್ನು ಸಹಾನುಭೂತಿಯಿಂದ ಪರಿಗಣಿಸುವಂತೆ ಕೋರಿದ್ದಾರೆ.

> **ಕರ್ನಾಟಕವು ಅತಿಹೆಚ್ಚು ಮಾವು ಬೆಳೆಯುವ ಪ್ರಮುಖ ರಾಜ್ಯಗಳಲ್ಲಿ ಒಂದಾಗಿದೆ. ರಾಜ್ಯದಲ್ಲಿ ಸುಮಾರು 1.45 ಲಕ್ಷ ಹೆಕ್ಟೇರ್‌ಗಳಲ್ಲಿ ಮಾವು ಕೃಷಿ ಮಾಡಲಾಗುತ್ತಿದ್ದು, ಪ್ರಸಕ್ತ ಋತುವಿನಲ್ಲಿ ಸುಮಾರು 10 ಲಕ್ಷ ಮೆಟ್ರಿಕ್ ಟನ್ ಮಾವು ಬೆಳೆಯಲಾಗಿದೆ. ಆದರೆ, ಬೆಲೆ ಕುಸಿತ ಹಾಗೂ ಪ್ರತಿಕೂಲಕರ ಹವಾಮಾನದಿಂದ ರೈತರು ಸಂಕಷ್ಟಕ್ಕೆ ತುತ್ತಾಗಿದ್ದಾರೆ ಎಂದು ಕೃಷಿ ಸಚಿವರ ಗಮನ ಸೆಳೆದಿದ್ದಾರೆ.**

## ಪ್ರಭಾವಿ ವ್ಯಕ್ತಿಯಿಂದ ಭೂ-ಕಬಳಿಕೆ: ರೈತರಿಂದ ಅಹೋರಾತ್ರಿ ಪ್ರತಿಭಟನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ,ಮಂಡ್ಯ

ತಾಲ್ಲೂಕಿನ ಕಿಕ್ಕೇರಿ ಹೋಬಳಿಯ ಮಾರ್ಗೋನಹಳ್ಳಿಯಲ್ಲಿ ಸುಮಾರು 113.13 ಎಕರೆ ಗೋಮಾಳದ ಜಮೀನನ್ನು ಬೇಸಾಯ ಮಾಡುತ್ತಿರುವ ರೈತರಿಗೆ ನೀಡದೆ ಬೇಸಾಯ ಮಾಡದ ಪ್ರಭಾವಿ ವ್ಯಕ್ತಿ ವಕೀಲರೊಬ್ಬರಿಗೆ ಭೂ-ಕಬಳಿಕೆಗೆ ಸಹಾಯ ಮಾಡಲಾಗಿದೆ ಎಂದು ಆರೋಪಿಸಿ ರೈತರು ಪ್ರತಿಭಟನೆ ನಡೆಸಿದರು.

ಮಾರ್ಗೋನಹಳ್ಳಿಯ ರೈತರು ಗೋಮಾಳ ಜಾಗಕ್ಕೆ ಆಗಮಿಸಿ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ನಮ್ಮ ಭೂಮಿ ನಮ್ಮ ಹಕ್ಕು ಎಂದು ಶಾಮಿಯಾನ ಹಾಕಿ ನೆರಳಿನ ವ್ಯವಸ್ಥೆ ಮಾಡಿಕೊಂಡು ಮಳೆಗೆ ಜಗ್ಗದೆ ಧರಣಿ ಕುಳಿತರು. ಮಹಿಳೆಯರು, ವಯೋವೃದ್ಧರು ತಮ್ಮ ಹಕ್ಕಿನ ಭೂಮಿ ಉಳಿವಿಗೆ ಪ್ರತಿಜ್ಞೆ ಮಾಡಿದರು.ನಮ್ಮ ಅಜ್ಜಂದಿರ ಕಾಲದಿಂದಲೂ ಗ್ರಾಮದ ನೂರಾರು ರೈತರು ತಲಾ ಒಂದೆರಡು ಎಕರೆಯಂತೆ ಈ ಗೋಮಾಳದ ಭೂಮಿಯಲ್ಲಿ ಸುಮಾರು 60 ವರ್ಷದಿಂದ ಬೇಸಾಯ ಮಾಡಿಕೊಂಡು ಬರಲಾಗುತ್ತಿದೆ.

ಈಗಿರುವಾಗ ಮಂಡ್ಯದ ವಕೀಲ ಡಿ.ರಾಮಲಿಂಗಯ್ಯರ ಹೆಸರಿಗೆ ದಾಖಲೆ ಸೃಷ್ಟಿಸಿ ಅಕ್ರಮವಾಗಿ 1969ರಲ್ಲಿ 95.13 ಎಕರೆಗೆ ಖಾತೆ ಮಾಡಿಕೊಡಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.ತದನಂತರ ವಕೀಲರು ಶ್ರೀಕೃಷ್ಣಾನಂದ ಗೋಸ್ವಾಮಿ ಅವರಿಗೆ ಹಕ್ಕು ಖುಲಾಸೆ ಮಾಡಿಕೊಟ್ಟಿದ್ದಾರೆ.

## ಬಿಇಒ, ಮುಖ್ಯ ಶಿಕ್ಷಕರಿಗೆ ಅಮಾನತು ಎಚ್ಚರಿಕೆ

# ಶಿಥಿಲ ಕಟ್ಟಡಗಳ ನಿರ್ಲಕ್ಷ್ಯ

• ಉದಯವಾಹಿನಿ, ಕೋಲಾರ


ಉದಯವಾಹಿನಿ ಚಿತ್ರ

ಸರ್ಕಾರಿ ಶಾಲೆ ಹಾಗೂ ಅಂಗನವಾಡಿ ಕೇಂದ್ರಗಳಲ್ಲಿ ಶಿಥಿಲಗೊಂಡಿರುವ ಕಟ್ಟಡಗಳ ಸಂಬಂಧ ನಿರ್ಲಕ್ಷ್ಯ ವಹಿಸಿ ಮುಂದೆ ಅನಾಹುತ ಸಂಭವಿಸಿದಲ್ಲಿ ಆಯಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿ (ಬಿಇಒ) ಹಾಗೂ ಶಾಲೆ ಮುಖ್ಯ ಶಿಕ್ಷಕರನ್ನು ನೇರವಾಗಿ ಹೊಣೆಗಾರರನ್ನಾಗಿ ಮಾಡಿ ಅಮಾನತುಗೊಳಿಸಲಾಗುವುದು ಎಂದು ಜಿಲ್ಲಾ ಪಂಚಾಯಿತಿ ಸಿಇಒ ಪ್ರವೀಣ್ ಪಿ.ಬಾಗೇವಾಡಿ ಎಚ್ಚರಿಕೆ ನೀಡಿದರು.

ನಾಲ್ಕು ದಿನಗಳ ಹಿಂದೆ ಕೋಲಾರ ನಗರದಲ್ಲಿನ ಸರ್ಕಾರಿ ಶಾಲೆ ಚಾವಣಿ ಬಿದ್ದು ಮುಖ್ಯ ಶಿಕ್ಷಕಿ ಗಾಯಗೊಂಡ ಹಿನ್ನೆಲೆಯಲ್ಲಿ ಅವರು ಜಿಲ್ಲಾ ಪಂಚಾಯಿತಿ ಕಚೇರಿಯಲ್ಲಿ' ಜಿಲ್ಲೆಯ ಎಲ್ಲಾ ಬಿಇಒಗಳು ಹಾಗೂ ಸಿಡಿಪಿಒಗಳ ತುರ್ತು ಪರಿಶೀಲನಾ ಸಭೆ ನಡೆಸಿ ಮಾತನಾಡಿದರು.

ತಾಲ್ಲೂಕುವಾರು ಪರಿಶೀಲನೆಯಲ್ಲಿ ಬಂಗಾರಪೇಟೆಯ 63 ಕಟ್ಟಡಗಳು, ಕೆಜಿಎಫ್‌ನ 24 ಕೊಠಡಿಗಳು ಸೇರಿದಂತೆ ಕೋಲಾರ, ಮಾಲೂರು, ಶ್ರೀನಿವಾಸಪುರ ಹಾಗೂ ಮುಳಬಾಗಿಲು ತಾಲ್ಲೂಕುಗಳ ಬಿಇಒಗಳು ತಮ್ಮ ವ್ಯಾಪ್ತಿಯ ಸಣ್ಣ ಮತ್ತು ದೊಡ್ಡ ದುರಸ್ತಿ ಇರುವ ಕಟ್ಟಡಗಳ ಪಟ್ಟಿಯನ್ನು ಸಭೆಗೆ ಒದಗಿಸಿದರು.

ಕಟ್ಟಡಗಳ ದುರಸ್ತಿ ಕಾರ್ಯಕ್ಕಾಗಿ ಲಭ್ಯವಿರುವ ಲಿಂಕ್ ಡಾಕ್ಯುಮೆಂಟ್ ಅನುದಾನದ ವಿವರಗಳನ್ನು ಸಿಇಒ ಪರಿಶೀಲಿಸಿದರು. ಸಾಮಾನ್ಯ ಕಟ್ಟಡಗಳ ದುರಸ್ತಿಗೆ 143.49 ಲಕ್ಷ, ಪರಿಶಿಷ್ಟ ಜಾತಿ ಬಿಡುಗಡೆ ಅಡಿ 70.21 ಲಕ್ಷ ಹಾಗೂ ಪರಿಶಿಷ್ಟ ಬಿಡುಗಡೆ ಅಡಿ 28.08 ಲಕ್ಷ ಅನುದಾನ ಲಭ್ಯವಿದ್ದು,

ಇವುಗಳನ್ನು ಬಳಸಿಕೊಂಡು ಪಿಆರ್ ಇಡಿ ಅಧಿಕಾರಿಗಳು ತಕ್ಷಣವೇ ದುರಸ್ತಿ ಕಾರ್ಯಗಳನ್ನು ಆರಂಭಿಸಬೇಕೆಂದು ಆದೇಶಿಸಿದರು.

ಶಿಥಿಲಾವ್ಯಸ್ಥೆಯಲ್ಲಿರುವ ಅಂಗನವಾಡಿ ಕಟ್ಟಡಗಳನ್ನು ಸಹ ಗುರುತಿಸಿ ಇದನ್ನು ರಿಪೇರಿ ಅಥವಾ ಹೊಸ ಕಟ್ಟಡಗಳನ್ನು ಕಟ್ಟಿಸಲು ಗ್ರಾಮ ಪಂಚಾಯಿತಿ ಸಹಕಾರ ಪಡೆಯಬೇಕೆಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಿಡಿಪಿಒಗಳಿಗೆ ಸೂಚಿಸಿದರು.

ಜೊತೆಗೆ, ಪ್ರತಿ ಶಾಲೆಯಲ್ಲೂ ಜಲ ಜೀವನ್ ಮಿಷನ್ (ಎಜಎ) ಅಡಿಯಲ್ಲಿ ಕಡ್ಡಾಯವಾಗಿ ಶುದ್ಧ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಬೇಕು ಮತ್ತು ಬಾಲಕ-ಬಾಲಕಿಯರಿಗೆ ಪ್ರತ್ಯೇಕ ಸ್ವಚ್ಛ ಶೌಚಾಲಯಗಳ ವ್ಯವಸ್ಥೆ ಇರಬೇಕು ಎಂದು ತಾಕೀತು ಮಾಡಿದರು. ಶಾಲಾ ಆವರಣಗಳಲ್ಲಿ ಔಷಧೀಯ ಸಸ್ಯಗಳನ್ನೊಳಗೊಂಡ 'ಧನ್ವಂತರಿ ವನ' ಅಭಿವೃದ್ಧಿಪಡಿಸಲು ಆದ್ಯತೆ ನೀಡುವಂತೆ ತಿಳಿಸಿದರು.

### ಸಿಎಸ್‌ಆರ್ ಮಾದರಿ ಶಾಲೆಗಳನ್ನು ಅಭಿವೃದ್ಧಿಪಡಿಸಿ

**ಜಿಲ್ಲೆಯಲ್ಲಿ ಕೈಗಾರಿಕಾ ವಲಯಗಳು ಹೆಚ್ಚಾಗಿರುವುದರಿಂದ, ಮುಂಬರುವ ದಿನಗಳಲ್ಲಿ ಮೂರು ಗ್ರಾಮ ಪಂಚಾಯತಿಗಳಿಗೆ ಒಂದರಂತೆ 'ಸಿಎಸ್‌ಆರ್ ಮಾದರಿ ಶಾಲೆಗಳನ್ನು ಅಭಿವೃದ್ಧಿಪಡಿಸಲು ಯೋಜನೆ ರೂಪಿಸಲಾಗುತ್ತಿದೆ. ದೊಡ್ಡ ದೊಡ್ಡ ಕಂಪನಿಗಳ ಸಹಯೋಗದೊಂದಿಗೆ ಶಾಲೆಗಳಿಗೆ ಅಗತ್ಯವಿರುವ ಅತ್ಯಾಧುನಿಕ ಸೌಲಭ್ಯಗಳನ್ನು ಒದಗಿಸಲು ಬಿಇಒಗಳು ತಮ್ಮ ವ್ಯಾಪ್ತಿಯ ಅಗತ್ಯತೆಗಳ ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳುವಂತೆ ನಿರ್ದೇಶನ ನೀಡಿದರು. ವರದಿಯಾಗಿರುವ ಎಲ್ಲಾ ನ್ಯೂನತೆಗಳನ್ನು ಶೀಘ್ರವಾಗಿ ಪರಿಹರಿಸಿ ಮುಂಬರುವ ಒಂದು ವಾರದ ಒಳಗೆ ಅನುಪಾಲನಾ ವರದಿ ಸಲ್ಲಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.**

### ತೀವ್ರ ಅಸಮಾಧಾನ

**ಜಿಲ್ಲೆಯ ಕೆಲವು ಭಾಗಗಳಲ್ಲಿ, ವಿಶೇಷವಾಗಿ ಕೋಲಾರ ತಾಲ್ಲೂಕಿನಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ 1ನೇ ತರಗತಿಯ ದಾಖಲಾತಿ ಪ್ರಮಾಣದಲ್ಲಿ ಸುಮಾರು ಶೇ 30ರಷ್ಟು ಇಳಿಕೆಯಾಗಿರುವ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.**

**ಸರ್ಕಾರಿ ಶಾಲೆಗಳಲ್ಲಿ ಪ್ರಸ್ತುತ ಜಾರಿಗೆ ತರಲಾಗಿರುವ ದ್ವಿಭಾಷಾ (ಇಂಗ್ಲಿಷ್ ಹಾಗೂ ಕನ್ನಡ ಮಾಧ್ಯಮ) ಬೋಧನೆಯ ಸೌಲಭ್ಯದ ಕುರಿತು ಕರಪತ್ರಗಳ ಮೂಲಕ ಸಾರ್ವಜನಿಕರಲ್ಲಿ ವ್ಯಾಪಕ ಜಾಗೃತಿ ಮೂಡಿಸಬೇಕು. ಶಿಕ್ಷಕರು ಮನೆ-ಮನೆಗೆ ಭೇಟಿ ನೀಡಿ ಪೋಷಕರನ್ನು ಮನವೊಲಿಸುವ ಮೂಲಕ ದಾಖಲಾತಿ ಪ್ರಮಾಣವನ್ನು ಹೆಚ್ಚಿಸಲು ಜನಾಂದೋಲನ ರೂಪದಲ್ಲಿ ಕೆಲಸ ಮಾಡಬೇಕು.**

# ಗಟ್ಟವಾಡಿಪುರದಲ್ಲಿ ಕುಡಿಯುವ ನೀರಿಗೆ ಹಾಹಾಕಾರ

• ಉದಯವಾಹಿನಿ, ಮೈಸೂರು


ಉದಯವಾಹಿನಿ ಚಿತ್ರ

ನಂಜನಗೂಡು ತಾಲ್ಲೂಕಿನ ಗಟ್ಟವಾಡಿಪುರ ಗ್ರಾಮದಲ್ಲಿ ಕಳೆದ ಒಂದು ತಿಂಗಳಿಂದ ಕುಡಿಯುವ ನೀರಿನ ಸಮಸ್ಯೆ ತೀವ್ರಗೊಂಡಿದ್ದು, ಗ್ರಾಮಸ್ಥರು ಕುಡಿಯುವ ನೀರಿಗಾಗಿ ಹಾಹಾಕಾರ ಪಡುವಂತಾಗಿದೆ.

ಮನೆಮನೆಗೆನಲ್ಲಿ ಮೂಲಕ ಶುದ್ಧ ನೀರು ಪೂರೈಸಬೇಕಿದ್ದ ಜಲ ಜೀವನ್ ಮಿಷನ್ (ಜೆಜೆಎಂ) ಯೋಜನೆ ಸಂಪೂರ್ಣ ವಿಫಲವಾಗಿರುವುದು ಇದಕ್ಕೆ ಕಾರಣವಾಗಿದೆ.

ಗ್ರಾಮದಲ್ಲಿ 1500 ಜನ ಸಂಖ್ಯೆ ಇದೆ. ಜಲ ಜೀವನ್ ಮಿಷನ್ ಯೋಜನೆಯ ಪೈಪ್ ಲೈನ್ ಕಾಮಗಾರಿ ಮುಗಿದಿದ್ದರೂ ಮನೆ ಮನೆಗೆ ಗಂಗೆ ಬಂದಿಲ್ಲ. ಇದರಿಂದ ಬೇಸತ್ತ ಗ್ರಾಮಸ್ಥರು, ಅದರಲ್ಲೂ ಮಹಿಳೆಯರು ದಿನನಿತ್ಯ ಅರ್ಧ ಕಿಲೋಮೀಟರ್ ದೂರದ ಹೊಲಗದ್ದೆಗಳಲ್ಲಿರುವ ರೈತರ ಪಂಪ್‌ಸೆಟ್‌ಗಳಿಗೆ ಹೋಗಿ ನೀರು ತರುತ್ತಿದ್ದಾರೆ.

ಬಿಂದಿಗೆ ಹಿಡಿದು ನೀರಿಗಾಗಿ ಪರದಾಡುತ್ತಿದ್ದು, ಗ್ರಾಮಸ್ಥರು ಸೈಕಲ್ ಮತ್ತು ಬೈಕ್‌ಗಳಲ್ಲಿ ನೀರು ತರಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಕುಡಿಯುವ ನೀರು ಕಲ್ಪಿಸುವ ಜವಾಬ್ದಾರಿ ಹೊಂದಿರುವ ದೊಡ್ಡ ಕವಲಂದೆ ಗ್ರಾಮ ಪಂಚಾಯಿತಿ ಆಡಳಿತ ಸಂಪೂರ್ಣ ನಿರ್ಲಕ್ಷ್ಯ ವಹಿಸಿದೆ ಎಂದು ಗ್ರಾಮಸ್ಥರು ದೂರಿದ್ದಾರೆ.

ಪೈಪ್‌ಲೈನ್ ಹಾಕಿ, ನಲ್ಲಿ ಅಳವಡಿಸಿ ಎರಡೂ ವರ್ಷವಾಯ್ತು.

ಆದರೆ ಇಲ್ಲಿಯವರೆಗೆ ಸರಿಯಾಗಿ ನೀರು ಬಂದಿಲ್ಲ. ದೂರು ನೀಡಿದರೂ ಪಂಚಾಯಿತಿ ಅಧಿಕಾರಿಗಳು ಗ್ರಾಮದ ಕಡೆ ತಿರುಗಿ ನೋಡುತ್ತಿಲ್ಲ.

ಗ್ರಾಮ ಪಂಚಾಯಿತಿಯ ಅಧಿಕಾರಿಗಳಿಗೆ ಹೇಳಿದರೆ, ನೀರಾವರಿ ಇಲಾಖೆ ಅಧಿಕಾರಿಗಳನ್ನು ಕೇಳಿ ಎಂದು ಉಡಾಫೆ ಉತ್ತರ ನೀಡುತ್ತಾರೆ. ಸರಿಯಾಗಿ ನೀರು ಬಂದಿಲ್ಲ. ಚುನಾವಣೆ ಬಂದಾಗ ಮಾತ್ರ ವೋಟು ಕೇಳಲು ಬರುತ್ತಾರೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

## ಕೊಣಸೂರಿನಲ್ಲಿ 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ಯೋಗ ತಾಲೀಮು

• ಉದಯವಾಹಿನಿ , ಬೆಟ್ಟದಪುರ

ಕೊಣಸೂರಿನ ಆಯುಷ್ ಆರೋಗ್ಯ ಮಂದಿರದಿಂದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ಯೋಗ ತಾಲೀಮು ಹಮ್ಮಿಕೊಳ್ಳಲಾಗಿತ್ತು. ಯೋಗ ತರಬೇತುದಾರರಾದ ಆಶಾಮಹದೇವ ಮಾತನಾಡಿ, ಯೋಗ 365 ದಿನಗಳೂ ನಮ್ಮ ದಿನಚರಿಯಲ್ಲಿ ಅಳವಡಿಸಿಕೊಳ್ಳಬೇಕು. ಪ್ರತಿದಿನ ಯೋಗಾಭ್ಯಾಸ ಮಾಡುವುದರಿಂದ ದೈಹಿಕ ಹಾಗೂ ಮಾನಸಿಕ ಆರೋಗ್ಯ ಉತ್ತಮವಾಗಿದ್ದು, ಔಷಧಿ ಮುಕ್ತ ಜೀವನ ನಡೆಸಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು. ಮುಖ್ಯಶಿಕ್ಷಕಿ ಮಂಜುಳಾ ಮಾತನಾಡಿ, ಆಯುಷ್ ಇಲಾಖೆಯಿಂದ ನಡೆಸಲಾಗುತ್ತಿರುವ ಯೋಗ ತರಬೇತಿ ಶಾಲಾ ಮಕ್ಕಳಿಗೆ ಉಪಯುಕ್ತವಾಗಿದೆ. ಸಾರ್ವಜನಿಕರಲ್ಲಿಯೂ ಯೋಗದ ಬಗ್ಗೆ ಅರಿವು ಮೂಡಿಸಲು ಇಲಾಖೆ ಉತ್ತಮ ಕಾರ್ಯ ಮಾಡುತ್ತಿದೆ ಎಂದರು.

## ಬಿಡದಿ ಟೌನ್‌ಷಿಪ್ ವಿರೋಧಿಸಿ ಜೂ.21 ರಂದು ಜೆಡಿಎಸ್ ಬೃಹತ್ ಪ್ರತಿಭಟನೆ - ಎ.ಮಂಜು

• ಉದಯವಾಹಿನಿ, ರಾಮನಗರ


ಉದಯವಾಹಿನಿ ಚಿತ್ರ

ಬಿಡದಿ ಟೌನ್ ಷಿಪ್ ವಿರೋಧಿಸಿ ಕಳೆದ ಒಂದುವರೆ ವರ್ಷಗಳಿಂದ ರೈತರು ವಿರೋಧ ವ್ಯಕ್ತಪಡಿಸಿದರೂ ಸರ್ಕಾರ ಸ್ಪಂದನೆ ನೀಡದ ಹಿನ್ನಲೆ ಜೂ.21 ರಂದು ಜೆಡಿಎಸ್ ವತಿಯಿಂದ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಶಾಸಕ ಎ.ಮಂಜುನಾಥ್ ಹೇಳಿದರು.

ತಾಲ್ಲೂಕಿನ ಬಿಡದಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಒಂದುವರೆ ವರ್ಷದಿಂದ ನಿರಂತರ ಹೋರಾಟ ನಡೆಯುತ್ತಿದ್ದರು ಸರ್ಕಾರ ತಲೆಕೆಡಿಸಿಕೊಳ್ಳದ ಹಿನ್ನಲೆಯಲ್ಲಿ ಅಂಚಿಪುರದಿಂದ ಹೊಸೂರು ಗ್ರಾಮದವರೆಗೆ ಸುಮಾರು ಹತ್ತು ಗ್ರಾಮಗಳ ಮೂಲಕ ಪಾದಯಾತ್ರೆ ಹಮ್ಮಿಕೊಳ್ಳಲಾಗಿದ್ದು, ಸಾವಿರಾರು ಸಂಖ್ಯೆಯಲ್ಲಿ ರೈತರು ಪಾಲ್ಗೊಳ್ಳುತ್ತಿದ್ದು, ಜೆಡಿಎಸ್ ಪ್ರಮುಖ ನಾಯಕರು ಭಾಗವಹಿಸಲಿದ್ದಾರೆ ಎಂದು ಹೇಳಿದರು. ಸರ್ಕಾರದ ಮುಂದೆ ಯಾವುದೆ ಸ್ಪಷ್ಟ ಉದ್ದೇಶಗಳಿಲ್ಲ. ರೈತರಿಂದ ವಶಪಡಿಸಿಕೊಳ್ಳುವ ಭೂಮಿಗೆ ಪರ್ಯಾಯವಾಗಿ ಎಲ್ಲಿ ಭೂಮಿ ನೀಡಲಾಗುತ್ತದೆ ಎಂದು ಸ್ಪಷ್ಟತೆಯಿಲ್ಲ. ಈಗಿನ ಜಿಲ್ಲಾಧಿಕಾರಿ ರೈತರಿಗೆ ಸುಳ್ಳು ಹೇಳಿಕೆ ನೀಡುತ್ತಿದ್ದಾರೆ. ಇಂಟಿಗ್ರೇಟೆಡ್ ಟೌನ್ ಷಿಪ್ ಮಾಡುವುದಾದರೆ ಏಕ ಕಾಲದಲ್ಲಿ ಅಧಿಸೂಚನೆ ಮಾಡುವುದನ್ನು ಬಿಟ್ಟು ಕೇವಲ ಮೂರು ಗ್ರಾಮಗಳಿಗೆ ಮಾತ್ರ ಸೀಮಿತವಾಗಿ ಐವತ್ತು, ನೂರು ಎಕರೆಗೆ ಅಧಿಸೂಚನೆ ಹೊರಡಿಸುತ್ತಿರುವುದರ ಹಿಂದಿನ ಅರ್ಥವೇನು ಎಂದು ಪ್ರಶ್ನಿಸಿದರು.

ಎಚ್‌ಡಿಕೆ ಅವರ ಬೇನಾಮಿ ಆಸ್ತಿ ಇರುವುದರಿಂದ ಜೆಡಿಎಸ್ ಪ್ರತಿಭಟನೆ ನಡೆಸುತ್ತಿದ್ದಾರೆ ಎಂದು ಕಾಂಗ್ರೆಸ್ ಪಕ್ಷ ಆರೋಪ ನೀಡುವುದಾದರೆ ಅದರ ಬಗ್ಗೆ ಸರ್ಕಾರವೆ ತನಿಖೆ ನಡೆಸಲಿ, ಅದನ್ನು ಬಿಟ್ಟು ಇಲ್ಲ ಸಲ್ಲದ ಪೋಸ್ಟರ್ ಅಂಟಿಸಿ ಜನರ ಮನಸ್ಸನ್ನು ಬೇರೆಡೆಗೆ ಸೆಳೆಯಲು ಸಾಧ್ಯವಿಲ್ಲ.

ಎಚ್‌ಡಿಕೆ ಅವರು ಸಿಎಂ ಆಗಿದ್ದಾಗ ಭೂ ಸ್ವಾಧೀನದ ಬಗ್ಗೆ ಪ್ರಿಲಿಮಿನರಿ ಅಧಿಸೂಚನೆ ಹೊರಡಿಸಿದ್ದಾರೆ ಎಂಬುದನ್ನು ಸಾಬೀತುಪಡಿಸಿದರೆ ಹೋರಾಟದಿಂದ ಹಿಂದೆ ಸರಿಯುವುದಾಗಿ ಸವಾಲು ಹಾಕಿದರು.

ಕಾಂಗ್ರೆಸ್ ಮುಖಂಡ ನಟರಾಜ್ ಅವರು ತಮ್ಮ ಹೆಂಡತಿ ಹೆಸರಿಗೆ, ರಾಮನಗರದ ಜಿಲ್ಲಾಧಿಕಾರಿ ಅವರು ತಮ್ಮನ ಹೆಸರಿಗೆ ಜಮೀನು ನೊಂದಣಿ ಮಾಡಿಸಿದ್ದಾರೆ. ಇದರ ಬಗ್ಗೆ ಮೊದಲು ಸರ್ಕಾರ ಉತ್ತರ ಕೊಡಲಿ ಎಂದು ಹರಿಹಾಯ್ದ ಅವರು, ಎಚ್‌ಡಿಕೆ ಅವರು 2006ರಲ್ಲಿ ಯೋಜನೆ ಕೈಗೆತ್ತಿಕೊಂಡಾಗ ಅಂದು ಶಾಸಕರಾಗಿದ್ದ ಬಾಲಕೃಷ್ಣ ಏನು ಮಾಡುತ್ತಿದ್ದರು. ಮಾಗಡಿಯಲ್ಲಿ ರೈತರ ಜಮಿನು ಒತ್ತುವರಿಯಾದ್ರೆ ಅದು ರೈತ ವಿರೋಧಿ ಯೋಜನೆ, ಬಿಡಿದಿಯಲ್ಲಿ ಯೋಜನೆ ಮಾಡಿದರೆ ರೈತರ ಪರವಾದ ಯೋಜನೆ ಎಂದು ಹೇಳುವ ಬಾಲಕೃಷ್ಣ ಅವರು ಆತ್ಮಸಾಕ್ಷಿಯಿಂದ ಮಾತನಾಡಲಿ ಎಂದರು. ಜೆಡಿಎಸ್ ಮುಖಂಡರಾದ ನರಸಿಂಹಯ್ಯ, ಇಟ್ಟಮಡು ಗೋಪಾಲ್ ಇದ್ದರು.

# ಶಿಕ್ಷಣದಿಂದ ಮಾತ್ರ ಬಾಲಕಾರ್ಮಿಕ ಪದ್ದತಿ ನಿರ್ಮೂಲನೆ ಸಾಧ್ಯ : ನ್ಯಾಯಧೀಶರಾದ ನೂರುನ್ನಿಸಾ ಹೇಳಿಕೆ

## 14 ರಿಂದ 18 ವರ್ಷ ವಯಸ್ಸಿನ ಮಕ್ಕಳನ್ನ ಕೆಲಸಗಳಿಗೆ ನೇಮಿಸಿ ದುಡಿಸಿಕೊಳ್ಳದಂತೆ ಕಟ್ಟಾಜ್ಞೆ ಹೊರಡಿಸಿ ನಿಷೇಧ

• ಉದಯವಾಹಿನಿ, ಗುಂಡ್ಲುಪೇಟೆ


ಉದಯವಾಹಿನಿ ಚಿತ್ರ

ಶಿಕ್ಷಣದಿಂದ ಮಾತ್ರವೇ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆ ಸಾಧ್ಯ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ತಾಲ್ಲೂಕು ಕಾನೂನು ಸೇವೆಗಳ ಸಮಿತಿ ಅಧ್ಯಕ್ಷರಾದ ನೂರುನ್ನೀಸಾ ಅಭಿಪ್ರಾಯಪಟ್ಟರು. ಪಟ್ಟಣದ ಅಬ್ದುಲ್ ಕಲಾಂ ವಸತಿ ಶಾಲೆಯಲ್ಲಿ ಕಾರ್ಮಿಕ ಇಲಾಖೆ ಮತ್ತು ತಾಲ್ಲೂಕು ಆಡಳಿತ, ಜಿಲ್ಲಾ ಕಾರ್ಮಿಕ ಯೋಜನಾ ಸೊಸೈಟಿ ಹಾಗೂ ತಾಲ್ಲೂಕು ಕಾನೂನು ಸೇವೆ ಸಮಿತಿ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ವಿಶ್ವ ಬಾಲಕಾರ್ಮಿಕ ಪದ್ದತಿ ವಿರೋಧಿ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಬಾಲಕಾರ್ಮಿಕ ನಿಷೇಧ ಕಾಯ್ದೆ 1986 ರ ಪ್ರಕಾರ 14 ವರ್ಷ ವಯಸ್ಸಿನೊಳಗಿನ ಮಕ್ಕಳಿಂದ ಹೋಟೆಲ್ ಅಥವಾ ಇನ್ನಿತೆರೆಡೆ ಕೆಲಸ ಮಾಡಿಸುವುದು ಕಾನೂನು ಬಾಹಿರ ಶಿಕ್ಷಾರ್ಹ ಅಪರಾಧವಾಗಿದೆ , 2018ರ ನಂತರ ತಿದ್ದುಪಡಿ ಮಾಡಲಾದ ಬಾಲಕಾರ್ಮಿಕ ಕಾಯ್ದೆಯಲ್ಲಿ 14 ರಿಂದ 18 ವರ್ಷ ವಯಸ್ಸಿನ ಮಕ್ಕಳನ್ನ ಕೆಲಸಗಳಿಗೆ ನೇಮಿಸಿ ದುಡಿಸಿಕೊಳ್ಳದಂತೆ ಕಟ್ಟಾಜ್ಞೆ ಹೊರಡಿಸಿ ನಿಷೇಧ ಮಾಡಲಾಗಿದೆ. ಬಾಲ ಕಾರ್ಮಿಕರು ದುಡಿಯಲು ಕೆಲವು ವಿನಾಯಿತಿಗಳಿದ್ದರೂ ಸಹ ಷರತ್ತುಗಳು ಅನ್ವಯವಾಗಿವೆ, ಕಷ್ಟಕರವಾದ ಕೆಲಸಗಳನ್ನ ಹೊರತುಪಡಿಸಿ ಆರು ಗಂಟೆಗಳ ಕಾಲ ಮಾತ್ರವೇ ದುಡಿಸಿಕೊಳ್ಳಬೇಕು ಎಂಬ ನಿಯಮವಿದೆ ಎಂದು ತಿಳಿಸಿದರು. ಮಕ್ಕಳ ಅಭ್ಯುದ್ಯೇಯಕ್ಕಾಗಿ ರೂಪಿಸಿರುವ ಕಾಯ್ದೆಗಳು ಅವರ ಶಿಕ್ಷಣದ ಮೇಲಿನ ಆಸಕ್ತಿ ಕಲಿಕಾ ಮಾರ್ಗ ಸುಲಲಿತವಾಗಿರಲಿ ಎಂಬುದಾಗಿದೆ ಹಾಗಾಗಿ ಪೋಷಕರು ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಮಹತ್ವ ನೀಡಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ನ್ಯಾಯದೀಶರಾದ ಎಂ.ಟಿ. ದೀಪು, ಅಪರ ಸಿವಿಲ್ ನ್ಯಾಯಾಧೀಶರಾದ ಆರ್.ಬಿ.ಗಿರೀಶ್, ಜಿಲ್ಲಾ ಕಾರ್ಮಿಕ ಅಧಿಕಾರಿ ಟಿ. ಸಿ.ರಾಮಚಂದ್ರಯ್ಯ, ತಾಲ್ಲೂಕು ವಕೀಲರ ಸಂಘ ಅಧ್ಯಕ್ಷರಾದ ಟಿ.ಎಸ್.ವೆಂಕಟೇಶ್, ಕಾರ್ಯದರ್ಶಿ ವೆಂಕಟೇಶ್, ಯೋಜನಾ ನಿರ್ದೇಶಕ ಮಹೇಶ್, ಕಾರ್ಮಿಕ ನಿರೀಕ್ಷಕ ನಾರಾಯಣ ಮೂರ್ತಿ, ಕೈಲಾಸ್ ಸತ್ಯಾರ್ಥಿ ಚಿಲ್ಡ್ರನ್ ಫೌಂಡೇಶನ್ ಜಿಲ್ಲಾ ಸಂಯೋಜಕ ನಾರಾಯಣ ಸ್ವಾಮಿ ಹಾಗೂ ವಸತಿ ಶಾಲೆಯ ಪ್ರಾಂಶುಪಾಲ ತಾವೇರಪ್ಪ, ಸಿಬ್ಬಂದಿಗಳು ಹಾಜರಿದ್ದರು.

# ಹನಗೋಡು ಗ್ರಾ.ಪಂ.ಪಿ.ಡಿ.ಓ ಅಂಧ ದರ್ಬಾರ್

## ಪಂಚಾಯ್ತಿ ಸಿಬ್ಬಂದಿ ಹಾಗೂ ಸ್ವಚ್ಛತಾ ನೌಕರರಿಗೆ ಸೂಕ್ತ ಸಮಯದಲ್ಲಿ ಸೂಕ್ತ ರೀತಿಯ ಸಂಬಳ ಬಿಡುಗಡೆ

• ಉದಯವಾಹಿನಿ, ಹುಣಸೂರು


ಉದಯವಾಹಿನಿ ಚಿತ್ರ

ತಾಲ್ಲೂಕಿನ ಹನಗೋಡು ಗ್ರಾಮ ಹೋಬಳಿ ಕೇಂದ್ರವಾಗಿದ್ದು ತಾಲೂಕಿನಲ್ಲೇ ಅತೀ ದೊಡ್ಡ ಗ್ರಾಮ ಜೊತೆಗೆ ಗ್ರೇಡ್ ಒನ್ ಗ್ರಾಮ ಪಂಚಾಯತಿ ಆಗಿದರೂ ಕೂಡ , ಸ್ವಚ್ಛತೆ ವಿಚಾರದಲ್ಲಿ ಮಾತ್ರ ಗ್ರಾಮ ಗಬ್ಬೆದ್ದುನಾರುತ್ತಿದೆ. ನೈರ್ಮಲ್ಯದ ವಿಚಾರವಾಗಿ ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಪಂಚಾಯಿತಿ ಅಧಿಕಾರಿಗೆ ಹಲವಾರು ಬಾರಿ ದೂರು ನೀಡಿದರು ಅಲ್ಲಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಅನೀತಾ.ಹೆಚ್.ಎಸ್ ಯಾವುದೇ ರೀತಿಯ ದೂರಿಗೂ ಕ್ಯಾರೆ ಎನ್ನದೆ ಉದಾಸೀನ ತೋರಿದ ಪರಿಣಾಮ ಇಂದು ಹನಗೂಡು ಕೇಂದ್ರ ಸಿವೇಜ್ ಪ್ಲಾಂಟ್ ಆಗಿದೆ.

ಗ್ರಾಮದಲ್ಲಿ ಸಂಗ್ರಹಣೆ ಆದ ಕಸವನ್ನು ಉದ್ದೇಶಿತ ಸ್ವಚ್ಛ ಸಂಕೀರ್ಣ ಘಟಕದಲ್ಲಿ ಸುರಿಯದೆ, ಗ್ರಾಮದ ಮಧ್ಯ ಭಾಗದಲ್ಲಿ ಹರಿಯುವ ಪವಿತ್ರ ಲಕ್ಷ್ಮಣತೀರ್ಥ ನದಿಗೆ ಸುರಿದು ನದಿಯನ್ನು ಮಲಿನ ಮಾಡುತ್ತಿರುವುದು ದುರಂತ. ಈ ನದಿ ನೀರು ಕೆ.ಆರ್.ಎಸ್ ಅಣೆಕಟ್ಟೆ ಮೂಲಕ ಹರಿದು ಬೆಂಗಳೂರಿಗರಿಗೆ ಕುಡಿ ನೀರಾಗಿದೆ. ಪಂಚಾಯ್ತಿ ಸಿಬ್ಬಂದಿ ಹಾಗೂ ಸ್ವಚ್ಛತಾ ನೌಕರರಿಗೆ ಸೂಕ್ತ ಸಮಯದಲ್ಲಿ ಸೂಕ್ತ ರೀತಿಯ ಸಂಬಳ ಬಿಡುಗಡೆ ಆಗದೆ, ನೌಕರರ ಜೀವನನೋಪಾಯಕ್ಕೆ ಕಷ್ಟವಾಗಿರುವ ಜೊತೆಗೆ ಸರಿಯಾದ ಸಮಯದಲ್ಲಿ ಬ್ಯಾಂಕ್ ಇ.ಎಂ.ಐ ಕಟ್ಟಲು ತೊಡಕಾಗಿರುವ ಬಗ್ಗೆ ಅಲ್ಲಿನ ನೌಕರರು ಹಾಗೂ ಸಿಬ್ಬಂದಿಗಳು ಪಿ.ಡಿ.ಓ ವಿರುದ್ಧ ತಾಲ್ಲೂಕು ಮಟ್ಟದ ಹಿರಿಯ ಅಧಿಕಾರಿಗಳಿಗೆ ದೂರು ನೀಡಿದರು ಯಾವುದೇ ಕ್ರಮ ಆಗಿರುವುದಿಲ್ಲ. ಇ -ಸ್ವತಿಗೆ ಲಂಚ ಇ- ಸ್ವತ್ತು ಬಯಸಿ ಬಂದ ಸಾರ್ವಜನಿಕರು ಲಂಚ ಹಣ ನೀಡಲು ಸಮ್ಮತಿಸದಿದ್ದರೆ, ಇಲ್ಲಸಲ್ಲದ ನೆಪವೊಡ್ಡಿ ಪಿ.ಡಿ.ಓ ತಿರಸ್ಕರಿಸುತ್ತಿರುವ ಉದಾಹರಣೆಗಳ ಸಾಕಷ್ಟು ದೂರುಗಳಿದ್ದು, ಇದರಿಂದ ಸಾರ್ವಜನಿಕರಿಗೆ ಬಹಳ ಅನಾನುಕೂಲವಾಗಿದೆ. ಮನೆ ನಿರ್ಮಾಣ ಮಾಡಲು, ಬ್ಯಾಂಕ್ ಸಾಲ ಪಡೆಯಲು, ಅಂಗಡಿಗಳ ಲೈಸೆನ್ಸ್ ಮೇಲೆ ಲೋನ್ ಪಡೆಯಲು ಎಲ್ಲಾ ರೀತಿಯಲ್ಲೂ ತೊಂದರೆಯಾಗುತ್ತಿದ್ದು ಸಾರ್ವಜನಿಕರು ಪರದಾಡುತ್ತಿರುವುದು ಒಂದು ಕಡೆಯಾದರೆ, ಪಿ-2 ಲಾಗಿನ್ ನಲ್ಲಿ ದಾಖಲೆಗಳು ಲಾಕ್ ಆದರೆ ಅದನ್ನು ತೆರವು ಮಾಡುವುದು ಬಹಳ ಕಷ್ಟವಾಗುತ್ತಿದೆ. ಪಿ.ಡಿ.ಓ ಅನಿತಾ ವಿರುದ್ಧ ಸ್ಥಳೀಯ ಗ್ರಾಮಸ್ಥರು ಹಾಗೂ ಜನ ಪ್ರತಿನಿಧಿಗಳು ತಾಲ್ಲೂಕು ಪಂಚಾಯಿತಿ ಅಧಿಕಾರಿಗಳಿಗೆ ದೂರು ನೀಡಿದ ಸಂಬಂಧ, ಅಧಿಕಾರಿಗಳು ಇದರ ಬಗ್ಗೆ ಸೂಕ್ತ ರೀತಿ ಕ್ರಮವಹಿಸದ ಕಾರಣ, ಅಲ್ಲಿನ ಸ್ಥಳಿಯ ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಅನಿತಾರ ಕರ್ತವ್ಯ ಲೋಪದ ಬಗೆ ಜಿಲ್ಲಾ ಪಂಚಾಯಿತಿಗೆ ದೂರು ನೀಡಿದ ಹಿನ್ನೆಲೆ ತಾಲ್ಲೂಕು ಪಂಚಾಯಿತಿ ತನಿಖಾಧಿಕಾರಿಗಳು ಕಸ ಸುರಿದಿರುವ ನದಿಯ ಬಳಿ ಸ್ಥಳ ಪರಿಶೀಲಿಸಿ ಸಮಗ್ರ ತನಿಖೆ ಮಾಡಿರುತ್ತಾರೆ. ಇದರ ಜೊತೆಗೆ ಜಿಲ್ಲಾ ಪಂಚಾಯಿತಿ ಅಧಿಕಾರಿ ಸಿದ್ದಗಂಗಮ್ಮ ಕೂಡ ಸ್ಥಳಕ್ಕೆ ಭೇಟಿ ನೀಡಿ ಅಕ್ರಮಗಳನ್ನು ಪರಿಶೀಲಿಸಿ ಪಿ.ಡಿ.ಓ ಅನಿತಾರನ್ನು ಅಮಾನತು ಮಾಡುವಂತೆ ಶಿಫಾರಸು ಮಾಡಲು ಇ.ಓ ಹೊಂಗಯ್ಯರವರಿಗೆ ಸ್ಥಳದಲ್ಲೆ ಆದೇಶಿಸಿದ್ದಾರೆ ಎಂಬ ಮಾಹಿತಿ ಇದೆ.

### ಸರ್ಕಾರದ ಬೊಕ್ಕಸಕ್ಕೆ ನಷ್ಟ

**ಪಿ.ಡಿ.ಓ ಅನಿತಾ ಅವರ ಬೇಜವಾಬ್ದಾರಿಯಿಂದ ಗೃಹ, ಕೈಗಾರಿಕೆ ಮತ್ತು ವಾಣಿಜ್ಯ ಮಳಿಗೆಗಳಿಗೆ ಬೇಕಾಬಿಟ್ಟಿ ಕಂದಾಯ ನಿಗದಿ ಮಾಡುತ್ತಿರುವುದರಿಂದ, ಯಾರು ಕೂಡ ಸರಿಯಾದ ರೀತಿಯಲ್ಲಿ ಕಂದಾಯ ಕಟ್ಟಲು ಸಾಧ್ಯವಾಗದೆ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗುತ್ತಿದೆ . 2023 ರಿಂದ ಪ್ರಸಕ್ತ ಸಾಲಿನವರೆಗೂ ಸುಮಾರು 1.76 ಲಕ್ಷ ಕಂದಾಯ ಬಾಕಿ ಉಳಿದಿರುವುದಾಗಿ ಪಂಚಾಯಿತಿ ಅಧಿಕೃತ ದಾಖಲೆಗಳಲ್ಲಿ ತೋರುಸುತ್ತಿದೆ.**

## ಮಿನಿ ನ್ಯೂಸ್

### ಚಿಮಂಗಲ ಗ್ರಾಮದಲ್ಲಿ ತ್ರಿಶಕ್ತಿ ಉತ್ಸವ ಸಂಭ್ರಮ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಶಿಡ್ಲಘಟ್ಟ

ತಾಲ್ಲೂಕಿನ ಚೀಮಂಗಲ ಗ್ರಾಮದಲ್ಲಿ ತ್ರಿಶಕ್ತಿ ಉತ್ಸವವನ್ನು ಭಕ್ತಿ, ಸಂಭ್ರಮ ಮತ್ತು ಸಡಗರದಿಂದ ಆಚರಿಸಲಾಯಿತು. ಗ್ರಾಮ ದೇವತೆಗಳಾದ ಶ್ರೀ ಚೌಡೇಶ್ವರಿ ದೇವಿ, ಶ್ರೀ ಮಹೇಶ್ವರಮ್ಮ ದೇವಿ ಹಾಗೂ ಶ್ರೀ ಮುನೇಶ್ವರ ಸ್ವಾಮಿ ಅವರ ಮೂರ್ತಿಗಳನ್ನು ವಿಶೇಷ ಅಲಂಕಾರದೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಗ್ರಾಮದ ಪ್ರಮುಖರು, ಯುವಕರು ಹಾಗೂ ಭಕ್ತಾದಿಗಳು ಉತ್ಸಾಹದಿಂದ ಪಾಲ್ಗೊಂಡು ದೇವರ ಜಯಘೋಷಗಳನ್ನು ಮೊಳಗಿಸಿದರು. ಮೆರವಣಿಗೆ ಸಾಗಿದ ಮಾರ್ಗದಲ್ಲಿ ಮಹಿಳೆಯರು ತಮ್ಮ ಮನೆಗಳ ಮುಂದೆ ಆಕರ್ಷಕ ರಂಗೋಲಿಗಳನ್ನು ಹಾಕಿ, ಹೂವಿನ ಅಲಂಕಾರ ಮಾಡಿ ದೇವತೆಗಳನ್ನು ಭಕ್ತಿ ಭಾವದಿಂದ ಸ್ವಾಗತಿಸಿದರು. ಕುಟುಂಬದ ಸುಖ-ಶಾಂತಿ ಮತ್ತು ಗ್ರಾಮದ ಅಭಿವೃದ್ಧಿಗಾಗಿ ಪ್ರಾರ್ಥನೆ ಸಲ್ಲಿಸಿದರು. ತ್ರಿಶಕ್ತಿ ಉತ್ಸವವು ಗ್ರಾಮದಲ್ಲಿ ಧಾರ್ಮಿಕ ಸೌಹಾರ್ದತೆ, ಏಕತೆಯ ಸಂಕೇತವಾಗಿ ಮೂಡಿಬಂದಿದ್ದು, ಗ್ರಾಮದಾದ್ಯಂತ ಹಬ್ಬದ ವಾತಾವರಣ ನಿರ್ಮಾಣವಾಗಿದ್ದು ಗ್ರಾಮದ ಮುಖಂಡರು, ಯುವಕರು, ಮಹಿಳೆಯರು ಶ್ರದ್ಧಾ ಭಕ್ತಿಯಿಂದ ನಡೆಸಿಕೊಟ್ಟರು.

## ನಗರಸಭೆ ಅಧಿಕಾರಿ ಸಿಬ್ಬಂದಿಗಳ ಚಳಿ ಬಿಡಿಸಿದ ಜಿಲ್ಲಾಧಿಕಾರಿ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೆಜಿಎಫ್

ನಗರಸಭೆ ಕಚೇರಿಗೆ ಆಗಮಿಸುತ್ತಿದ್ದಂತೆ ಕೋಲಾರ ಜಿಲ್ಲಾಧಿಕಾರಿ ಡಾ:ರವಿ ನಗರಸಭೆ ಪೌರಾಯುಕ್ತ ಶ್ರೀಧರ್ ವಿರುದ್ಧ ಗರಂ ಆಗಿ ನಗರಸಭೆ ಆವರಣದಲ್ಲಿ ನಿಲ್ಲಿಸಲು ಒಂದು ನಿರ್ಧಿಷ್ಟ ಜಾಗವನ್ನು ಗುರುತಿಸಿ ಅಲ್ಲಿ ವಾಹನಗಳನ್ನು ನಿಲ್ಲಿಸಲು ಹೇಳಿ ಬೇಕಾಬಿಟ್ಟಿಯಾಗಿ ವಾಹನಗಳನ್ನು ನಿಲುಗಡೆ ಮಾಡಲು ಅವಕಾಶ ನೀಡಬಾರದು ಎಂದು ನಗರಸಭೆ ಪೌರಾಯುಕ್ತ ಶ್ರೀಧರ್ ವಿರುದ್ಧ ಗರಂ ಆದ ಜಿಲ್ಲಾಧಿಕಾರಿ ರವಿ ನೇರವಾಗಿ ಖಾತಾ ಸೆಕ್ಷನ್‌ಗೆ ತೆರಳಿ ಖಾತೆ ಸೆಕ್ಷನ್‌ನಲ್ಲಿ ಎಷ್ಟು ಮಂದಿ ಆರ್ .ಓಗಳು ಆರ್.ಐಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ ನಿಮ್ಮ ಲಾಗಿಂನ್‌ನಲ್ಲಿ ಎಷ್ಟು ಕಡತಗಳು ವಿಲೇವಾರಿ ಮಾಡಲಾಗಿದೆ ಎಷ್ಟು ಬಾಕಿ ಇದೆ ಲೆಕ್ಕ ನೀಡಿ ಎಂದು ಕೇಳುತ್ತಿದ್ದಂತೆ ತಡಬಾಡಯಿಸಿದ ನಗರಸಭೆ ವ್ಯವಸ್ಥಾಪಕ ಜಯರಾಮ್ ,ಆರ್.ಐ ಮುನಿಯಪ್ಪ ಚಂದ್ರಪ್ಪ ಎಲ್ಲವು ಕಂಪ್ಯೂಟರ್‌ನಲ್ಲಿ ಇದೆ ಹೇಳುತ್ತಿದ್ದಂತೆ ಜಿಲ್ಲಾಧಿಕಾರಿ ಡಾ:ರವಿ ಅಸಮಾಧನಗೊಂಡು ನಗರಸಭೆ ಪೌರಾಯುಕ್ತರಾಗಿ ನೀವು ಹೇಗೆ ಕಚೇರಿಯನ್ನು ನಿರ್ವಹಣೆ ಮಾಡುತ್ತಿದ್ದಿರಿ ಎಂದು ತಿಳಿದು ಬರುತ್ತದೆ ಸರ್ಕಾರ ನಿಮಗೆ ಎಲ್ಲಾ ಅಧಿಕಾರವನ್ನು ನೀಡಿದೆ ಏಕೆ ನೀವು ಆಡಳಿತವನ್ನು ಸರಿದಾರಿಗೆ ತರಲು ಸಾಧ್ಯವಾಗುತ್ತಿಲ್ಲ ಎಂದು ತರಾಟೆಗೆ ತೆಗೆದುಕೊಂಡರು.

ಕಂದಾಯ ಸೆಕ್ಷನ್‌ನಲ್ಲಿ ನಿಂತಿದ್ದ ನಾಗರೀರನ್ನು ನೋಡಿ ನಗರಸಭೆಯಲ್ಲಿನ ಕೊಠಡಿಗಳಲ್ಲಿ ಸಾರ್ವಜನಿಕರು ಏಕೆ ಸುಖಸುಮ್ಮನೆ ನಿಲ್ಲಬೇಕು ಅವರನ್ನು ಏಕೆ ನೀವು ನಿಲ್ಲಿಸಿಕೊಂಡು ಇರುತ್ತಿರಿ ಅವರ ಕೆಲಸವನ್ನು ಶೀಘ್ರವಾಗಿ ಮಾಡಿಕೊಟ್ಟು ಕಾರಣವನ್ನು ನೀಡಿ ಕಳುಹಿಸಿಕೊಡಿ ಸಾರ್ವಜನಿಕರು ಸಹ ಸುಮ್ಮನೆ ಕಚೇರಿಗಳಲ್ಲಿ ಸುತ್ತಾಟ ನಡೆಸಬಾರದು ಇದು ಸಿಬ್ಬಂದಿಗಳ ಕರ್ತವ್ಯ ನಿರ್ವಹಣೆಗೆ ಅಡ್ಡಿಯಾಗಲಿದೆ ಆದ್ದರಿಂದ ಸಾರ್ವಜನಿಕರು ಕಚೇರಿಯಿಂದ ಹೊರಗೆ ಹೋಗಿ ಎಂದು ಸಾರ್ವಜನಿಕರಿಗೂ ಬುದ್ದಿ ಮಾತುಗಳನ್ನು ಹೇಳಿದರು . ಜಿಲ್ಲಾಧಿಕಾರಿ ಡಾ:ರವಿ ಹಲವು ದಿನಗಳ ನಂತರ ನಗರಸಭೆ ಕಚೇರಿ ಭೇಟಿ ನೀಡಿ ನೇರವಾಗಿ ಕಂದಾಯ ಸೆಕ್ಷನ್ ಖಾತೆ ಸೆಕ್ಷನ್‌ಗೆ ತೆರಳಿ ಸಂಪೂರ್ಣ ಮಾಹಿತಿಯನ್ನು ಪಡೆದು ಸಿಬ್ಬಂದಿ ಹಾಗೂ ಅಧಿಕಾರಿಗಳಿಗೆ ಛಳಿ ಬಿಡಿಸಿದರು.

## ಚುನಾವಣಾಧಿಕಾರಿಗಳು ಎನ್‌ಡಿಎ ಕೈಗೊಂಬೆ, ಕಾಂಗ್ರೆಸ್ ಪಕ್ಷಕ್ಕೆ ಧಕ್ಕೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಶಿಡ್ಲಘಟ್ಟ

ದಿ. 21ರಂದು ಭಾನುವಾರ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಬಿ.ಕೆ.ಹರಿಪ್ರಸಾದ್ ಪದಗ್ರಹಣ ಕಾರ್ಯಕ್ರಮಕ್ಕೆ ಕ್ಷೇತ್ರದಿಂದ 10 ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ರಾಜೀವ್ ಗೌಡರು ಕರೆ ನೀಡಿದರು. ನಗರದ ಕಾಂಗ್ರೆಸ್ ಭವನದಲ್ಲಿ ಕಾರ್ಯಕರ್ತರ ಸಭೆ ಹಮ್ಮಿಕೊಂಡಿದ್ದು ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು. ಪ್ರತಿ ಪಂಚಾಯತಿಗೆ ಎರಡು ಹಾಗೂ ನಗರ ವ್ಯಾಪ್ತಿಯ ವಾರ್ಡ್ ಗಳಿಗೆ ಒಂದು ಬಸ್ ವ್ಯವಸ್ಥೆ ಮಾಡಲಾಗಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮಕ್ಕೆ ತೆರಳಬೇಕು ಎಂದು ತಿಳಿಸಿದರು. ಈಗಾಗಲೇ ಶಿಡ್ಲಘಟ್ಟ ಕ್ಷೇತ್ರದಿಂದ ಭಾರತ್ ಜೋಡೊ ಕಾರ್ಯಕ್ರಮಕ್ಕೆ ಸಾವಿರಾರು ಸಂಖ್ಯೆಯಲ್ಲಿ ತೆರಳಿ ಯಶಸ್ವಿಯಾಗಿಸಿದ್ದೇವೆ.

ನಾಯಕಿ ಕಾರ್ಯಕ್ರಮಕ್ಕೆ ಕ್ಷೇತ್ರದಿಂದ ಸಾವಿರಾರು ಮಹಿಳಾ ಕಾರ್ಯಕ್ರಮ ಯಶಸ್ವಿಯಾಗಿಸಿದ್ದೇವೆ ಹಾಗೂ ಫ್ರೀಡಂ ಪಾರ್ಕ್‌ನಲ್ಲಿ 75 ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮಕ್ಕೆ ಅತೀ ಹೆಚ್ಚಿನ ಕಾಂಗ್ರೆಸ್ ಕಾರ್ಯಕರ್ತರನ್ನು ಸೇರಿಸಿ ಯಶಸ್ವೀ ಕಾರ್ಯಕ್ರಮ ಮಾಡಿಸಿದ್ದೇವೆ, ದೇವನಹಳ್ಳಿಯಲ್ಲಿ ಕೆ ಹೆಚ್ ಮುನಿಯಪ್ಪ ನವರು ಆಯೋಜನೆ ಮಾಡಲಾಗಿದ್ದ ಸಿ ಎಂ ಕಾರ್ಯಕ್ರಮಕ್ಕೆ ಕ್ಷೇತ್ರದಿಂದ ಸಾವಿರಾರು ಜನ ಸೇರಿಸಿದ ಹೆಗ್ಗಳಿಕೆ ನಮ್ಮದಾಗಿದ್ದು ಡಿ.ಕೆ ಶಿವಕುಮಾರ್ ನನ್ನ ಬೆನ್ನುತಟ್ಟಿ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

## ಪಾಪದ ಹಣದಿಂದ ರಾಜಕೀಯ ಮಾಡಲ್ಲ: ಎಚ್‌ಡಿಕೆ

• ಉದಯವಾಹಿನಿ, ಮೈಸೂರು

ಮುಖ್ಯಮಂತ್ರಿ ಆಗಿದ್ದಾಗ ಸಹಿ ಮಾರಾಟಕ್ಕೆ ಇಟ್ಟಿರಲಿಲ್ಲ. ಈಗಲೂ ಕೇಂದ್ರದಲ್ಲಿ ಸಚಿವನಾಗಿದ್ದೇನೆ, ಎರಡು ಇಲಾಖೆಗಳನ್ನು ವಿಶ್ವಾಸದಿಂದ ನಡೆಸಿಕೊಂಡು ಹೋಗುತ್ತಿದ್ದೇನೆ. ಅಲ್ಲೂ ನನ್ನ ಸಹಿಯನ್ನು ಮಾರಾಟಕ್ಕಿಟ್ಟಿಲ್ಲ ಎಂದು ಕೇಂದ್ರ ಸಚಿವ ಕುಮಮಾರಸ್ವಾಮಿ ಆಕ್ರೋಶ ವ್ಯಕ್ತ ಪಡಿಸಿದ್ದಾರೆ. ಮೈಸೂರಿನಲ್ಲಿ ಮಾತನಾಡಿದ ಅವರು, ನನ್ನ ವಿರುದ್ಧ ಆರೋಪಿಸುವವರಿಂದ ನಾನು ಪ್ರಮಾಣಪತ್ರ ಪಡೆದುಕೊಳ್ಳಬೇಕಿಲ್ಲ' ಎಂದು ಹೇಳಿದರು. ನಮ್ಮೊಂದಿಗೇ ಇದ್ದು ಈಗ ಕಾಂಗ್ರೆಸ್‌ನಲ್ಲಿರುವವರು, ನನ್ನ ಬಂಡವಾಳವನ್ನೆಲ್ಲಾ ಬಿಚ್ಚಿಡುತ್ತೇನೆ ಎಂದು ಹೇಳಿದ್ದಾರೆ, ಬಿಚ್ಚಿಡಲಿ ಎಂದು ಸವಾಲು ಹಾಕಿದರು.

ಚುನಾವಣೆ ಸಂದರ್ಭದಲ್ಲಿ ಮನೆಯಿಂದ ಹಣ ತಂದು ರಾಜಕಾರಣ ಮಾಡುವುದಕ್ಕಾಗುತ್ತಾ, ಆಲೂಗೆಡ್ಡೆ ಬೆಳೆದ ದುಡ್ಡಲ್ಲಿ ಪಕ್ಷವನ್ನು ನಡೆಸಲಿಕ್ಕಾಗುತ್ತಾ? ಎಂದು ಕುಮಾರಸ್ವಾಮಿ ಪ್ರಶ್ನಿಸಿದರು. ರಾಜ್ಯದಲ್ಲಿ ಲಾಟರಿ ನಿಷೇಧಿಸದಂತೆ ಕೋಟ್ಯಂತರ ರೂಪಾಯಿ ಸುರಿಯಲು ಬಂದಿದ್ದರು. ಪಾಪದ ಹಣದಿಂದ ರಾಜಕೀಯ ಮಾಡುವುದಿಲ್ಲ ಎಂದು ಅಧಿಕಾರಿಗೆ ಬೈದು ಕಳಿಸಿದ್ದೆ.

ಆದರೆ, ವಿಧಾನಪರಿಷತ್, ರಾಜ್ಯಸಭಾ ಚುನಾವಣೆಗಳ ಸಂದರ್ಭದಲ್ಲಿ ಟಿಕೆಟ್ ಕೊಡುವಾಗ ಪಕ್ಷಕ್ಕೆ ದೇಣಿಗೆ ತೆಗೆದುಕೊಂಡಿದ್ದೇನೆ. ಅದನ್ನು ಪಕ್ಷ ನಡೆಸಲು ಬಳಸಿದ್ದೇನೆ. ಅದನ್ನೇನೂ ನನ್ನ ಸ್ವಂತಕ್ಕೆ ಬಳಸಿಕೊಂಡಿಲ್ಲ ಎಂದರು.

ಅಂತರಾಳದಿಂದ.. EDITORIAL

# ಹೆಚ್ಚುತ್ತಿರುವ ಡಿಜಿಟಲ್ ವ್ಯಸನ ಏಕರೂಪಿ ಮಾರ್ಗಸೂಚಿ ಅಗತ್ಯ



ತಂತ್ರಜ್ಞಾನ ಕ್ಷೇತ್ರದ ಕ್ರಾಂತಿಕಾರಿ ಆವಿಷ್ಕಾರವಾದ ಕೃತಕ ಬುದ್ಧಿಮತ್ತೆಯ ಬಳಕೆ ಈಗ ಸಾರ್ವತ್ರಿಕವಾಗಿದೆ. ಎಲ್ಲಾ ಕ್ಷೇತ್ರಗಳಲ್ಲೂ ಎಐ ಸದ್ದು ಮಾಡಲಾರಂಭಿಸಿದ್ದು, ಮಾನವನ ಕೆಲಸವನ್ನು ಸುಲಭಸಾಧ್ಯವಾಗಿಸಿದೆ. ಹೀಗಾಗಿ ತಂತ್ರಜ್ಞಾನ ಕ್ಷೇತ್ರದ ಬೆಳವಣಿಗೆಗಳಿಗೆ ತ್ವರಿತಗತಿಯಲ್ಲಿ ಹೊಂದಿಕೊಳ್ಳಲು ವಿಶ್ವ ರಾಷ್ಟ್ರಗಳು ಪೈಪೋಟಿಗೆ ಬಿದ್ದಿದ್ದು ಡಿಜಿಟಲ್ ಸಶಕ್ತ ರಾಷ್ಟ್ರಗಳಾಗಿ ಹೊರಹೊಮ್ಮುವ ಧಾವಂತದಲ್ಲಿವೆ. ದಶಕದ ಹಿಂದೆಯೇ ಶಿಕ್ಷಣದಿಂದ ಹಿಡಿದು ಪ್ರತಿಯೊಂದು ಕ್ಷೇತ್ರದಲ್ಲೂ ತಂತ್ರಜ್ಞಾನವನ್ನು ಪ್ರಾಯೋಗಿಕ ನೆಲೆಯಲ್ಲಿ ಅಳವಡಿಸಿಕೊಂಡಿದ್ದ ರಾಷ್ಟ್ರಗಳು ಅದಕ್ಕೆ ಒಗ್ಗಿಕೊಂಡಿದ್ದು, ಈಗ ಇದರ ನಕಾರಾತ್ಮಕ ಪರಿಣಾಮಗಳನ್ನು ಎದುರಿಸುತ್ತಿವೆ. ಮೊಬೈಲ್, ಇಂಟರ್‌ನೆಟ್, ಡಿಜಿಟಲ್ ಮಾಧ್ಯಮಗಳು, ಸಾಮಾಜಿಕ ಜಾಲತಾಣಗಳು, ಎಐಗೆ ಸಂಪೂರ್ಣವಾಗಿ ತೆರೆದುಕೊಂಡಿದ್ದ ಈ ರಾಷ್ಟ್ರಗಳು ಈಗ ಒಂದೊಂದಾಗಿಯೇ ನಿಷೇಧ, ನಿರ್ಬಂಧಗಳನ್ನು ಹೇರಲಾರಂಭಿಸಿವೆ. ಇಂತಹ ರಾಷ್ಟ್ರಗಳ ಸಾಲಿಗೆ ಹೊಸ ಸೇರ್ಪಡೆ ಅರಬ್ ರಾಷ್ಟ್ರವಾದ ಯುಎಇ.

ಮಕ್ಕಳು ಮತ್ತು ಯುವಜನತೆ ಈ ಡಿಜಿಟಲ್ ವ್ಯಸನದ ಬಲಿಪಶುಗಳಾಗುತ್ತಿರುವುದು ವಿಶ್ವದ ಹಲವು ರಾಷ್ಟ್ರಗಳಲ್ಲಿ ಈಗಾಗಲೇ ಸಾಬೀತಾಗಿದೆ. ಈ ಕಾರಣದಿಂದಾಗಿಯೇ ಕಳೆದೊಂದು ವರ್ಷದಿಂದೀಚೆಗೆ ವಿಶ್ವದ ಹಲವು ರಾಷ್ಟ್ರಗಳು ಸಾಮಾಜಿಕ ಜಾಲತಾಣಗಳ ಬಳಕೆಗೆ ಸಂಬಂಧಿಸಿದಂತೆ 13-18 ವರ್ಷದೊಳಗಿನ ಮಕ್ಕಳಿಗೆ ವಿವಿಧ ತೆರನಾದ ನಿರ್ಬಂಧಗಳನ್ನು ಹೇರಿವೆ. ಕೆಲವು ರಾಷ್ಟ್ರಗಳಲ್ಲಿ ಈಗಾಗಲೇ ಇಂತಹ ನಿರ್ಬಂಧ, ನಿಷೇಧಗಳು ಜಾರಿಯಾಗಿದ್ದರೆ, ಮತ್ತೆ ಕೆಲವು ರಾಷ್ಟ್ರಗಳು ಅದೇ ಹಾದಿಯಲ್ಲಿ ಹೆಜ್ಜೆ ಇರಿಸಿವೆ. ಭಾರತದಲ್ಲಿ ಕರ್ನಾಟಕ ಸಹಿತ ಕೆಲವು ರಾಜ್ಯಗಳಲ್ಲಿ ಇಂತಹುದೇ ತೀರ್ಮಾನಗಳನ್ನು ಕೈಗೊಳ್ಳಲಾಗಿದೆ. ಇನ್ನು ಡಿಜಿಟಲ್ ಶಿಕ್ಷಣದತ್ತ ಮುಖ ಮಾಡಿದ್ದ ಯುರೋಪಿಯನ್ ರಾಷ್ಟ್ರಗಳು ಈಗ ಒಂದೊಂದಾಗಿ ಮರಳಿ ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಗೆ ಹೊರಳಿಕೊಳ್ಳಲಾರಂಭಿಸಿವೆ. ಮಕ್ಕಳಲ್ಲಿ ಹೆಚ್ಚುತ್ತಿರುವ ಡಿಜಿಟಲ್ ವ್ಯಸನದಿಂದಾಗಿ ಏಕಾಗ್ರತೆ ಕೊರತೆ, ಗಮನ ವಿಕೇಂದ್ರೀಕರಣ, ನೈಜ ಬುದ್ಧಿಮತ್ತೆ ಮತ್ತು ಆಲೋಚನ ಶಕ್ತಿಯ ಕುಂಠಿತ, ಅಸಹನೆ, ಸಿಡುಕು, ನಿದ್ರಾಹೀನತೆ, ಒಂಟಿತನ, ಖಿನ್ನತೆಯಂತಹ ಸಮಸ್ಯೆಗಳಿಗೆ ಕಾರಣವಾಗುತ್ತಿರುವುದು ವಿವಿಧ ಸಮೀಕ್ಷೆಗಳು ಮತ್ತು ಅಧ್ಯಯನದ ವೇಳೆ ದೃಢಪಟ್ಟಿವೆ. ಅಷ್ಟು ಮಾತ್ರವಲ್ಲದೆ ಈ ಡಿಜಿಟಲ್ ವ್ಯಸನ ಸಾಮಾಜಿಕ ಸಮಸ್ಯೆಯಾಗಿಯೂ ಮಾರ್ಪಡುತ್ತಿದೆ.

## ವಿವಿಧ ವೈದ್ಯಕೀಯ ಸಂಸ್ಥೆಗಳು ಎಚ್ಚರಿಕೆ

ಸಾಮಾಜಿಕ ಜಾಲತಾಣಗಳ ಸಹಿತ ಡಿಜಿಟಲ್ ತಂತ್ರಜ್ಞಾನದ ಮಿತಿಮೀರಿದ ಬಳಕೆ ಮಕ್ಕಳ ಮೇಲೆ ಶಾರೀರಿಕ, ಮಾನಸಿಕ ಮತ್ತು ಭಾವನಾತ್ಮಕವಾಗಿ ನಕಾರಾತ್ಮಕ ಪರಿಣಾಮ ಬೀರುತ್ತಿರುವ ಬಗೆಗೆ ವಿಶ್ವ ಆರೋಗ್ಯ ಸಂಸ್ಥೆಯಾದಿಯಾಗಿ ವಿವಿಧ ವೈದ್ಯಕೀಯ ಸಂಸ್ಥೆಗಳು ಎಚ್ಚರಿಕೆ ನೀಡುತ್ತಲೇ ಬಂದಿವೆ.

ಇದರ ಹೊರತಾಗಿಯೂ ವಿಶ್ವದ ಬಹುತೇಕ ರಾಷ್ಟ್ರಗಳು ತಂತ್ರಜ್ಞಾನ ಕ್ಷೇತ್ರದ ನವನವೀನ ಆವಿಷ್ಕಾರಗಳನ್ನು ಬರಸೆಳೆದು ಬಿಗಿದಪ್ಪಿಕೊಳ್ಳಲು ಸ್ಪರ್ಧೆಗಿಳಿದಿವೆ.

ಇಂದಿನ ತಂತ್ರಜ್ಞಾನ ಯುಗದಲ್ಲಿ ಇದು ಅನಿವಾರ್ಯ ಎಂದೆನಿಸಿದರೂ ಯಾವುದೇ ಗೊತ್ತುಗುರಿ ಇಲ್ಲದೆ, ಕನಿಷ್ಠ ವಿವೇಚನೆಯನ್ನೂ ಮಾಡದೆ ತಂತ್ರಜ್ಞಾನವನ್ನು ಅಳವಡಿಸಿಕೊಂಡುದದರ ಪಾರ್ಶ್ವ ಪರಿಣಾಮಗಳನ್ನು ಈ ಎಲ್ಲಾ ರಾಷ್ಟ್ರಗಳು ಎದುರಿಸುತ್ತಿವೆ.

ಈ ಹಿನ್ನೆಲೆಯಲ್ಲಿ ಸಾಮಾಜಿಕ ಜಾಲತಾಣ, ಡಿಜಿಟಲ್ ವ್ಯವಸ್ಥೆ, ಎಐ ತಂತ್ರಜ್ಞಾನದ ಬಳಕೆಗೆ ಸಂಬಂಧಿಸಿದಂತೆ ವಿಶ್ವವ್ಯಾಪಿ ಅನ್ವಯವಾಗುವಂತೆ ಏಕರೂಪದ ಮಾರ್ಗಸೂಚಿಯನ್ನು ರೂಪಿಸಿ ಜಾರಿಗೊಳಿಸಬೇಕು. ತಂತ್ರಜ್ಞಾನ ಮಾನವನ ಸಹಾಯಕನಾಗಿ ಆತನ ಕೆಲಸಕಾರ್ಯಗಳನ್ನು ಸರಳಗೊಳಿಸಲು ಬಳಕೆಯಾಗಬೇಕೇ ವಿನಾ ಮಾನವನೇ ತಂತ್ರಜ್ಞಾನದ ದಾಸನಾಗುವಂತಾದರೆ ಮನುಕುಲಕ್ಕೆ ಅಪಾಯ ನಿಶ್ಚಿತ.

ಈಗ ವಿಶ್ವ ರಾಷ್ಟ್ರಗಳು ಅನುಸರಿಸುತ್ತಿರುವ ನಿಷೇಧ, ನಿರ್ಬಂಧಗಳೇನೇ ಇದ್ದರೂ ಈ ಸಮಸ್ಯೆಗೆ ತಾತ್ಕಾಲಿಕ ಪರಿಹಾರ ಕ್ರಮಗಳಾದವೇ ವಿನಾ ಹಾಲಿ ಸೃಷ್ಟಿಯಾಗಿರುವ ಸಮಸ್ಯೆಗೆ ಎಂದಿಗೂ ಶಾಶ್ವತ ಪರಿಹಾರವಾಗಲಾರದು. ಮುಳ್ಳನ್ನು ಮುಳ್ಳಿನಿಂದಲೇ ಕೀಳುವಂತೆ ತಂತ್ರಜ್ಞಾನದ ದುರುಪಯೋಗ, ಮಿತಿಮೀರಿದ ಬಳಕೆಗೆ ತಂತ್ರಜ್ಞಾನದ ಮೂಲಕವೇ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಈಗಿನ ಆವಶ್ಯಕತೆ.




• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ಭವಾನಿ ಮುಂದೆ ಆದುದನ್ನು ಕೇಳು, ಮೃದು ಮಾತುಗಳಿಂದಲೇ ಅಂಜನಾಸುತನು ಹೇಳಿದ ಹಿತವಚನಗಳನ್ನು ಕೇಳಿದ ದೈತ್ಯಪತಿಯು ಕಾಳಿಂಗನಂತೆ ಬುಸುಗುಟ್ಟುತ್ತ ಹಲ್ಲು ಕಡಿಯುತ್ತ ನಿಷ್ಠುರವಾಗಿ, ಇವನಂತಹ ತಲೆಹರಟೆಯನ್ನು ನಾನೆಲ್ಲಿಯೂ ಕಾಣಲಿಲ್ಲ. ಇವನನ್ನು ತರಿಯದೆ ಉಳಿಸಿದರೆ ಲೋಕವನ್ನು ಸಂಕಟಕ್ಕೀಡುಮಾಡುತ್ತಾನೆ. ದಶಮೌಳಿಗೆ ಈ ಬಗೆಯಲ್ಲಿ ಬುದ್ಧಿ ಹೇಳುವ ಇವನನ್ನು ಹೊಸೆದು ಹಾಕಿ ಎಂದು ರಾಕ್ಷಸರಿಗೆ ಆಜ್ಞೆಮಾಡಿದ. ಅದರಂತೆ ದಾನವರು ಹನುಮನನ್ನು ಹಿಡಿಯಲು ಬಂದಾಗ ಅವರನ್ನೆಲ್ಲ ಅಪ್ಪಳಿಸಿ ಬಿಸುಟ. ಇದನ್ನು ಕಂಡ ವಿಭೀಷಣನು ಕೊಂಚ ಹೊತ್ತು ಯೋಚನೆ ಮಾಡಿ, ಅಣ್ಣನ ಬಳಿ ಬಂದು ಅವನ ಪಾದಸರೋಜಗಳಿಗೆ ನಮಿಸಿ ಮಧುರದ್ದನಿಯಿಂದ, ಸಕಲಾಗಮಜ್ಞನೂ ಸರ್ವಜ್ಞನೂ ಶಾಸ್ತ್ರಪಂಡಿತನೂ ಆದ ನಿನ್ನ ಪಾದಗಳಿಗೆ ತಿಳಿಯದುದು ಏನಿದೆ? ಯುಕ್ತಿಯುಕ್ತವಾಗಿದ್ದರೆ ಮಕ್ಕಳ ಹಾಗೂ ಗಿಳಿಗಳ ಮಾತಿಗೂ ಕಿವಿಗೊಡಬೇಕು ಎಂದು ಬಲ್ಲವರು ಹೇಳುತ್ತಾರೆ. ಆದ್ದರಿಂದ ನೀನು ಈ ವಿಷಯದಲ್ಲಿ ನಿನ್ನ ಈ ಸೇವಕನ ಮಾತನ್ನು ಕೇಳು. ದೇವತೆಗಳಿರಲಿ, ನಮುಚಿ ಮುಂತಾದ ಅಸುರಮುಖ್ಯರೂ ರಾಜಧರ್ಮವನ್ನು ಮೀರದೆ ನಿಡುಗಾಲ ದೊರೆತನವನ್ನು ಹೊಂದಿ ಬಾಳಿದರೆಂಬುದು ನಿನಗೆ ತಿಳಿಯದುದೇನಲ್ಲ. ಈ ಶಾಖಾಮೃಗವನ್ನು ಕೊಲ್ಲುವುದು ನಿನ್ನ ಅರಸುತನಕ್ಕೆ ಊನ, ಸಜ್ಜನರಿಗೆ ಅಹಿತಕರ, ಧರೆಯಲ್ಲಿ ಅಪಖ್ಯಾತಿ. ಸದ್ವರ್ತನೆಗೆ ಎರುದ್ಧವಾದುದರಿಂದ ಒಂದು ಮಾತನ್ನು ಹೇಳುತ್ತೇನೆ, ಕೇಳು ಇವನು ಶತ್ರು, ಮಾಡಿದ ತಪ್ಪುಗಳು ಅನೇಕ, ಹಾಗಾಗಿ ವಧೆಗೈಯುವುದು ತಪ್ಪೇನಲ್ಲವಾದರೂ, ಇವನು ದೂತ ದೂತವಧೆ ರಾಜಧರ್ಮಸಮ್ಮತವಲ್ಲ. ಚಾಟಿಯಿಂದ ಹೊಡೆಯಬಹುದು, ಅಂಗಚ್ಛೇದ ಮಾಡಬಹುದು, ಆದರೆ ದೂತರನ್ನು ಕೊಲ್ಲುವುದು ಲೋಕವು ಅರಿಯದ ವಿಷಯ. ಆದ್ದರಿಂದ ವಾಪಸ್ಸು ಹೋಗಿ ತನ್ನ ಒಡೆಯನಿಗೆ ತೋರಿಸಬಹುದಾದಂತಹ ಒಂದು ಗುರುತನ್ನು ಮಾಡಿ ಕಳಿಸುವುದು ಉತ್ತಮ. ಸಮುದ್ರವೇ ಮೇರೆ ಮೀರಿದರೆ ತಡೆಯುವವರಾರು? ತಿಳಿವಳಿಕೆಯುಳ್ಳ ಅರಸರೇ ಈ ಪರಿ ಕೋಪಾಗ್ನಿಯನ್ನುಗುಳಿದರೆ ಮಿಕ್ಕವರ ಪಾಡೇನು? ಹೊಟ್ಟೆ ಹೊರೆಯುವುದಕ್ಕಾಗಿ ತನ್ನ ದೇಹವನ್ನು ಮಾರಿಕೊಂಡು ತನ್ನ ಒಡೆಯನ ಆಜ್ಞೆಯನ್ನು ಭಯದಿಂದ ಮನಸಿನಲ್ಲಿರಿಸಿಕೊಂಡು ಸಂಚರಿಸುವ ಇಂತಹ ಸೇವಕರಲ್ಲಿ ಗುಣದೋಷಗಳಲ್ಲಿಯವು? ಕಡಲನ್ನು ದಾಟಿ ದೇವಾಸುರರಿಗೂ ಅಸಾಧ್ಯವಾದ ಸ್ಥಳಗಳಲ್ಲಿ ಸಂಚರಿಸಿ ನಿನ್ನ ಸಮ್ಮುಖದಲ್ಲಿ ನಿಂತು ತನ್ನ ಒಡೆಯನನ್ನು ಹೊಗಳುತ್ತಿರುವುದು ಅಚ್ಚರಿಯೇ ಸರಿ. ತನಗೆ ಬರುವ ಆಪತ್ತುಗಳನ್ನು ಲೆಕ್ಕಿಸದೆ ಅನ್ನಿಸಿದುದೆಲ್ಲವನ್ನೂ ಮರೆಮಾಚದೆ ಹೇಳುವ ಇವನು ಅಕಳಂಕ ಭೃತ್ಯ, ಇವನು ಹೋಗಿ ನಿನ್ನ ಶೌರ್ಯವನ್ನು ವರ್ಣಿಸಿದರೆ ಶತ್ರುಗಳ ನಡುವೆ ನಿನ್ನ ಕೀರ್ತಿ ಬೆಳಗುವುದಿಲ್ಲವೇ? ಇವನನ್ನು ಹೊರತುಪಡಿಸಿದರೆ ದಶಶಿರನ ಅರಮನೆಯ ಒಳಗೆ ಯಾರು ತಾನೇ ನುಸುಳಬಲ್ಲರು? ಸುವಿವೇಕಿಯಾಗಲೀ ಅವಿವೇಕಿಯಾಗಲೀ ಭೃತ್ಯವಧೆ ಸರಿಯಲ್ಲ, ರಾಜಧರ್ಮಗಳನ್ನು ವಿಶದವಾಗಿ ಬಲ್ಲ ನಿನಗೆ ಹೆಚ್ಚಿಗೆ ಏನು ಹೇಳಬಲ್ಲೆ? ಇವನನ್ನು ಹೊರತು ನಿನ್ನ ಸಿರಿಸಂಪದ ಬಲಶೌರ್ಯಗಳನ್ನು ಶತ್ರುಗಳ ಬಳಿ ಹೋಗಿ ಹೇಳುವವರಾರು, ಅದನ್ನು ನೋಡಲು ಬರುವವರಾರು, ಹೋರಾಡುವುದು ಯಾರ ಜೊತೆ ದೂತದಂಡನೆ ದೋಷಕರವಾದುದು ಅಲ್ಲದೆ ಒಂದು ಕಪಿಯನ್ನು ಕೊಂದ ರಾಜನಿವನು ಎಂಬ ಅಪಕೀರ್ತಿ ಅಂಟಿಕೊಳ್ಳುವುದು ಒಂದು ನಿನ್ನ ಶೌರ್ಯೋನ್ನತಿಗೆ ಕಳಂಕವುಂಟಾಗುವುದು ಎರಡು ನಿನ್ನ ವೈಭವವು ಶತ್ರುಗಳಿಗೆ ಗೊತ್ತಾಗದಿರುವುದು. ಮೂರು - ಹೀಗೆ ಮುಪ್ಪುರಿ ದೋಷವುಂಟಾಗುತ್ತದೆ ಎಂದು ದೂತವಧೆಯ ದೋಷಗಳನ್ನು ವಿವರಿಸಿದ.

ಲೋಕಸಮ್ಮತವಾದ ಹಿತೋಕ್ತಿಗಳನ್ನು ಹೇಳಿದ ತನ್ನ ತಮ್ಮನನ್ನು ನೋಡಿ ಸಂತಸದಿಂದ, ಕಪಿವೀರನನ್ನು ಕೊಲ್ಲಲು ಹೊರಟ ದೈತ್ಯರನ್ನು ದೂರಸರಿಯಲು ಹೇಳಿ, ಅವನಿಗೆ ವಿರೂಪವನ್ನುಂಟುಮಾಡಿರಿ ಎಂದು ಆಜ್ಞೆಯಿತ್ತ. ಆಗ ಅಸಮವೀರನಾದ ಇಂದ್ರಜಿತುವು ತಂದೆಗೆ, ಯಾವುದೇ ಆಯುಧದಿಂದ ಹೊಡೆದರೂ ಇವನು ಬಗ್ಗುವುದಿಲ್ಲ ಇವನದು ವಜ್ರದಂತಹ ದೇಹ ಮಹಾ ಪರಾಕ್ರಮಿ, ಇಂದ್ರ ಮೊದಲಾದವರನ್ನೇ ಲೆಕ್ಕಕ್ಕಿಡದವನು. ನಾನು ಹಿಂದೆಯೇ ಹೇಳಿದೆ, ಇವನು ಅಂಜುವುದು ಬೆಂಕಿಗೆ ಮಾತ್ರ, ಎಕ ಕಪಿಯ ಕಡೆಗೆ ದೊಂದಿಯನ್ನು ಹಿಡಿದರೆ ಹನುಮನು ಹಲ್ಲುಕಿರಿದು ಕಪಿತನವನ್ನು ತೋರಿಸಲು ನೆರೆದವರೆಲ್ಲ ನಕ್ಕರು.

ಮುಂದುವರೆಯುವುದು

# ಪೈಲ್ವಾನರ ಉಕ್ಕಿನ ಮೈಕಟ್ಟಿಗೆ ತುಪ್ಪದ ಬಲ

ಕೆಮ್ಮಣ್ಣಿನ ಗರಡಿಮನೆಯ ಅಂಗಳದಲ್ಲಿ ಹನುಮನ ಸ್ಮರಣೆಯೊಂದಿಗೆ ಮೊಳಗುತ್ತಿದ್ದ ಮಲ್ಲರ ಜಯಘೋಷ ಇಂದಿಗೂ ದಂತಕಥೆ. ಕೃತಕ ಪೂರಕಗಳ ಸುಳಿವೇ ಇಲ್ಲದ ಆ ಕಾಲದ ವೀರಪೈಲ್ವಾನರ ವಜ್ರಕಾಯದ ಹಿಂದಿನ ಗುಪ್ತಶಕ್ತಿ ಅಪ್ಪಟ ದೇಸಿ ತುಪ್ಪ. ಅದು ಕೇವಲ ರುಚಿಕರ ಪದಾರ್ಥವಾಗಿರದೆ, ಕಾಯವನ್ನು ಉಕ್ಕಿನಂತೆ ದೃಢಗೊಳಿಸುವ ಪ್ರಾಕೃತಿಕ ಸಂಜೀವಿನಿಯಾಗಿತ್ತು. ಅಖಾಡದಲ್ಲಿ ಸಿಂಹದಂತೆ ರಾರಾಜಿಸಲು ಬೇಕಾದ ಸಾತ್ವಿಕ ಸ್ನಿಗ್ಧತೆಯನ್ನು ತುಪ್ಪವು ಹಂತಹಂತವಾಗಿ ಒದಗಿಸುತ್ತಿತ್ತು.

ಆಯುರ್ವೇದದ ಪ್ರಕಾರ, ತುಪ್ಪವು ಜಠರಾಗ್ನಿಯನ್ನು ವೃದ್ಧಿಸಿ, ಸೇವಿಸಿದ ಆಹಾರದ ಪರಿಪೂರ್ಣ ಸತ್ವವು ರಕ್ತಗತವಾಗಲು ಸಹಕಾರಿಯಾಗಿದೆ. ಆದರೆ ಸೇವಿಸಿದ ತುಪ್ಪವು ಶಕ್ತಿಯಾಗಿ ಪರಿವರ್ತನೆಯಾಗಬೇಕೇ ಹೊರತು ಶರೀರದ ಭಾರವಾಗಬಾರದು ಎಂಬುದೇ ಮಲ್ಲರ ನಿಯಮ. ಅದಕ್ಕಾಗಿಯೇ ಅವರು ತಿಂದಷ್ಟನ್ನು ಅಖಾಡದಲ್ಲಿ ಬೆವರಾಗಿ ಸುಡುತ್ತಿದ್ದರು. ಕನಿಷ್ಠ ಒಂದು ತಾಸು ಕಠಿಣ ವ್ಯಾಯಾಮವಿಲ್ಲದವರು ಮಿತಿಮೀರಿ ಸೇವಿಸುವುದು ರಕ್ತನಾಳಗಳಲ್ಲಿ ಕೊಬ್ಬು ಶೇಖರಣೆಗೆ ಕಾರಣವಾಗಬಹುದು.

ಹೃದಯ ಹಾಗೂ ಯಕೃತ್ ಸಂಬಂಧಿ ಸಮಸ್ಯೆಗಳಿರುವವರು ತಜ್ಞರ ಸಲಹೆಯಿಲ್ಲದೆ ಸೇವಿಸುವುದು ವಿಹಿತವಲ್ಲ. ಸಾಂಪ್ರದಾಯಿಕವಾಗಿ ಸಿದ್ಧಪಡಿಸಿದ ಹಸುವಿನ ತುಪ್ಪವೇ ಶ್ರೇಷ್ಠ. ಇಂದಿನ ಯುವಜನತೆ ಕೃತಕ ಸ್ನಾಯುವರ್ಧಕಗಳ ಮೋಹಕ್ಕೆ ಒಳಗಾಗುವ ಬದಲು, ನಮ್ಮ ಪೂರ್ವಜರ ಈ ಪುಷ್ಟಿದಾಯಕ ಪರಂಪರೆಯನ್ನು ಅರಿತುಕೊಳ್ಳಬೇಕು. ಮಿತವಾಗಿ ದೇಸಿ ತುಪ್ಪವನ್ನು ಸೇವಿಸಿ, ಅದಕ್ಕೆ ತಕ್ಕಂತೆ ದೈಹಿಕ ಶ್ರಮವಹಿಸಿದರೆ ಆಜನ್ಮ ಸದೃಢ ಕಾಯವನ್ನು ಹೊಂದಲು ಸಾಧ್ಯ. ಮಣ್ಣಿನ ಮಗನ ಉಕ್ಕಿನ ಮೈಕಟ್ಟಿಗೆ ತುಪ್ಪದ ಬಲವೇ ನಿಜವಾದ ಜೀವಾಳ.

**ಮೂಳೆಗಳ ಘರ್ಷಣೆ**

ಕುಸ್ತಿಯ ಕಠಿಣ ಪಟ್ಟುಗಳಲ್ಲಿ ಕೀಲುಗಳ ಮೇಲೆ ಬೀಳುವ ಅಸಹನೀಯ ಒತ್ತಡವನ್ನು ತುಪ್ಪ ಸಮರ್ಥವಾಗಿ ನಿವಾರಿಸುತ್ತಿತ್ತು. ಕೀಲುಗಳ ಮಧ್ಯೆ ಸಚೇತಕ ದ್ರವದಂತೆ ಕಾರ್ಯನಿರ್ವಹಿಸಿ, ಮೂಳೆಗಳ ಘರ್ಷಣೆಯನ್ನು ತಡೆದು ಇಳಿವಯಸ್ಸಿನಲ್ಲೂ ನೋವು ಸುಳಿಯದಂತೆ ಕಾಯುತ್ತಿತ್ತು. ಮಲ್ಲರು ದಿನಕ್ಕೆ 50ರಿಂದ 100 ಗ್ರಾಂ ತುಪ್ಪವನ್ನು ಬಿಸಿಯಾದ ಅನ್ನ, ಸಜ್ಜೆ ರೊಟ್ಟಿ ಅಥವಾ ಉಗುರುಬೆಚ್ಚಗಿನ ಹಾಲಿನೊಂದಿಗೆ ಸೇವಿಸುತ್ತಿದ್ದರು.



ಅಂತರಂಗದ ಮಾತು
ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು





ಲೇಖಕರು
ವಿಶ್ವಾಸ್ .ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

## ಒಳ್ಳೆಯ ಆಲೋಚನೆಗಳನ್ನು ಮಾಡುವ ಕಲೆ

ಬಯಕೆಯೇ ಒಳ್ಳೆಯ ಆಲೋಚನೆಗಳನ್ನು ಮೂಡಿಸುತ್ತದೆ. ಚಿತ್ರ ತಯಾರಕ ತಾನೊಂದು ಚಿತ್ರ ತೆಗೆದು ಯಶಸ್ವಿಯಾಗುತ್ತಾನೆ ಎಂದುಕೊಳ್ಳಿ. ಅವನಿಗೆ ಇನ್ನೂ ಉತ್ತಮ ಚಿತ್ರ ತೆಗೆಯಬೇಕೆಂಬ ಭಾವನೆಯೇ ಅವನನ್ನು ಆಲೋಚನಾಪರನನ್ನಾಗಿಸುತ್ತದೆ. ಆಲೋಚನೆ ಅರ್ಥಾತ್ ಐಡಿಯಾಗಳು ನಿಮಗೆ ಅವಶ್ಯಕ. ಅವನ್ನು ನೀವು ಬಯಸಿಯೂ ಇರಬೇಕು. ಎಷ್ಟೋ ಜನ ಧೂಮಪಾನಿಗಳು, ಇಸ್ಪೀಟ್, ಜೂಜು ಆಡುವವರು, ಮದ್ಯವ್ಯಸನಿಗಳು ತುಂಬಾ ನಿಧಾನವಾಗಿ ಒಳ್ಳೆಯ ಐಡಿಯಾಗಳಿಗೆ ಆಶಿಸುತ್ತಾರೆ. ಅಂದರೆ ಅವರು ಈ ವ್ಯಸನಗಳಿಂದ ದೂರವಾಗಲು ಬಯಸುತ್ತಾರೆ ಎಂದಾಯ್ತು. ಇಂತಹವರು ಮೊದಲು ನೆಗೆಟಿವ್ ಆಗಿರುತ್ತಾರೆ. ಬೇಕಾದಷ್ಟು ಧನಾತ್ಮಕ ಆಲೋಚನೆಗಳಿದ್ದಾಗ್ಯೂ ಆ ಬಗ್ಗೆ ಇವರು ಯೋಚಿಸಿರುವುದಿಲ್ಲ. ಅವರು ದುಶ್ಚಟಗಳನ್ನು ಬಿಡಲು ಇಚ್ಚಿಸಿರುವುದಿಲ್ಲ. ಯಶಸ್ಸಿನ ಮೌಲ್ಯ ತಿಳಿಯದ ಅವರು ಜೀವನದ ವಾಸ್ತವ ಸತ್ಯಗಳನ್ನು ಎದುರಿಸಲು ಬಯಸಿರುವುದಿಲ್ಲ. ಬದಲಾವಣೆಯೇ ಅವರಿಗೆ ಬೇಡ. ಸಂಜೆಯಾಯಿತೆಂದರೆ ಕ್ಲಬ್ಬು, ಬಾರ್‌ಗಳೇ ಅವರ ಗುರಿ. ಇಂತಹವರಿಗೆ ಒಳ್ಳೆ ಐಡಿಯಾಗಳು ಬರುವ ಅವಕಾಶವೇ ಇಲ್ಲ.

ನೀವು ನಿಮ್ಮ ಸಮಸ್ಯೆಗಳೇನೆಂದು ಸುಪ್ತ ಮನಸ್ಸಿನಲ್ಲಿ ಹರಿಯಬಿಟ್ಟರೆ ಆಲೋಚನೆಗಳು, ಪರಿಹಾರಗಳು ಹೊಳೆದಾವು. ಸಂಶೋಧನಾತ್ಮಕ ಹಾಗೂ ಸೃಷ್ಟಾತ್ಮಕ ಪ್ರವೃತ್ತಿ ಕೇವಲ ವರವೇ ಆಗಬೇಕಿಲ್ಲ. ಪ್ರಯತ್ನದಿಂದ ಇವೆಲ್ಲ ಸಾಧ್ಯ. ಯಶಸ್ಸು ಮೂಡಿಸುವ ಐಡಿಯಾಗಳು ಆ ದಿಶೆಯಲ್ಲಿ ಗಂಭೀರವಾಗಿ ಬುದ್ಧಿವಂತರಾಗಿ ಚಿಂತನೆ ಮಾಡುವವರಿಗೆ ಮಾತ್ರ ಲಭ್ಯ

# ಹತಾಶ ವ್ಯಕ್ತಿಗಳಿಂದ ದೂರವಿರಿ

**ಧನಾತ್ಮಕ ಚಿಂತನೆ**

ಸಸ್ಯಗಳಿಗೆ ಬೀಳುವ ಕೀಟಗಳಂತೆ ಜೀವನದಲ್ಲಿ ನಿರಾಶಾವಾದಿಗಳ ಗೆಳೆತನ. ನೀವು ಯಾವಾಗಲೂ ಋಣಾತ್ಮಕ ಚಿಂತನೆಗೆ ತೊಡಗಿದ್ದರೆ ನಿರಾಶಾವಾದಿಗಳಾಗುತ್ತಿದ್ದೀರಿ ಎಂದು ಭಾವಿಸಿ. ನಿರಾಶಾವಾದಿಗಳಿಗೆ ತಾವು ಎಷ್ಟು ಋಣಾತ್ಮಕ (ನೆಗೆಟಿವ್) ಎಂದು ತಿಳಿದಿರುವುದಿಲ್ಲ. ತಾವು ನಡೆಯುತ್ತಿರುವುದೇ ಸರಿ ಎಂದು ಭಾವಿಸಿರುತ್ತಾರೆ.

ಋಣಾತ್ಮಕ ಚಿಂತನೆ ನಿಮ್ಮನ್ನು ಉದ್ರೇಕಗೊಳ್ಳುವಂತೆ ಮಾಡುತ್ತದೆ. ಇದು ಮನಸ್ಸಿನ ಮೇಲೆ ಭಾರಿ ಪರಿಣಾಮ ಬೀರಿ ನಿಮ್ಮ ಚೈತನ್ಯವನ್ನು ಕುಗ್ಗಿಸುತ್ತದೆ.

ಕೆಲವರು ಆಫೀಸಿಗೆ ಬರುತ್ತಿದ್ದಂತೆ ಹೇಗಪ್ಪಾ ಈ ದಿನವನ್ನು ಕಳೆಯುವುದು? ಎಂದು ಗೊಣಗುತ್ತಲೇ ಬಂದರೆ ಅವರು ಅಲ್ಲಿಗೆ ಬಾರದಿರುವುದೇ ಒಳ್ಳೆಯದು. ಒಂದು ಕಾಲಕ್ಕೆ ಕೆಲಸ ಸಿಕ್ಕಿದರೆ ಸಾಕು ಎನ್ನುತ್ತಿದ್ದವರು, ಕೆಲಸ ಸಿಕ್ಕಿದ ಮೇಲೆ ಕೆಲಸದಲ್ಲಿ ಆಸಕ್ತಿ ತೋರಿಸಲು ಹಿಂಜರಿಯುತ್ತಾರೆ. ಋಣಾತ್ಮಕತೆಯಿಂದ ಆದಾಯವೂ ಕುಗ್ಗುತ್ತದೆ. ಅಂಥವರು ಕೆಲಸ ಮಾಡದೆ ಹೋಗಿ ಮೈ ಜಡವಾಗುತ್ತದೆ. ದೀರ್ಘವೇಳೆಗಳ ಕಾಲ ಅವರು ಕೆಲಸ ಮಾಡಲು ಸಾಧ್ಯವೇ ಆಗುವುದಿಲ್ಲ.

ನಾವು ಎಂದೂ ಧನಾತ್ಮಕ ಚಿಂತನೆ ಮಾಡುವ ಜನಗಳೊಂದಿಗೆ ಬೆರೆಯಬೇಕು. ಅಂಥವರ ಗೆಳೆತನಕ್ಕಾಗಿ ಹಾತೊರೆಯಬೇಕು. ಸದಾ ಕೊರಗುವವರೊಡನಿದ್ದರೆ ನೀವೂ ಕೊರಗಲು ಕಲಿಯುವಿರಿ. ಧನಾತ್ಮಕ ಜನರೊಂದಿಗಿನ ಒಡನಾಟ ಅಮೂಲ್ಯ. ಅವರೊಂದಿಗೆ ಎಷ್ಟು ವೇಳೆ ಕಳೆದರೂ ಅದು ಲಾಭವೇ.

ಸಮಾಜದಲ್ಲಿ ಎರಡು ರೀತಿಯ ಜನರಿರುತ್ತಾರೆ. ಆದುದರಿಂದ ನೆಗೆಟಿವ್ ಋಣಾತ್ಮಕ ಭಾವನೆ ಇರುವವರೊಡನೆ ಬೆರೆಯದೆ ಇರಲಾಗುವುದಿಲ್ಲ. ಅಂಥವರೊಡನೆ ಒಡನಾಟ ಕಡಿಮೆ ಇರಲಿ, ಅವರನ್ನು ನೀವು ತಿದ್ದಲೂ ಅವಕಾಶವಿದೆ. ಆದರೆ ನಿಮ್ಮ ಸಲಹೆಗಳಿಗೆ ಅವರು ಸ್ಪಂದಿಸಬೇಕು. ಗೋರ್ಕಲ್ಲ ಮೇಲೆ ಮಳೆ ಸುರಿದಂತಾಗಬಾರದು ನಮ್ಮ ಪ್ರಯತ್ನ.

ಯಶಸ್ಸಿಗಾಗಿ ಹಂಬಲಿಸುವ ನೀವು ಯಾವಾಗಲೂ ಉತ್ಸಾಹ ಮತ್ತು ಒಳ್ಳೆಯ ಭಾವನೆಗಳನ್ನು ಹೊಂದಿರಬೇಕು. ನಿರಾಶಾವಾದಿಗಳ ಬೆಂಬಲ ನಿಮಗೆ ಬೇಕಿಲ್ಲ.

ಎಷ್ಟೋ ಶ್ರೀಮಂತರು ಜೀವನದಲ್ಲಿ ಉತ್ಸಾಹ ಕಳೆದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ನೆಗೆಟಿವ್ ಉತ್ತರಗಳನ್ನು ಕೊಡುವವರು ಯಾರಿಗೂ ಬೇಕಾಗುವುದಿಲ್ಲ.

ಐ ವಾಂಟ್ ಪಾಸಿಟಿವ್ ಆನ್ಸರ್ ಎನ್ನುವವರನ್ನು ನೀವು ನೋಡಿಯೇ ಇದ್ದೀರಿ. ಪಾಸಿಟಿವ್ ಆಶಾವಾದಿಯ ಲಕ್ಷಣ.

**ಮಧ್ಯಂತರ ಉಪವಾಸವು ಇತ್ತೀಚೆಗೆ ಗಮನಾರ್ಹ ಜನಪ್ರಿಯತೆಯನ್ನು ಗಳಿಸಿದೆ. ಕೇವಲ ಆಹಾರಕ್ರಮಕ್ಕಿಂತ ಹೆಚ್ಚಾಗಿ ಒಬ್ಬರು ಹೇಗೆ ತಿನ್ನುತ್ತಾರೆ ಎಂಬುದರ ಕುರಿತು ಜೀವನಶೈಲಿಯ ಬದಲಾವಣೆ ಎಂದು ಇದನ್ನು ಉತ್ತಮವಾಗಿ ವಿವರಿಸಲಾಗಿದೆ. ಏಕೆಂದರೆ ಇದು ಸೇವಿಸುವ ನಿರ್ದಿಷ್ಟ ಆಹಾರಕ್ಕಿಂತ ಆಹಾರ ಪದ್ಧತಿಯ ಮೇಲೆ ಹೆಚ್ಚು ಗಮನಹರಿಸುತ್ತದೆ. ಮಧುಮೇಹ ಹೊಂದಿರುವ ವ್ಯಕ್ತಿಗಳು ಮಧ್ಯಂತರ ಉಪವಾಸದ ಬಗ್ಗೆ ಅತ್ಯಂತ ಜಾಗರೂಕರಾಗಿರಬೇಕು. ದೀರ್ಘಕಾಲದವರೆಗೆ ಆಹಾರವಿಲ್ಲದೇ ಇರುವುದು ರಕ್ತದಲ್ಲಿನ ಸಕ್ಕರೆ ಮಟ್ಟ ಕಡಿಮೆಯಾಗಲು ಕಾರಣವಾಗಬಹುದು. ಇನ್ಸುಲಿನ್ ಅಥವಾ ಇತರ ಔಷಧಗಳನ್ನು ಬಳಸುವವರಿಗೆ ಈ ಅಪಾಯವು ವಿಶೇಷವಾಗಿ ಹೆಚ್ಚಾಗಿದೆ. ಗರ್ಭಿಣಿಯರು ಹಾಗೂ ಹಾಲುಣಿಸುವ ತಾಯಂದಿರು ಈ ವಿಧಾನವನ್ನು ತಪ್ಪಿಸಬೇಕು. ಮಕ್ಕಳು ಮತ್ತು ಹದಿಹರೆಯದವರು ಈ ರೀತಿಯ ಉಪವಾಸವನ್ನು ಅಭ್ಯಾಸ ಮಾಡಬಾರದು, ಏಕೆಂದರೆ ಇದು ಅವರ ಬೆಳವಣಿಗೆಗೆ ಅಡ್ಡಿಯಾಗಬಹುದು.**

# ದೇಹದ ತೂಕ ನಷ್ಟಕ್ಕೆ ಮಧ್ಯಂತರ ಉಪವಾಸ ಮಾಡುತ್ತೀರಾ?: ಈ ಕ್ರಮ ಯಾರು ಅನುಸರಿಸಬಾರದು?

ಇತ್ತೀಚಿನ ದಿನಗಳಲ್ಲಿ ಅನೇಕ ಜನರು ತಮ್ಮ ದೇಹದ ತೂಕ ಇಳಿಸಿಕೊಳ್ಳಲು 'ಮಧ್ಯಂತರ ಉಪವಾಸ' ಮಾಡುವಂತಹ ವಿಧಾನವನ್ನು ಅಳವಡಿಸಿಕೊಳ್ಳುತ್ತಿದ್ದಾರೆ. ಈ ಆಹಾರ ಬಿಡುವ ಕ್ರಮವನ್ನು ಪ್ರಾರಂಭಿಸುವ ಮೊದಲು, ಇದನ್ನು ಮಾಡುವುದು ಸೂಕ್ತವೇ ಎಂಬುದನ್ನು ನಿರ್ಧರಿಸಬೇಕು ಎಂದು ಆರೋಗ್ಯ ತಜ್ಞರು ಸಲಹೆ ನೀಡುತ್ತಾರೆ. ಮಧ್ಯಂತರ ಉಪವಾಸವು ಎಲ್ಲರಿಗೂ ಸುರಕ್ಷಿತವಲ್ಲ. ಜೊತೆಗೆ ಮಧ್ಯಂತರ ಉಪವಾಸವು ಹೊಸ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಬಹುದು ಎಂದು ಆರೋಗ್ಯ ತಜ್ಞರು ಎಚ್ಚರಿಕೆ ನೀಡಿದ್ದಾರೆ. ಇದೀಗ ಮಧ್ಯಂತರ ಉಪವಾಸ ಎಂದರೇನು? ಈ ವಿಧಾನವನ್ನು ಯಾರು ಅನುಸರಿಸಬೇಕು ಎಂಬುದನ್ನು ತಿಳಿಯೋಣ.

ನಿರ್ದಿಷ್ಟ ಆಹಾರಕ್ಕಿಂತ ಊಟದ ಸಮಯಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. 16:8 ಹಾಗೂ 20:4 ವಿಧಾನಗಳನ್ನು ಸಾಮಾನ್ಯವಾಗಿ ಅನುಸರಿಸಲಾಗುತ್ತದೆ. ಇದು 16 ಅಥವಾ 20 ಗಂಟೆಗಳ ಕಾಲ ಉಪವಾಸ - ಆಹಾರದಿಂದ ದೂರವಿರುವುದು ಒಳಗೊಂಡಿರುತ್ತದೆ. ನಂತರ ಹೊಟ್ಟೆ ತುಂಬಿ ತಿನ್ನಲು 8 ಗಂಟೆ ಅಥವಾ 4 ಗಂಟೆಗಳ ಕಾಲ ಅವಧಿ ಇರುತ್ತದೆ. ನಂತರ 16 ಅಥವಾ 20 ಗಂಟೆಗಳ ಕಾಲ ಉಪವಾಸದ ಚಕ್ರವು ಮತ್ತೆ ಪ್ರಾರಂಭವಾಗುತ್ತದೆ. ಈ ವಿಧಾನದಲ್ಲಿ ಕ್ಯಾಲೋರಿ ಎಣಿಕೆಯ ಬಗ್ಗೆ ಚಿಂತಿಸಬೇಕಾಗಿಲ್ಲ ಎಂದು ಹೇಳಲಾಗುತ್ತದೆ.

ಒಬ್ಬರು ಇಷ್ಟಪಡುವುದನ್ನು ತಿನ್ನಬಹುದು. ಈ ಆಹಾರವು ಹಸಿವನ್ನು ನಿಯಂತ್ರಿಸಲು ಹಾಗೂ ದೇಹದ ತೂಕವನ್ನು ನಿರ್ವಹಿಸಲು ಸಹಾಯ ಮಾಡುತ್ತದೆ. ಇದರಿಂದ ದೇಹದ ಚಯಾಪಚಯ ಕ್ರಿಯೆಯನ್ನು ಸುಧಾರಿಸುತ್ತದೆ ಎಂದು ಹೇಳಲಾಗುತ್ತದೆ. 'ದಿ ನ್ಯೂಟ್ರಿಷನ್ ಸೋರ್ಸ್' ತಿಳಿಸುವ ಪ್ರಕಾರ, ದೇಹದ ತೂಕ ನಷ್ಟಕ್ಕೆ ಪರಿಣಾಮಕಾರಿಯಾಗಿದೆ ಎಂದು ಹೇಳಿದೆ. 10 ವಾರಗಳಲ್ಲಿ 7ರಿಂದ 11 ಪೌಂಡ್‌ಗಳಷ್ಟು ದೇಹದ ತೂಕವನ್ನು ಕಳೆದುಕೊಳ್ಳುವ ಸಾಮರ್ಥ್ಯವನ್ನು ಹೊಂದಿದೆ. ಟೈಪ್-1 ಮಧುಮೇಹ ಇರುವವರು ಇನ್ಸುಲಿನ್ ಬಳಸುವುದರಿಂದ ಉಪವಾಸದ ಅವಧಿಯಲ್ಲಿ ಮಧ್ಯಂತರ ಉಪವಾಸವು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು (ಹೈಪೊಗ್ಲಿಸಿಮಿಯಾ) ಅಪಾಯಕಾರಿಯಾಗಿ ಕಡಿಮೆ ಮಾಡಲು ಕಾರಣವಾಗಬಹುದು ಎಂದು ಹಾಪ್ಕಿನ್ಸ್ ಮೆಡಿಸಿನ್ ಗಮನಿಸುತ್ತದೆ.

ಮೂತ್ರಪಿಂಡ, ಹೃದಯ ಅಥವಾ ಯಕೃತ್ತಿನ ಕಾಯಿಲೆಗಳಿಂದ ಬಳಲುತ್ತಿರುವ ವ್ಯಕ್ತಿಗಳು ಮಧ್ಯಂತರ ಉಪವಾಸವನ್ನು ತಪ್ಪಿಸಬೇಕು ಎಂದು ಸಲಹೆ ನೀಡಲಾಗುತ್ತದೆ. ಈ ಪರಿಸ್ಥಿತಿಗಳಿರುವವರಿಗೆ ದೀರ್ಘಕಾಲದ ಉಪವಾಸವು ನಿರ್ಜಲೀಕರಣ, ದೌರ್ಬಲ್ಯ ಮತ್ತು ರಕ್ತದೊತ್ತಡದಲ್ಲಿ ಏರಿಳಿತಗಳಿಗೆ ಕಾರಣವಾಗಬಹುದು. ಇದು ಹೃದಯದ ಮೇಲೆ ಹೆಚ್ಚುವರಿ ಒತ್ತಡ ಉಂಟುಮಾಡುತ್ತದೆ. ಅಧಿಕ ರಕ್ತದೊತ್ತಡ ಇಲ್ಲವೇ ಹೃದ್ರೋಗಕ್ಕೆ ಔಷಧಗಳನ್ನು ತೆಗೆದುಕೊಳ್ಳುವ ವ್ಯಕ್ತಿಗಳು ಉಪವಾಸದಿಂದಾಗಿ ಎಲೆಕ್ಟ್ರೋಲೈಟ್ ಕೊರತೆಯ ಅಪಾಯ ಹೊಂದಿರಬಹುದು ಎಂದು ಬಾಸ್ಟಿರ್ ವಿಶ್ವವಿದ್ಯಾಲಯ ಹೇಳಿದೆ. ತಿನ್ನುವ ಅಸ್ವಸ್ಥತೆಗಳಿಂದ ಬಳಲುತ್ತಿರುವವರು ಇಲ್ಲವೇ ಕಡಿಮೆ ತೂಕ ಹೊಂದಿರುವವರು ಮಧ್ಯಂತರ ಉಪವಾಸವನ್ನು ತಪ್ಪಿಸುವುದು ಸೂಕ್ತ. ಮಧ್ಯಂತರ ಉಪವಾಸ ಕಟ್ಟುಪಾಡು ಪ್ರಾರಂಭಿಸುವ ಮೊದಲು ವೈದ್ಯರನ್ನು ಸಂಪರ್ಕಿಸಲು ತಜ್ಞರು ಸೂಚಿಸುತ್ತಾರೆ. ಈ ವಿಧಾನವು ನಿಮಗೆ ಸೂಕ್ತವಾಗಿದೆಯೇ ಅಥವಾ ಇಲ್ಲವೇ ಎಂದು ಅವರು ಸಲಹೆ ನೀಡಬಹುದು. ಈ ವರದಿಯಲ್ಲಿ ನಿಮಗೆ ನೀಡಲಾದ ಎಲ್ಲಾ ಆರೋಗ್ಯ ಸಂಬಂಧಿತ ಮಾಹಿತಿ ಹಾಗೂ ಸಲಹೆಗಳು ಸಾಮಾನ್ಯ ಮಾಹಿತಿಗಾಗಿ ಮಾತ್ರ. ನಾವು ಈ ಮಾಹಿತಿಯನ್ನು ವೈಜ್ಞಾನಿಕ ಸಂಶೋಧನೆ, ಅಧ್ಯಯನಗಳು, ವೈದ್ಯಕೀಯ ಮತ್ತು ಆರೋಗ್ಯ ವೃತ್ತಿಪರ ಸಲಹೆಯ ಆಧಾರದ ಮೇಲೆ ಒದಗಿಸುತ್ತಿದ್ದೇವೆ. ನೀವು ಈ ಬಗ್ಗೆ ವಿವರವಾಗಿ ತಿಳಿದುಕೊಳ್ಳಬೇಕು. ಮತ್ತು ಈ ವಿಧಾನ ಅಥವಾ ಕಾರ್ಯವಿಧಾನವನ್ನು ಅಳವಡಿಸಿಕೊಳ್ಳಬೇಕಾದರೆ ಪರಿಣಿತ ವೈದ್ಯರನ್ನು ಸಂಪರ್ಕಿಸುವುದು ಉತ್ತಮ.



# ಯಾವೆಲ್ಲಾ ಆಹಾರಗಳೊಂದಿಗೆ ಮೊಟ್ಟೆ ಸೇವಿಸಬಾರದು ಗೊತ್ತೇ?



ಮೊಟ್ಟೆಗಳು ಹೆಚ್ಚು ಸೇವಿಸುವ ಆಹಾರಗಳಲ್ಲಿ ಒಂದು. ಮೊಟ್ಟೆಗಳನ್ನು ವಿವಿಧ ಉದ್ದೇಶಗಳಿಗಾಗಿ ಬಳಸಬಹುದು. ರುಚಿಯ ಜತೆಗೆ ಪ್ರೋಟೀನ್, ವಿಟಮಿನ್ ಡಿ, ಅಗತ್ಯ ಅಮೈನೋ ಆಮ್ಲಗಳು ಹಾಗೂ ಒಮೆಗಾ-3 ಕೊಬ್ಬಿನಾಮ್ಲಗಳ ಅತ್ಯುತ್ತಮ ಮೂಲವಾಗಿದೆ. ಮೊಟ್ಟೆಗಳ ನಿಯಮಿತ ಸೇವನೆ ಸ್ನಾಯುಗಳ ಬೆಳವಣಿಗೆಯನ್ನು ಬೆಂಬಲಿಸುತ್ತದೆ. ಮೆದುಳಿನ ಕಾರ್ಯವನ್ನು ಸುಧಾರಿಸಲು ಹಾಗೂ ಕಣ್ಣಿನ ಆರೋಗ್ಯವನ್ನು ರಕ್ಷಿಸಲು ಹಾಗೂ ಆರೋಗ್ಯಕರ ಕೊಲೆಸ್ಟ್ರಾಲ್ ಮಟ್ಟ ಕಾಪಾಡಿಕೊಳ್ಳಲು ತುಂಬಾ ಸಹಾಯ ಮಾಡುತ್ತದೆ.

ಮೊಟ್ಟೆ ಉಪಾಹಾರ, ಮಧ್ಯಾಹ್ನ ಮತ್ತು ರಾತ್ರಿಯ ಊಟಕ್ಕೆ ಸೂಕ್ತ. ಮೊಟ್ಟೆಗಳು ಹಲವು ಆರೋಗ್ಯ ಪ್ರಯೋಜನಗಳನ್ನು ನೀಡುತ್ತದೆ. ಆದರೆ, ನೀವು ಅವುಗಳ ಜತೆಗೆ ತಿನ್ನುವ ಆಹಾರಗಳು ನಿಮ್ಮ ದೇಹವು ಅವುಗಳ ಪೋಷಕಾಂಶಗಳನ್ನು ಎಷ್ಟು ಚೆನ್ನಾಗಿ ಹೀರಿಕೊಳ್ಳುತ್ತದೆ ಎಂಬುದರ ಮೇಲೆ ಪರಿಣಾಮ ಬೀರುತ್ತವೆ.

ನೀವು ಮೊಟ್ಟೆಗಳೊಂದಿಗೆ ಸೇವಿಸುವುದನ್ನು ತಪ್ಪಿಸಬೇಕಾದ ಆಹಾರಗಳು ಯಾವುವು ಎಂಬುದನ್ನು ಇಲ್ಲಿ ತಿಳಿಯೋಣ. ಸೋಯಾ ಹಾಲು ಸಾಮಾನ್ಯ ಹಾಲಿಗೆ ಪೌಷ್ಟಿಕ ಪರ್ಯಾಯವಾಗಿದೆ. ಮೊಟ್ಟೆಗಳೊಂದಿಗೆ ಮಾತ್ರ ಸೇವಿಸುವುದರಿಂದ ಪ್ರೋಟೀನ್ ಹೀರಿಕೊಳ್ಳುವಿಕೆಗೆ ಅಡ್ಡಿಯಾಗಬಹುದು. ಮೊಟ್ಟೆಗಳು, ಸೋಯಾ ಎರಡೂ ಪ್ರೋಟೀನ್‌ನಲ್ಲಿ ಸಮೃದ್ಧವಾಗಿವೆ. ಹೆಚ್ಚು ಪ್ರೋಟೀನ್ ನಿಮಗೆ ಒಳ್ಳೆಯದಲ್ಲ. ಇದು ಹೀರಿಕೊಳ್ಳುವಿಕೆಯ ದಕ್ಷತೆಯನ್ನು ಕಡಿಮೆ ಮಾಡುತ್ತದೆ. ನಿಮ್ಮ ದೇಹವು ಎರಡೂ ಆಹಾರಗಳಲ್ಲಿನ ಪೋಷಕಾಂಶಗಳ ಸಂಪೂರ್ಣ ಪ್ರಯೋಜನವನ್ನು ಪಡೆಯುವುದಿಲ್ಲ. ಮೊಟ್ಟೆ ಹಾಗೂ ಸೋಯಾ ಹಾಲನ್ನು ಪ್ರತ್ಯೇಕವಾಗಿ ಸೇವಿಸುವುದು ಒಳ್ಳೆಯದು. ವಿಭಿನ್ನ ಆಹಾರಗಳಲ್ಲಿ ಇಲ್ಲವೇ ದಿನದ ವಿವಿಧ ಸಮಯಗಳಲ್ಲಿ ಮೊಟ್ಟೆಯನ್ನು ಸೇವಿಸುವುದು ಉತ್ತಮ. ಅನೇಕ ಜನರು ಮೊಟ್ಟೆಗಳನ್ನು ಸೇವಿಸುತ್ತಾ ಚಹಾವನ್ನು ಕುಡಿಯುತ್ತಾರೆ. ವಿಶೇಷವಾಗಿ ಉಪಾಹಾರದ ಸಮಯದಲ್ಲಿ ಚಹಾ ಕುಡಿಯುತ್ತಾ ಮೊಟ್ಟೆಗಳನ್ನು ಸೇವಿಸುವುದು ಒಳ್ಳೆಯದಲ್ಲ.

ಚಹಾವು ಪಾಲಿಫಿನಾಲ್‌ಗಳನ್ನು ಹೊಂದಿರುತ್ತದೆ. ಇದು ದೇಹವು ಪ್ರೋಟೀನ್ ಹೀರಿಕೊಳ್ಳುವುದನ್ನು ತಡೆಯುತ್ತದೆ. ಜರ್ನಲ್ ಆಫ್ ನ್ಯೂಟ್ರಿಷನ್‌ನಲ್ಲಿ ಪ್ರಕಟವಾದ ಅಧ್ಯಯನ ತಿಳಿಸುವ ಪ್ರಕಾರ, ಮೊಟ್ಟೆಗಳೊಂದಿಗೆ ಚಹಾ ಕುಡಿಯುವುದರಿಂದ ಪ್ರೋಟೀನ್ ಹೀರಿಕೊಳ್ಳುವಿಕೆಯು ಸುಮಾರು 17 ಪ್ರತಿಶತದಷ್ಟು ಕಡಿಮೆಯಾಗುತ್ತದೆ. ಪೋಷಕಾಂಶಗಳ ಹೀರಿಕೊಳ್ಳುವಿಕೆಯನ್ನು ಕಡಿಮೆ ಮಾಡುವುದರ ಜೊತೆಗೆ ಇದು ಅನಿಲ, ಉಬ್ಬುವುದು, ಮಲಬದ್ಧತೆ ಅಥವಾ ಆಮ್ಲೀಯತೆಯಂತಹ ಜೀರ್ಣಕಾರಿ ಸಮಸ್ಯೆಗಳನ್ನು ಸಹ ಉಂಟುಮಾಡಬಹುದು. ಕನಿಷ್ಠ 30ರಿಂದ 60 ನಿಮಿಷಗಳ ಅಂತರದೊಂದಿಗೆ ಮೊಟ್ಟೆ ಮತ್ತು ಚಹಾವನ್ನು ಪ್ರತ್ಯೇಕವಾಗಿ ಸೇವಿಸುವುದು ಒಳ್ಳೆಯದು. ಮೊಟ್ಟೆಗಳೊಂದಿಗೆ ತಪ್ಪಿಸಬೇಕಾದ ಮತ್ತೊಂದು ಅಂಶವೆಂದರೆ ಸಕ್ಕರೆ. ಮೊಟ್ಟೆಗಳು ಪ್ರೋಟೀನ್ ಮತ್ತು ಅಮೈನೋ ಆಮ್ಲಗಳ ಅತ್ಯುತ್ತಮ ಮೂಲವಾಗಿದೆ. ಸಕ್ಕರೆ ಹಾಗೂ ಮೊಟ್ಟೆಗಳಲ್ಲಿನ ಅಮೈನೋ ಆಮ್ಲಗಳೊಂದಿಗೆ ಸಂಯೋಜಿಸಿದಾಗ ರಾಸಾಯನಿಕ ಕ್ರಿಯೆ ಸಂಭವಿಸುತ್ತದೆ.

ಈ ಪ್ರತಿಕ್ರಿಯೆಯು ದೇಹದಲ್ಲಿ ಹಾನಿಕಾರಕ ಸಂಯುಕ್ತಗಳನ್ನು ರೂಪಿಸಬಹುದು ಹಾಗೂ ಇದು ರಕ್ತ ಹೆಪ್ಪುಗಟ್ಟುವಿಕೆಯ ಅಪಾಯವನ್ನು ಹೆಚ್ಚಿಸುತ್ತದೆ. ಸಾಂದರ್ಭಿಕ ಸೇವನೆಯು ಗಂಭೀರ ಅಡ್ಡಪರಿಣಾಮಗಳನ್ನು ಉಂಟುಮಾಡುತ್ತದೆ. ಸಮತೋಲಿತ ಮತ್ತು ಸುರಕ್ಷಿತ ಜೀರ್ಣಕ್ರಿಯೆಯನ್ನು ಕಾಪಾಡಿಕೊಳ್ಳಲು ಮೊಟ್ಟೆಗಳೊಂದಿಗೆ ಸಕ್ಕರೆ ಆಹಾರಗಳು ಅಥವಾ ಸಕ್ಕರೆ ಪಾನೀಯಗಳನ್ನು ಸೇವಿಸುವುದನ್ನು ಆದಷ್ಟು ತಪ್ಪಿಸಬೇಕಾಗುತ್ತದೆ ಎಂದು ತಜ್ಞರು ತಿಳಿಸುತ್ತಾರೆ. ಮೊಟ್ಟೆ, ಬಾಳೆಹಣ್ಣುಗಳು ಪೌಷ್ಟಿಕವಾಗಿದ್ದರೂ ಎರಡೂ ಆಹಾರಗಳು ಒಟ್ಟಿಗೆ ಸೇವನೆ ಮಾಡಬಾರದು.

ಮೊಟ್ಟೆ ಹಾಗೂ ಬಾಳೆಹಣ್ಣುಗಳನ್ನು ಒಟ್ಟಿಗೆ ತಿನ್ನುವುದರಿಂದ ಉಬ್ಬುವುದು, ನಿಧಾನ ಜೀರ್ಣಕ್ರಿಯೆ ಹಾಗೂ ದೇಹವು ಭಾರವಾದ ಭಾವನೆ ಉಂಟಾಗುತ್ತದೆ. ಮೊಟ್ಟೆ, ಬಾಳೆಹಣ್ಣುಗಳನ್ನು ಪ್ರತ್ಯೇಕ ಸಮಯದಲ್ಲಿ ಸೇವನೆ ಮಾಡುವುದು ಉತ್ತಮ, ಉದಾಹರಣೆಗೆ ನೀವು ಉಪಾಹಾರಕ್ಕಾಗಿ ಮೊಟ್ಟೆಗಳನ್ನು ಹಾಗೂ ಉಪಾಹಾರದ ನಂತರ ಇಲ್ಲವೇ ಊಟದ ನಂತರ ಬಾಳೆಹಣ್ಣನ್ನು ಸೇವನೆ ಮಾಡುವುದು.

# ಮಕ್ಕಳ ಹಾಲು ಹಲ್ಲುಗಳು ಎಷ್ಟು ವರ್ಷಕ್ಕೆ ಉದುರುತ್ತವೆ?

ಮಕ್ಕಳ ಹಾಲು ಹಲ್ಲುಗಳು ಆರು ಮತ್ತು 13 ವರ್ಷಗಳ ನಡುವೆ ಉದುರುತ್ತವೆ. ಹೆಚ್ಚಿನ ಮಕ್ಕಳಿಗೆ ಆರು ವರ್ಷಗಳ ಸುಮಾರಿಗೆ ಹಾಲು ಹಲ್ಲುಗಳು ಉದುರಲು ಪ್ರಾರಂಭಿಸುತ್ತವೆ. ಕೆಲವು ಮಕ್ಕಳಲ್ಲಿ ಈ ಪ್ರಕ್ರಿಯೆಯು ಒಂದು ವರ್ಷದ ನಂತರ ಆರಂಭವಾಗುತ್ತದೆ, ಸುಮಾರು ಏಳು ವರ್ಷ ಆಗಿರಬಹುದು. ಮೇಯೊ ಕ್ಲಿನಿಕ್ ಪ್ರಕಾರ, ಎಲ್ಲಾ ಹಾಲು ಹಲ್ಲುಗಳು 13 ವರ್ಷ ವಯಸ್ಸಿನೊಳಗೆ ಉದುರುತ್ತವೆ ಮತ್ತು ಶಾಶ್ವತ ಹಲ್ಲುಗಳು ಬರಲು ಪ್ರಾರಂಭಿಸುತ್ತವೆ.

ಕ್ಲೀವ್‌ಲ್ಯಾಂಡ್ ಕ್ಲಿನಿಕ್ ಪ್ರಕಾರ, ಹಾಲು ಹಲ್ಲುಗಳು ಉದುರುವುದು ಬಹಳ ಸಾಮಾನ್ಯ ಹಾಗೂ ನೈಸರ್ಗಿಕ ಪ್ರಕ್ರಿಯೆಯಾಗಿದೆ. ಮಗು ಬೆಳೆದಂತೆ ಅವರ 20 ಹಾಲು ಹಲ್ಲುಗಳು ಉದುರಲು ಪ್ರಾರಂಭಿಸುತ್ತವೆ. ಇದರಿಂದ 32 ಶಾಶ್ವತ ಹಲ್ಲುಗಳಿಗೆ ಸ್ಥಳಾವಕಾಶ ದೊರೆಯುತ್ತದೆ.

ಕೆಲವು ಮಕ್ಕಳು ತಮ್ಮ ಹಲ್ಲುಗಳನ್ನು ಮೊದಲೇ ಕಳೆದುಕೊಳ್ಳಬಹುದು. ಆದರೆ, ಇತರರು ಮಕ್ಕಳು ನಂತರ ಹಾಲು ಹಲ್ಲುಗಳನ್ನು ಕಳೆದುಕೊಳ್ಳಬಹುದು. ಈಗ ಮಗುವಿನ ಹಲ್ಲುಗಳು ಯಾವ ನಿರ್ದಿಷ್ಟ ವಯಸ್ಸಿನಲ್ಲಿ ಉದುರುತ್ತವೆ ಮತ್ತು ಪೋಷಕರು ವಹಿಸಬೇಕಾದ ಕ್ರಮಗಳ ಕುರಿತು ಇಲ್ಲಿ ತಿಳಿಯೋಣ. ಸಾಮಾನ್ಯವಾಗಿ ಮಕ್ಕಳ ಮೊದಲ ಹಾಲು ಹಲ್ಲು ಆರು ತಿಂಗಳಲ್ಲಿ ಬರುತ್ತವೆ. ಹಲ್ಲು ಬರುವ ವಯಸ್ಸು 3 ರಿಂದ 14 ತಿಂಗಳವರೆಗೆ ಇರುತ್ತದೆ ಎಂದು ತಜ್ಞರು ತಿಳಿಸುತ್ತಾರೆ. ಕೆಲವು ಮಕ್ಕಳ ಹಲ್ಲುಗಳು ಒಂದೊಂದಾಗಿ ಬರುತ್ತವೆ. ಇನ್ನೂ ಕೆಲವು ಜೋಡಿಯಾಗಿ ಇಲ್ಲವೇ ಗುಂಪುಗಳಾಗಿ ಕಾಣಿಸಿಕೊಳ್ಳುತ್ತವೆ.

ಮಕ್ಕಳು ತಮ್ಮ ಹಾಲು ಹಲ್ಲುಗಳು ಉದುರುತ್ತಿರುವಾಗ ವಿವಿಧ ಸಣ್ಣಪುಟ್ಟ ಅಸ್ವಸ್ಥತೆಗಳನ್ನು ಅನುಭವಿಸಬಹುದು. ಕ್ಲೀವ್‌ಲ್ಯಾಂಡ್ ಕ್ಲಿನಿಕ್ ವರದಿ ತಿಳಿಸುವ ಪ್ರಕಾರ, ಮುಂಭಾಗದ ಮಧ್ಯದ ಹಲ್ಲುಗಳು ಮೊದಲು ಉದುರುತ್ತವೆ. ಸಾಮಾನ್ಯವಾಗಿ 6 ರಿಂದ 7 ವರ್ಷ ವಯಸ್ಸಿನ ನಡುವೆ. ಇವುಗಳನ್ನು ಮಧ್ಯದ ಬಾಚಿಹಲ್ಲುಗಳು ಎಂದು ಕರೆಯಲಾಗುತ್ತದೆ. ಮುಂಭಾಗದ ಹಲ್ಲುಗಳ ಪಕ್ಕದಲ್ಲಿರುವ ಹಲ್ಲುಗಳು 7 ರಿಂದ 8 ವರ್ಷ ವಯಸ್ಸಿನ ನಡುವೆ ಉದುರುತ್ತವೆ. ಸಾಮಾನ್ಯವಾಗಿ ಎರಡು ಕೆಳಗಿನ ಹಲ್ಲುಗಳು ಮೊದಲು ಉದುರುತ್ತವೆ. ನಂತರ ಎರಡು ಮೇಲಿನ ಹಲ್ಲುಗಳು ಉದುರುತ್ತವೆ.

ಮಕ್ಕಳು ಸಾಮಾನ್ಯವಾಗಿ 9 ರಿಂದ 10 ವರ್ಷ ವಯಸ್ಸಿನ ನಡುವೆ ತಮ್ಮ ಕೆಳಗಿನ ಬಾಚಿಹಲ್ಲುಗಳನ್ನು ಕಳೆದುಕೊಳ್ಳಲು ಪ್ರಾರಂಭಿಸುತ್ತಾರೆ. ಅವರ ಮೊದಲ ಬಾಚಿಹಲ್ಲುಗಳು (ದವಡೆಯ ಹಲ್ಲುಗಳು) 10 ರಿಂದ 11 ವರ್ಷ ವಯಸ್ಸಿನ ನಡುವೆ ಉದುರುತ್ತವೆ. 12ನೇ ವಯಸ್ಸಿನಲ್ಲಿ ಅವರು ತಮ್ಮ ಮೇಲಿನ ಕೋರೆಹಲ್ಲುಗಳು ಮತ್ತು ಎರಡನೇ ಸೆಟ್ ಬಾಚಿಹಲ್ಲುಗಳನ್ನು ಕಳೆದುಕೊಳ್ಳುತ್ತಾರೆ. ಹಲ್ಲುಗಳ ನಷ್ಟವು ನೈಸರ್ಗಿಕ ಪ್ರಕ್ರಿಯೆಯಾಗಿದೆ.

ಅಕ್ರಮವನ್ನು ಪ್ರಶ್ನಿಸಿದ ಸಾರ್ವಜನಿಕರ ಮೇಲೆ ದಬ್ಬಾಳಿಕೆ ನಡೆಸುವವರ ವಿರುದ್ಧ ತಕ್ಷಣವೇ ಎಫ್‌ಐಆರ್ ದಾಖಲಿಸುವಂತೆ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದ್ದಾರೆ.

# ಅಕ್ರಮ ಮಣ್ಣು ಸಾಗಣೆ, ಜೂಜಾಟ, ಸಾರಾಯಿ ದಂಧೆಕೋರರಿಗೆ ಬೆಳಗಾವಿ ಎಸ್‌ಪಿ ಎಚ್ಚರಿಕೆ

• **ಉದಯವಾಹಿನಿ, ಚಿಕ್ಕೋಡಿ:**

ಅಥಣಿ ತಾಲ್ಲೂಕಿನಲ್ಲಿನ ಅಕ್ರಮ ಮಣ್ಣು ಸಾಗಣೆ, ಗಾಂಜಾ, ಜೂಜಾಟ ಮತ್ತು ಅಕ್ರಮ ಸಾರಾಯಿ ದಂಧೆಕೋರರಿಗೆ ಎಚ್ಚರಿಕೆ ನೀಡಿರುವ ಬೆಳಗಾವಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮರಾಜನ್, ಅಕ್ರಮವನ್ನು ಪ್ರಶ್ನಿಸಿದ ಸಾರ್ವಜನಿಕರ

**1 : ಕೆ.ಎಸ್.ಪಿ ಆಯಪ್ ಬಳಸಿ, ಪಾರದರ್ಶಕತೆಗೆ ಆದ್ಯತೆ**
**2 : ಅಥಣಿ ಪೊಲೀಸ್ ಠಾಣೆ ವಿಭಜನೆಗೆ ಪ್ರಸ್ತಾವನೆ**
**3 : ವಕೀಲರ ಮೇಲಿನ ದೌರ್ಜನ್ಯ ಖಂಡನೀಯ**

ಮೇಲೆ ದಬ್ಬಾಳಿಕೆ ನಡೆಸುವವರ ವಿರುದ್ಧ ತಕ್ಷಣವೇ ಎಫ್‌ಐಆರ್ ದಾಖಲಿಸುವಂತೆ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದ್ದಾರೆ. ಅಥಣಿ ಪಟ್ಟಣದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಅಥಣಿ ಪರಿಸರದಲ್ಲಿ ಮತ್ತು ಪೊಲೀಸ್ ಠಾಣೆಯ ಮುಂದೆಯೇ ಲಾರಿಗಳಲ್ಲಿ ಅಕ್ರಮವಾಗಿ ಮಣ್ಣು ಸಾಗಣೆಯಾಗುತ್ತಿದೆ ಎಂಬ ಆರೋಪಗಳ ಕುರಿತು ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿ, ರೈತರು ತಮ್ಮ ಜಮೀನುಗಳ ಅಭಿವೃದ್ಧಿಗಾಗಿ ಕೆರೆಗಳಿಂದ ಮಣ್ಣು ಎತ್ತುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆ. ಇದು ಕೆರೆಗಳ ಹೂಳೆತ್ತುವ ಕಾರ್ಯ ಹಾಗೂ ರೈತರಿಗೂ ಅನುಕೂಲಕರ. ಆದರೆ, ರೈತರ ಹೆಸರಿನಲ್ಲಿ ನೀರಾವರಿ ಇಲಾಖೆ, ಕಂದಾಯ ಇಲಾಖೆ ಅಥವಾ ಅರಣ್ಯ ಇಲಾಖೆಯ ಯಾವುದೇ ಅಧಿಕೃತ ಅನುಮತಿ ಪತ್ರ




ಇಲ್ಲದೆ ವಾಣಿಜ್ಯ ಉದ್ದೇಶಕ್ಕಾಗಿ ಮಣ್ಣು ಸಾಗಿಸುವ ದಂಧೆಗೆ ಯಾವುದೇ ಕಾರಣಕ್ಕೂ ಬಿಡುವುದಿಲ್ಲ. ಈ ಬಗ್ಗೆ ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಪತ್ರ ಬರೆದು ಜಂಟಿ ಸರ್ವೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಅಕ್ರಮ ಮಣ್ಣು ದಂಧೆಯನ್ನು ಪ್ರಶ್ನಿಸುವ ಸ್ಥಳೀಯರ ಮೇಲೆ ದಬ್ಬಾಳಿಕೆ ಮಾಡುತ್ತಿರುವ ದೂರುಗಳ ಕುರಿತು, ಅಕ್ರಮದ ವಿರುದ್ಧ ಧ್ವನಿ ಎತ್ತುವ ಸಾರ್ವಜನಿಕರ ಮೇಲೆ ಯಾರು ದಬ್ಬಾಳಿಕೆ ಅಥವಾ ಬೆದರಿಕೆ ಹಾಕುತ್ತಾರೋ, ಅವರ ವಿರುದ್ಧ ತಕ್ಷಣವೇ ಕಠಿಣ ಸೆಕ್ಷನ್‌ಗಳಡಿ ಎಫ್‌ಐಆರ್ ದಾಖಲಿಸಿ ಜೈಲಿಗೆ ಕಳಿಸಲಾಗುವುದು ಎಂದು ಎಚ್ಚರಿಸಿದರು. ಗ್ರಾಮೀಣ ಭಾಗಗಳಲ್ಲಿ ಅಪರಾಧಗಳು ಹೆಚ್ಚಾಗಲು ಹಳ್ಳಿ ಹಳ್ಳಿಗಳಲ್ಲಿ ಸಿಗುವ ಅಕ್ರಮ ಸಾರಾಯಿಯೂ ಪ್ರಮುಖ ಕಾರಣವಾಗಿದೆ.

ರಾತ್ರಿ ವೇಳೆ ಸುಲಭವಾಗಿ ಸಾರಾಯಿ ಸಿಗುವುದರಿಂದ ಯುವಕರು ಗಲಾಟೆ, ಕೊಲೆಗಳಂತಹ ಅಪರಾಧ ಕೃತ್ಯಗಳಲ್ಲಿ ತೊಡಗುತ್ತಿದ್ದಾರೆ. ಇತ್ತೀಚೆಗೆ ಕುಡಚಿ ಮತ್ತು ಯಮಕನಮರಡಿಯಲ್ಲಿ ಬೃಹತ್ ಕಾರ್ಯಾಚರಣೆ ನಡೆಸಲಾಗಿದ್ದು, ಮಟ್ಕಾ ಹಾಗೂ ಜೂಜಾಟವನ್ನು ಸಂಪೂರ್ಣ ಮಟ್ಟ ಹಾಕಲಾಗುವುದು ಎಂದರು. ಸಾರ್ವಜನಿಕರು ತಮ್ಮ ಸುತ್ತಮುತ್ತ ನಡೆಯುವ ಅಕ್ರಮಗಳ ವಿಡಿಯೋ ಮತ್ತು ಫೋಟೋಗಳನ್ನು ಕರ್ನಾಟಕ ಪೊಲೀಸ್ ಇಲಾಖೆಯ ಮೂಲಕ ನೇರವಾಗಿ ನಮಗೆ ಕಳುಹಿಸಬಹುದು. ಈ ಆ್ಯಪ್‌ನಲ್ಲಿ ಬರುವ ದೂರುಗಳು ನೇರವಾಗಿ ನನಗೂ ಮತ್ತು ಹಿರಿಯ ಅಧಿಕಾರಿಗಳಿಗೂ ತಲುಪುತ್ತವೆ. ತಪ್ಪು ಮಾಹಿತಿ ಮುಚ್ಚಿಡಲು ಯಾರಿಗೂ ಸಾಧ್ಯವಿಲ್ಲ. ಮಾಹಿತಿ ಬಂದ ತಕ್ಷಣ ಕ್ರಮ ಕೈಗೊಳ್ಳದ ಬೀಟ್ ಕಾನ್‌ಸ್ಟೇಬಲ್, ಸಬ್‌ಇನ್ಸ್‌ಪೆಕ್ಟರ್‌ಗಳ ಮೇಲೆ ಇಲಾಖಾ ತನಿಖೆ ನಡೆಸಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು. ಈ ವ್ಯವಸ್ಥೆಯಲ್ಲಿ ನಾನೂ ಸಹ ಜವಾಬ್ದಾರನಾಗಿರುತ್ತೇನೆ ಎಂದು ತಿಳಿಸಿದರು.

ಅಥಣಿ ಪೊಲೀಸ್ ಠಾಣೆಯ ವ್ಯಾಪ್ತಿ ದೊಡ್ಡದಾಗಿದ್ದು, ವಾರ್ಷಿಕ ಸಾವಿರಕ್ಕೂ ಹೆಚ್ಚು ಎಫ್‌ಐಆರ್ ದಾಖಲಾಗುತ್ತಿರುವುದು ಅಧಿಕಾರಿಗಳ ಕೊರತೆಗೆ ಕಾರಣವಾಗಿದೆ. ಸಾರ್ವಜನಿಕರ ಹಿತದೃಷ್ಟಿಯಿಂದ ಅಥಣಿ ಠಾಣೆಯನ್ನು ವಿಭಜಿಸಿ ಅಥಣಿ ನಗರ, ಅಥಣಿ ಗ್ರಾಮೀಣ ಮತ್ತು ಪ್ರತ್ಯೇಕ ಟ್ರಾಫಿಕ್ ಪೊಲೀಸ್ ಠಾಣೆಯನ್ನಾಗಿ ಮಾಡಲು ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಹೊಸ ಪೊಲೀಸ್ ಕಟ್ಟಡ ನಿರ್ಮಾಣಕ್ಕಾಗಿ 30 ಗುಂಟೆ ಜಾಗವನ್ನು ಗುರುತಿಸಲಾಗಿದ್ದು, ಶೀಘ್ರದಲ್ಲೇ ಮಂಜೂರಾತಿ ಸಿಗಲಿದೆ ಎಂದು ಭರವಸೆ ನೀಡಿದರು.

> ಹಲ್ಲೆಗೊಳಗಾದವರು ಸಾರ್ವಜನಿಕರಾಗಿರಲಿ, ವಕೀಲರಾಗಿರಲಿ ಅಥವಾ ದಿನಗೂಲಿ ನೌಕರರಾಗಿರಲಿ, ಎಲ್ಲರಿಗೂ ಕಾನೂನು ಒಂದೇ. ತಪ್ಪಿತಸ್ಥ ಪೊಲೀಸರ ಮೇಲೆ ಕ್ರಮ ಕೈಗೊಳ್ಳುತ್ತಿದ್ದೇವೆ. ಈ ಕ್ರಮವು ಕೇವಲ ತಾತ್ಕಾಲಿಕ ಶಿಕ್ಷೆಯಲ್ಲ, ಬದಲಿಗೆ ಅವರ ಸೇವಾ ಜೀವನದಲ್ಲಿ ಕಪ್ಪು ಚುಕ್ಕೆಯಾಗಿ ಉಳಿಯಲಿದೆ ಎಂದು ತಿಳಿಸಿದರು.
> ಎಸ್‌ಪಿ

**ಪೊಲೀಸ್ ಇಲಾಖೆಯಲ್ಲಿ ಶಿಸ್ತು ಅತ್ಯಂತ ಮುಖ್ಯ**

ಅಥಣಿ ತಾಲ್ಲೂಕಿನ ಸತ್ತಿ ಗ್ರಾಮದಲ್ಲಿ ಇತ್ತೀಚೆಗೆ ವಕೀಲರೊಬ್ಬರ ಮೇಲೆ ಅಥಣಿ ಠಾಣೆ ಪೊಲೀಸರಿಂದ ಅಮಾನವೀಯ ಹಲ್ಲೆ ಮತ್ತು ದೌರ್ಜನ್ಯ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿ, ಪೊಲೀಸ್ ಇಲಾಖೆಯಲ್ಲಿ ಶಿಸ್ತು ಅತ್ಯಂತ ಮುಖ್ಯವಾದುದು. ಸಾರ್ವಜನಿಕರೊಂದಿಗೆ ಮಾತನಾಡುವಾಗ ಅಥವಾ ಪರಿಸ್ಥಿತಿ ನಿಯಂತ್ರಿಸುವಾಗ ಪೊಲೀಸರು ಕನಿಷ್ಠ ಶಿಸ್ತು ಮತ್ತು ಸಂಯಮವನ್ನು ಪ್ರದರ್ಶಿಸಬೇಕು. ಯಾರೇ ಆಗಲಿ, ಕಾನೂನು ಕೈಗೆತ್ತಿಕೊಳ್ಳುವುದನ್ನು ಇಲಾಖೆ ಸಹಿಸುವುದಿಲ್ಲ.

## ಮಿನಿ ನ್ಯೂಸ್

## ಲಸಿಕಾ ಕಾರ್ಯಕ್ರಮ

• **ಉದಯವಾಹಿನಿ ನರೇಗಲ್:**

ಪ್ರಾಥಮಿಕ ಆರೋಗ್ಯ ಕೇಂದ್ರ, ನಿಡಗುಂದಿ ಆಶ್ರಯದಲ್ಲಿ ಪಟ್ಟಣದ ಅನ್ನದಾನ ವಿಜಯ ಬಾಲಕಿಯರ ಪ್ರೌಢಶಾಲೆಯ ವಿದ್ಯಾರ್ಥಿನಿಯರಿಗೆ ನಂಜು ನಿರೋಧಕ (ಟಿಟಿ/ಟಿಡಿ) ಲಸಿಕಾ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ವೇಳೆ ಮಾತನಾಡಿದ ಆರೋಗ್ಯ ನಿರೀಕ್ಷಣಾಧಿಕಾರಿ ಮಂಜುನಾಥ ಜಾಲಿಹಾಳ, 'ನಂಜು ನಿರೋಧಕ ಲಸಿಕೆಯು ಟೆಟನಸ್ ಎಂಬ ಅಪಾಯಕಾರಿ ಸೋಂಕು ರೋಗದಿಂದ ರಕ್ಷಣೆ ನೀಡುತ್ತದೆ. ಗಾಯಗಳು ಅಥವಾ ಸೋಂಕಿನಿಂದ ಉಂಟಾಗುವ ಗಂಭೀರ ಆರೋಗ್ಯ ಸಮಸ್ಯೆಗಳನ್ನು ತಡೆಗಟ್ಟುವುದಲ್ಲದೆ, ದೇಹದಲ್ಲಿ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿ ಆರೋಗ್ಯಕರ ಜೀವನಕ್ಕೆ ಸಹಕಾರಿಯಾಗುತ್ತದೆ' ಎಂದು ತಿಳಿಸಿದರು. 'ಮಕ್ಕಳ ಹಾಗೂ ಹದಿಹರೆಯದವರ ಆರೋಗ್ಯ ರಕ್ಷಣೆಯಲ್ಲಿ ಈ ಲಸಿಕೆಯ ಪಾತ್ರ ಮಹತ್ವದ್ದಾಗಿದ್ದು, ರಾಷ್ಟ್ರೀಯ ಲಸಿಕಾ ಕಾರ್ಯಕ್ರಮದಡಿ ಸರ್ಕಾರವು ಉಚಿತವಾಗಿ ಸುರಕ್ಷಿತ ಮತ್ತು ಪರಿಣಾಮಕಾರಿ ಲಸಿಕೆಯನ್ನು ಒದಗಿಸುತ್ತಿದೆ' ಎಂದು ಹೇಳಿದರು.

ಆರೋಗ್ಯ ಸುರಕ್ಷಾ ಅಧಿಕಾರಿ ವಿಜಯಲಕ್ಷ್ಮಿ ಪೊಲೀಸ್ ಪಾಟೀಲ್, ನರ್ಸ್ ರೇಷ್ಮಾ ಓಲೇಕಾರ್ ವಿದ್ಯಾರ್ಥಿನಿಯರಿಗೆ ಲಸಿಕೆ ನೀಡಿ, ಲಸಿಕೆಯ ಪ್ರಯೋಜನಗಳ ಕುರಿತು ಅರಿವು ಮೂಡಿಸಿದರು. ಶಾಲೆಯ ಮುಖ್ಯಶಿಕ್ಷಕ ಎಸ್. ಎನ್. ಹೂಲಗೇರಿ, ಸಿಬ್ಬಂದಿ ಇದ್ದರು.

## ನಾಮಫಲಕಗಳಲ್ಲಿ ಕನ್ನಡ ಕಡ್ಡಾಯ ಮಾಡದಿದ್ದರೆ ಮಸಿ ಬಳಿಯುವ ಹೋರಾಟ

• **ಉದಯವಾಹಿನಿ ಶಹಾಬಾದ್**

ನಗರ ಸಭೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವಾಣಿಜ್ಯ ಮಳಿಗೆಗಳು, ಅಂಗಡಿ ಮುಂಗಟ್ಟುಗಳು ಹಾಗೂ ಸಂಘ ಸಂಸ್ಥೆಗಳಲ್ಲಿ ಮತ್ತು ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಕನ್ನಡ ನಾಮಫಲಕಗಳನ್ನು ಕಡ್ಡಾಯವಾಗಿ ಅಳವಡಿಸಬೇಕು ಸರ್ಕಾರದ ಆದೇಶದ ಪ್ರಕಾರ ಕನ್ನಡ ಬಳಸದಿದ್ದರೆ ಕಪ್ಪು ಮಸಿ ಬಳಿಯುವ ಹೋರಾಟ ಕೈಗೊಳ್ಳಬೇಕಾಗುತ್ತದೆ ಎಂದು ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ ಶೆಟ್ಟಿ ಬಣ) ಪದಾಧಿಕಾರಿಗಳು ನಗರಸಭೆ ಪೌರಾಯುಕ್ತ ಫಕ್ರುದ್ದೀನ್ ಸಾಬ್ ಅವರಿಗೆ ಮನವಿ ಪತ್ರ ಸಲ್ಲಿಸಿದರು. ಕರವೇ ಅಧ್ಯಕ್ಷ ವಿಶ್ವರಾಜ ಫಿರೋಜ್‌ಬಾದ್ ಮಾತನಾಡಿ, ನಗರದ ಎಲ್ಲಾ ನಾಮಫಲಕಗಳಲ್ಲಿ ಕಡ್ಡಾಯವಾಗಿ ಕನ್ನಡ ಭಾಷೆಯನ್ನು ಬಳಸಲೇಬೇಕು. ಕೇವಲ ನಾಮಫಲಕಗಳು ಮಾತ್ರವಲ್ಲದೆ, ನಗರದಲ್ಲಿ ಪ್ರದರ್ಶಿಸಲಾಗುವ ಎಲ್ಲಾ ಬ್ಯಾನರ್‌ಗಳು ಮತ್ತು ಪೋಸ್ಟರ್‌ಗಳಲ್ಲೂ ಕನ್ನಡ ಭಾಷೆಗೆ ಪ್ರಥಮ ಆದ್ಯತೆ ನೀಡಬೇಕು ಎಂದರು.

ಕನ್ನಡ ನಾಮಫಲಕವನ್ನು ಕಡ್ಡಾಯವಾಗಿ ಅಳವಡಿಸದ ಅಂಗಡಿ-ಮುಂಗಟ್ಟುಗಳಿಗೆ ಯಾವುದೇ ಕಾರಣಕ್ಕೂ ಹೊಸ ಪರವಾನಗಿ ನೀಡಬಾರದು ಮತ್ತು ಹಳೆಯ ಪರವಾನಗಿಯನ್ನು ನವೀಕರಿಸಬಾರದು ಎಂದು ಪೌರಾಯುಕ್ತರನ್ನು ತೀವ್ರವಾಗಿ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಕರವೇ ನಗರ ಅಧ್ಯಕ್ಷ ಶರಣು ತಳವಾರ, ಉಪಾಧ್ಯಕ್ಷರಾದ ಲಿಂಗರಾಜ ಕಮರಡಗಿ, ಕಾಶೀನಾಥ ಜಿನಕೇರಿ ಗೌರವ ಅಧ್ಯಕ್ಷರಾದ ಲಾಲ್ ಅಹ್ಮದ್ ಮತ್ತು ರಾಜಶೇಖರ್ ಇಂಗಳಿಗಿ, ಗ್ರಾಮ ಘಟಕಗಳ ಅಧ್ಯಕ್ಷರಾದ ಪ್ರಭು ಮಂಗಳೂರ, ಸೈಯದ್ ಸಮದ್, ಗುಂಡು ಮತ್ತು ಶರಣು ಭಂಡಾರಿ, ಶಶಿ ಭಜಂತ್ರಿ, ಜೀವನ ಪ್ರಕಾಶ, ಮಹೇಶ ಅಲ್ಲೂರ, ಖಾಜಾ ಹಳ್ಳಿ ಮತ್ತು ಅನೇಕ ಕರವೇ ಕಾರ್ಯಕರ್ತರು ಉಪಸ್ಥಿತರಿದ್ದರು.

## ಸಚಿವ ಸ್ಥಾನಕ್ಕಾಗಿ ತೀವ್ರ ಪೈಪೋಟಿ

• **ಉದಯವಾಹಿನಿ ರೋಣ:**

ರಾಜ್ಯದ ಸಚಿವ ಸಂಪುಟ ವಿಸ್ತರಣೆ ವೇಳೆ ಶಾಸಕ ಜಿ.ಎಸ್. ಪಾಟೀಲರಿಗೆ ಪ್ರಾಧಾನ್ಯತೆ ನೀಡಬೇಕೆಂಬ ಒತ್ತಾಯ ಹಿಂದೆಂದೂ ಕಾಣದಷ್ಟು ಜೋರಾಗಿದೆ. ಜಿಲ್ಲೆಯ ಇಬ್ಬರು ಶಾಸಕರ ಪರವಾಗಿ ಅವರವರ ಬೆಂಬಲಿಗರು ಅನುಸರಿಸುತ್ತಿರುವ ಒತ್ತಡ ತಂತ್ರ ಕಾಂಗ್ರೆಸ್ ಹೈಕಮಾಂಡ್ ಹಾಗೂ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಬಿಸಿತುಪ್ಪವಾಗಿ ಪರಿಣಮಿಸಿದೆ.ಬಿಜೆಪಿಯ ಸಿ.ಸಿ. ಪಾಟೀಲರು ಹಾಗೂ ಕಾಂಗ್ರೆಸ್‌ನ ಎಚ್.ಕೆ. ಪಾಟೀಲ ಸತತವಾಗಿ ಸಚಿವ ಸ್ಥಾನ ಪಡೆಯುತ್ತಾ ಬಂದಿದ್ದಾರೆ. ಜಿಲ್ಲೆಯ ಅತಿ ದೊಡ್ಡ ವಿಧಾನಸಭಾ ಕ್ಷೇತ್ರವಾದ ರೋಣಕ್ಕೆ ಮಾತ್ರ ಸಚಿವ ಸ್ಥಾನ ನೀಡುವಿಕೆಯಲ್ಲಿ ನಿರ್ಲಕ್ಷ್ಯ ಧೋರಣೆ ಮುಂದುವರಿದೆ ಎಂಬುದು ಕ್ಷೇತ್ರ ಮುಖಂಡರ ಆರೋಪ.

## ಹೊಸ ಮೆರುಗು ಮಹಾತ್ಮರ ಭಾವಚಿತ್ರಗಳು, ಅವರ ಸಂದೇಶಗಳ ಮೂಲಕ ಸ್ವಚ್ಛತೆಯ ಜಾಗೃತಿ

• **ಉದಯವಾಹಿನಿ ಬೀದರ್:**

ನಗರದ ರೈಲ್ವೆ ಅಂಡರ್ ಪಾಸ್‌ಗಳಿಗೆ ಈಗ ಹೊಸ ಮೆರುಗು ನೀಡಲಾಗುತ್ತಿದೆ. ತಮ್ಮ ಜೀವನದಲ್ಲಿ ಪರಿಸರ ಸಂರಕ್ಷಣೆ ಮತ್ತು ಸ್ವಚ್ಛತೆಗೆ ಹೆಚ್ಚು ಒತ್ತು ಕೊಟ್ಟಿದ್ದ ಮಹಾತ್ಮರ ಚಿತ್ರಗಳು ಹಾಗೂ ಅವರ ಸಂದೇಶಗಳನ್ನು ರೈಲ್ವೆ ಅಂಡರ್‌ಪಾಸ್‌ಗಳ ಗೋಡೆಗಳ ಮೇಲೆ ಬರೆದು, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕೆಲಸಕ್ಕೆ ಬೀದರ್ ಮಹಾನಗರ ಪಾಲಿಕೆ ಮುಂದಾಗಿದೆ.

ಮೊದಲ ಹಂತದಲ್ಲಿ ನಗರದ ಬೊಮ್ಮಗೊಂಡೇಶ್ವರ ವೃತ್ತದಿಂದ ಅಶೋಕ ಹೋಟೆಲ್‌ವರೆಗಿನ ರೈಲ್ವೆ ಅಂಡರ್‌ಪಾಸ್, ಬಸವೇಶ್ವರ ವೃತ್ತ ಹಾಗೂ ನ್ಯೂ ಆದರ್ಶ ಕಾಲೊನಿಯ ಅಂಡರ್‌ಪಾಸ್‌ಗಳಲ್ಲಿ ಈ ಕೆಲಸ ಕೈಗೆತ್ತಿಕೊಳ್ಳಲಾಗಿದೆ. ಈ ಮೂರೂ ಅಂಡರ್‌ಪಾಸ್‌ಗಳು ನಗರದ ಪ್ರಮುಖ ಭಾಗಗಳಿಗೆ ಸಂಪರ್ಕ ಕಲ್ಪಿಸುತ್ತವೆ. ಸಹಜವಾಗಿಯೇ ನಿತ್ಯ ಅತಿಹೆಚ್ಚು ಜನ ಈ ಮಾರ್ಗಗಳ ಮೂಲಕ ಓಡಾಡುವುದರಿಂದ ಇವುಗಳನ್ನು ಆಯ್ಕೆ ಮಾಡಲಾಗಿದೆ. ಮಹಾತ್ಮ ಗಾಂಧೀಜಿಯವರ ಭಾವಚಿತ್ರ ಹಾಗೂ 'ಪರಿಸರ ಸಂರಕ್ಷಣೆ ಪ್ರತಿಯೊಬ್ಬ ನಾಗರಿಕನ ಕರ್ತವ್ಯ' ಎಂಬ ಅವರ ಮಾತು,




ಅದೇ ರೀತಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರ ಮತ್ತು 'ಶಿಕ್ಷಿತ ಸಮಾಜ, ಸ್ವಚ್ಛ ಸಮಾಜ', 'ಸ್ವಚ್ಛತೆ ನಮ್ಮ ಹಕ್ಕು, ನಮ್ಮ ಕರ್ತವ್ಯ' ಎಂಬ ಅವರ ಹೇಳಿಕೆಗಳನ್ನು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳೆರಡಲ್ಲಿ ಬರೆಯಲಾಗುತ್ತಿದೆ. ಇದರೊಂದಿಗೆ ಹಸಿ ಕಸ, ಒಣ ಕಸ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಸ್ವಚ್ಛತೆ ಹೇಗೆ ಕಾಪಾಡಿಕೊಳ್ಳಬೇಕೆಂಬ ಚಿತ್ರಗಳು, ಬರಹಗಳು ಗಮನ ಸೆಳೆಯುತ್ತಿವೆ.ಸ್ಥಳೀಯ ಚಿತ್ರ ಕಲಾವಿದರ ನೆರವಿನೊಂದಿಗೆ ಈ ಕೆಲಸ ಮಾಡಲಾಗುತ್ತಿದೆ. ಅಶೋಕ ಹೋಟೆಲ್ ಸಮೀಪದ ರೈಲ್ವೆ ಅಂಡರ್‌ಪಾಸ್‌ನಲ್ಲಿ ಈಗಾಗಲೇ ಉಬ್ಬು ಶಿಲ್ಪಗಳಿವೆ. ಈಗ ಈ ಹೊಸ ಚಿತ್ರಗಳು, ಸಂದೇಶಗಳಿಂದ ಇನ್ನಷ್ಟು ಹೊಸ ಮೆರುಗು ಬಂದಿದ್ದು, ದಾರಿ ಹೋಕರನ್ನು ಆಕರ್ಷಿಸುತ್ತಿವೆ.

'ಮೊದಲ ಹಂತದಲ್ಲಿ ಕೆಲ ಆಯ್ದ ಸ್ಥಳಗಳಲ್ಲಿ ಪರಿಸರ ಹಾಗೂ ಸ್ವಚ್ಛತೆಗೆ ಸಂಬಂಧಿಸಿದ ಚಿತ್ರ. ಸಂದೇಶಗಳನ್ನು ಬರೆಸಲಾಗುತ್ತಿದೆ. ಬರುವ ದಿನಗಳಲ್ಲಿ ಸಾರ್ವಜನಿಕರು ಓಡಾಡುವ ಸ್ಥಳಗಳಲ್ಲೂ ಮಾಡಿಸಲಾಗುವುದು. ಚಿತ್ರಗಳು, ಸಂದೇಶಗಳ ಬಗ್ಗೆ ಏನಾದರೂ ಅನಿಸಿದರೆ ಸಾರ್ವಜನಿಕರು ಪಾಲಿಕೆಗೆ ತಿಳಿಸಬಹುದು. ಜೊತೆಗೆ ಸ್ವಚ್ಛತೆ ಕುರಿತು ಪರಿಣಾಮಕಾರಿಯಾಗಿ ಜಾಗೃತಿ ಮೂಡಿಸಲು ಇನ್ನಷ್ಟು ಉತ್ತಮ ಚಿತ್ರಗಳು, ಬರಹಗಳು ಇದ್ದರೆ ಸಲಹೆ ನೀಡಬಹುದು. ಈ ಕಾರ್ಯದಲ್ಲಿ ಸಾರ್ವಜನಿಕರು, ಸಂಘ ಸಂಸ್ಥೆಗಳು ಕೂಡ ಪಾಲ್ಗೊಳ್ಳಬಹುದು' ಎಂದು ಬೀದರ್ ಮಹಾನಗರ ಪಾಲಿಕೆಯ ಆಯುಕ್ತ ಮುಕುಲ್ ಜೈನ್ ತಿಳಿಸಿದ್ದಾರೆ.

'ಸಾರ್ವಜನಿಕ ಸ್ಥಳಗಳಲ್ಲಿ ಸ್ವಚ್ಛತೆ ಕಾಪಾಡುವುದು ಪ್ರತಿಯೊಬ್ಬರ ನಾಗರಿಕನ ಕರ್ತವ್ಯ. ಸಾರ್ವಜನಿಕ ಸ್ಥಳಗಳಲ್ಲಿ ಸ್ವಚ್ಛತೆ, ಪರಿಸರ ಜಾಗೃತಿಗೆ ಯಾರೂ ಕೂಡ ಮುಂದಾಗಬಹುದು. ಅದಕ್ಕೆ ಪಾಲಿಕೆ ಸಹಕಾರ ನೀಡಲಿದೆ. ಎಲ್ಲಾದರೂ ಸಸಿಗಳನ್ನು ನೆಡುವ ಯೋಜನೆಗಳಿದ್ದರೂ ತಿಳಿಸಬಹುದು' ಎಂದು ಹೇಳಿದ್ದಾರೆ.

## ಆಧುನಿಕ ಕೃಷಿ ಪದ್ಧತಿ ಅಳವಡಿಕೆ: 'ಯುವಕೃಷಿಕ ಪ್ರಶಸ್ತಿ' ಪಡೆದ ರೈತ

• **ಉದಯವಾಹಿನಿ ಹುಬ್ಬಳ್ಳಿ:**

ಸಾಂಪ್ರದಾಯಿಕ ಕೃಷಿ ಪದ್ಧತಿ ಜೊತೆಗೆ ಆಧುನಿಕ ಕೃಷಿ ಅಳವಡಿಸಿಕೊಂಡು ಉತ್ತಮ ಆದಾಯ ಪಡೆಯುತ್ತಿರುವ ಧಾರವಾಡ ತಾಲ್ಲೂಕಿನ ಹಳೆತೇಗೂರು ಗ್ರಾಮದ ಯುವರೈತ ಶಿವನಗೌಡ ಪಾಟೀಲ ಅವರು ಇತರ ರೈತರಿಗೆ ಮಾದರಿಯಾಗಿದ್ದಾರೆ. ಶಿವನಗೌಡ ಪಾಟೀಲ ಅವರು ಒಟ್ಟು 5 ಎಕರೆ ಜಮೀನಿನಲ್ಲಿ ಒಂದು ಎಕರೆ ರೇಷ್ಮೆ, ಒಂದು ಎಕರೆ ಮಹಾಗನಿ, ಉಳಿದ ಮೂರು ಎಕರೆಯಲ್ಲಿ ಕಬ್ಬು ಬೆಳೆದು ಉತ್ತಮ ಆದಾಯ ಪಡೆಯುತ್ತಿದ್ದಾರೆ. ಜೊತೆಗೆ ಕುರಿ ಸಾಕಣೆ, ಕೋಳಿ ಸಾಕಣೆ ಕೂಡ ಮಾಡುತ್ತಾರೆ. ಅವರ ಕೃಷಿ ಸಾಧನೆ ಗುರುತಿಸಿದ ಧಾರವಾಡ ಕೃಷಿ ವಿಶ್ವವಿದ್ಯಾಲಯವು 2018ರ ಕೃಷಿ ಮೇಳದಲ್ಲಿ 'ಯುವಕೃಷಿಕ ಪ್ರಶಸ್ತಿ' ನೀಡಿ ಗೌರವಿಸಿದೆ. 'ರೇಷ್ಮೆ ಇಲಾಖೆಯಿಂದ ಸಣ್ಣ ಹಿಡುವಳಿದಾರರಿಗೆ ನೀಡುವ ಸಹಾಯಧನ ಪಡೆದು ಶೆಡ್ ನಿರ್ಮಿಸಿ ರೇಷ್ಮೆ ಕೃಷಿ ಆರಂಭಿಸಿದೆ.

ಧಾರವಾಡ ತಾಲ್ಲೂಕಿನ ಚಿಕ್ಕಮಲ್ಲಿಗವಾಡ ಗ್ರಾಮದ ಚಾಕಿ ಸೆಂಟರ್‌ನಿಂದ (ರೇಷ್ಮೆಹುಳು ಕೇಂದ್ರ) ಪ್ರತಿ 10 ಲಿಂಕ್ಸ್‌ಗಳಿಗೆ 500 ದರದಂತೆ ರೇಷ್ಮೆಹುಳು ಖರೀದಿಸುತ್ತೇನೆ. ಹುಳುವಿನ ಆಹಾರಕ್ಕಾಗಿ ಒಂದು ಎಕರೆಯಲ್ಲಿ ಹಿಪ್ಪುನೇರಳೆ ಬೆಳೆದಿದ್ದೇನೆ' ಎಂದು ಶಿವನಗೌಡ ಪಾಟೀಲ ತಿಳಿಸಿದರು.




'ರೇಷ್ಮೆ ಗೂಡುಗಳಿಗೆ ಹುಳು ಹಾಕಿದ 25 ದಿನಗಳಿಗೆ ರೇಷ್ಮೆ ಮಾರಾಟಕ್ಕೆ ಬರುತ್ತದೆ. ರಾಮನಗರ, ಗೋಕಾಕ್, ಶಿರಹಟ್ಟಿ ಮಾರುಕಟ್ಟೆಗಳಲ್ಲಿ ಮಾರಾಟ ಮಾಡುತ್ತೇನೆ. ಪ್ರತಿ ಕೆಜಿ ರೇಷ್ಮೆಗೆ ಗುಣಮಟ್ಟದ ಅನುಸಾರ 500 ರಿಂದ 900ರ ವರೆಗೆ ಬೆಲೆ ದೊರಕುತ್ತದೆ. ಒಂದು ಬಾರಿ ರೇಷ್ಮೆಗೂಡು ಮಾರಾಟಕ್ಕೆ ಬಂದರೆ ಅಂದಾಜು 50 ಸಾವಿರ ವರೆಗೆ ಒಟ್ಟು ಆದಾಯ ದೊರಕುತ್ತದೆ. ಎಲ್ಲಾ ಮಾರುಕಟ್ಟೆ ಹೋಲಿಸಿದರೆ ರಾಮನಗರ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ದೊರಕುತ್ತದೆ' ಎನ್ನುತ್ತಾರೆ.

**ರೋಗ ನಿಯಂತ್ರಣ:** 'ರೇಷ್ಮೆ ಹುಳುವಿಗೆ ಹಾಲರೋಗ, ಸೆಪ್ಪೆರೋಗ ಎಂಬ ರೋಗಗಳು ಬರುತ್ತದೆ. ಮುಂಜಾಗ್ರತೆ ಕ್ರಮವಾಗಿ ಬಿಳಿಸುಣ್ಣದ ಜೊತೆಗೆ ಔಷಧಿಗಳನ್ನು ಪ್ರತಿದಿನ ಸಿಂಪಡಿಸಬೇಕಾಗುತ್ತದೆ' ಎಂದು ತಿಳಿಸಿದರು.

'ಸಾಂಪ್ರದಾಯಿಕ ಕಬ್ಬುಬೆಳೆ ಜೊತೆಗೆ ರೇಷ್ಮೆ ಕೃಷಿ ಅಳಡಿಸಿಕೊಂಡು ಉತ್ತಮ ಆದಾಯ ಪಡೆಯುತ್ತಿದ್ದೇನೆ. ರೇಷ್ಮೆಹುಳು ಸಾಕಣೆಗೆ ರೇಷ್ಮೆ ಇಲಾಖೆಯಿಂದ ಸಹಾಯಧನ ಹಾಗೂ ಅಗತ್ಯ ಸಲಕರಣೆಗಳನ್ನು ವಿತರಿಸುತ್ತಾರೆ. ಇದರ ಸದುಪಯೋಗ ಪಡೆದುಕೊಂಡು ಉತ್ತಮ ಆದಾಯ ಪಡೆಯಬಹುದು' ಎನ್ನುತ್ತಾರೆ ಅವರು. ರೇಷ್ಮೆ, ಕುರಿ, ಕೋಳಿ ಸಾಕಣೆಯಿಂದ ಉತ್ತಮ ಆದಾಯ ಪಡೆಯಬಹುದು.

> **ಆಂಧ್ರಪ್ರದೇಶ ಮೂಲದ ಚತುರ್ವೇದ ಕಂಪನಿ ಜೊತೆಗೆ 40 ಸಾವಿರ ತುಂಬಿ ಒಪ್ಪಂದ ಮಾಡಿಕೊಂಡಿದ್ದು, ಒಂದು ಎಕರೆ ಜಮೀನಿನಲ್ಲಿ 500 ಮಹಾಗನಿ ಗಿಡಗಳನ್ನು ಬೆಳೆದಿದ್ದೇನೆ. ಮಹಾಗನಿ ಬೆಳೆಯು ಸುಮಾರು 12 ವರ್ಷದ ಬೆಳೆಯಾಗಿದೆ. ಮಾರುಕಟ್ಟೆ ದರದ ಅನುಸಾರ ಮಾರಾಟ ಮಾಡಲಾಗುತ್ತದೆ. ಮಹಾಗನಿ ಬೆಳೆಯಲು ವೆಚ್ಚವು ಕಡಿಮೆ ತಗಲುತ್ತದೆ. ಬೆಳೆ ಇನ್ನೂ ಐದಾರು ವರ್ಷಗಳಲ್ಲಿ ಕಟಾವಿಗೆ ಬರಲಿದೆ. ಉತ್ತಮ ಆದಾಯದ ನಿರೀಕ್ಷೆಯಲ್ಲಿದ್ದೇನೆ' ಎನ್ನುತ್ತಾರೆ .**
> ಶಿವನಗೌಡ ಪಾಟೀಲ.

## ಭೂ ಪರಿಹಾರಕ್ಕಾಗಿ ಬಳ್ಳಾರಿ ರೈತರ ಪ್ರತಿಭಟನೆ

• **ಉದಯವಾಹಿನಿ ಬಳ್ಳಾರಿ:**

ಕುಡುತಿನಿ ಬಳಿ ಕೈಗಾರಿಕೆ ಉದ್ದೇಶಕ್ಕೆಂದು ಸರ್ಕಾರ ವಶಪಡಿಸಿಕೊಂಡ ಭೂಮಿಗೆ ನ್ಯಾಯಯುತ ಪರಿಹಾರ ಮತ್ತು ಭೂಮಿಯ ಮಾರುಕಟ್ಟೆ ಮೌಲ್ಯ ನೀಡುವಂತೆ ಆಗ್ರಹಿಸಿ ಕುಡುತಿನಿ ಭಾಗದ ಭೂ ಸಂತ್ರಸ್ತ ರೈತರು ಬಳ್ಳಾರಿಯಲ್ಲಿ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯ ಭಾಗವಾಗಿ ಬಳ್ಳಾರಿ ನಗರ ಬಂದ್‌ಗೆ ಕರೆ ನೀಡಲಾಗಿತ್ತಾದರೂ, ಬೆಂಬಲ ವ್ಯಕ್ತವಾಗಲಿಲ್ಲ. ಬೆಂಗಳೂರು ರಸ್ತೆಯಲ್ಲಿ ಕೆಲ ಕಾಲ ಅಂಗಡಿಗಳನ್ನು ಬಂದ್ ಮಾಡಿಸಲಾಯಿತಾದರೂ, ಬಳಿಕ ಅಂಗಡಿಗಳು ಎಂದಿನಂತೆ ಕಾರ್ಯನಿರ್ವಹಿಸಿದವು.

ಪ್ರತಿಭಟನಯು ನಗರದ ಗಡಿಗಿ ಚೆನ್ನಪ್ಪ (ರಾಯಲ್) ವೃತ್ತಕ್ಕೆ ಮಾತ್ರ ಸೀಮಿತವಾಗಿತ್ತು. ವೃತ್ತದಲ್ಲಿ ಸೇರಿದ್ದ ರೈತರು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು. ಕುಡುತಿನಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಸಾವಿರಾರು ಎಕರೆ ಭೂಮಿಯನ್ನು ಬ್ರಹ್ಮಣಿ, ಮಿತ್ತಲ್, ಎನ್‌ಎಂಡಿಸಿ ಸೇರಿದಂತೆ ವಿವಿಧ ಕೈಗಾರಿಕೆಗಳ ಸ್ಥಾಪನೆಗಾಗಿ ಸುಮಾರು 15 ವರ್ಷಗಳ ಹಿಂದೆ ವಶಪಡಿಸಿಕೊಳ್ಳಲಾಗಿತ್ತು. ಆದರೆ, ಭೂಮಿ ಕಳೆದುಕೊಂಡ ರೈತರಿಗೆ ಈವರೆಗೆ ನ್ಯಾಯಯುತ ಪರಿಹಾರ ಮತ್ತು ಮಾರುಕಟ್ಟೆ ಮೌಲ್ಯದ ಬೆಲೆ ದೊರೆತಿಲ್ಲ ಎಂದು ಭೂ ಸಂತ್ರಸ್ತರು ಆರೋಪಿಸಿದರು.

'ನಿರ್ದಿಷ್ಟ ಉದ್ದೇಶಕ್ಕಾಗಿ ವಶಪಡಿ ಸಿಕೊಂಡ ಭೂಮಿಯನ್ನು ಹತ್ತು ವರ್ಷಗಳೊಳಗೆ ಆ ಉದ್ದೇಶಕ್ಕೆ ಬಳಸಬೇಕು. ಇಲ್ಲವಾದಲ್ಲಿ ಭೂಮಿಯನ್ನು ಮೂಲ ಮಾಲೀಕರಿಗೆ ಮರಳಿಸಬೇಕು. ಆದರೆ, ತಮ್ಮ ಭೂಮಿಯನ್ನು ಬಳಸದೆ ಇಟ್ಟಿದ್ದರೂ ಸರ್ಕಾರ ಅದನ್ನು ಹಿಂದಿರುಗಿಸುತ್ತಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

## ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಚಿಕ್ಕೋಡಿಯ ಬಟ್ಟೆ ಅಂಗಡಿಗೆ ಬೆಂಕಿ




• **ಉದಯವಾಹಿನಿ ಬೆಳಗಾವಿ:**

ಚಿಕ್ಕೋಡಿ ಪಟ್ಟಣದಲ್ಲಿ ಭೀಕರ ಅಗ್ನಿ ಅವಘಡವೊಂದು ಸಂಭವಿಸಿದ್ದು, ಶಾರ್ಟ್ ಸರ್ಕ್ಯೂಟ್ ಪರಿಣಾಮವಾಗಿ ಬಟ್ಟೆ ಅಂಗಡಿಯೊಂದು ಸಂಪೂರ್ಣವಾಗಿ ಹೊತ್ತಿ ಉರಿದಿರುವ ಘಟನೆ ನಡೆದಿದೆ.

ಪೇಟೆಯಲ್ಲಿರುವ ಪ್ರಸಿದ್ಧ ಜಯಶ್ರೀ ಗಾರ್ಮೆಂಟ್ಸ್ ಬಟ್ಟೆ ಅಂಗಡಿಯಲ್ಲಿ ಗುರುವಾರ ರಾತ್ರಿ ಈ ದುರ್ಘಟನೆ ಸಂಭವಿಸಿದೆ. ಅಂಗಡಿಯಲ್ಲಿ ಹಠಾತ್ ಕಾಣಿಸಿಕೊಂಡ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಬೆಂಕಿ ಉಂಟಾಗಿದ್ದು, ನೋಡನೋಡುತ್ತಿದ್ದಂತೆಯೇ ಇಡೀ ಅಂಗಡಿಗೆ ವ್ಯಾಪಿಸಿದೆ. ಜವಳಿ ಅಂಗಡಿಯಾಗಿದ್ದರಿಂದ ಬೆಂಕಿ ಅತ್ಯಂತ ವೇಗವಾಗಿ ಹರಡಿದ್ದು, ಇಡೀ ಕಟ್ಟಡವನ್ನು ದಟ್ಟವಾದ ಹೊಗೆ ಆವರಿಸಿಕೊಂಡಿತ್ತು.

ಅಗ್ನಿ ಅವಘಡದಲ್ಲಿ ಜಯಶ್ರೀ ಗಾರ್ಮೆಂಟ್ಸ್‌ನಲ್ಲಿದ್ದ ಲಕ್ಷಾಂತರ ರೂಪಾಯಿ ಮೌಲ್ಯದ ಸಿದ್ಧ ಉಡುಪುಗಳು ಮತ್ತು ಬೆಲೆಬಾಳುವ ಬಟ್ಟೆಗಳು ಸಂಪೂರ್ಣವಾಗಿ ಬೆಂಕಿಗೆ ಆಹುತಿಯಾಗಿವೆ. ಅಂಗಡಿಯ ಮಾಲೀಕರಿಗೆ ಭಾರಿ ಪ್ರಮಾಣದ ಆರ್ಥಿಕ ನಷ್ಟ ಸಂಭವಿಸಿದೆ ಎಂದು ಪ್ರಾಥಮಿಕ ಅಂದಾಜಿನಿಂದ ತಿಳಿದುಬಂದಿದೆ.

## ಸಂಚಾರಕ್ಕೆ ಇಕ್ಕಟ್ಟಾದ ರಾಜ್ಯ ಹೆದ್ದಾರಿ




• **ಉದಯವಾಹಿನಿ ತೇರದಾಳ:**

ಪಟ್ಟಣದ ಮೂಲಕ ಹಾಯ್ದು ನೆರೆಯ ಮಹಾರಾಷ್ಟ್ರಕ್ಕೆ ಸಂಪರ್ಕ ಕಲ್ಪಿಸುವ ಕಾಗವಾಡ-ಕಲಾದಗಿ ರಾಜ್ಯ ಹೆದ್ದಾರಿ ಪಟ್ಟಣದ ಕೆಲವು ಕಡೆ ತೀರಾ ಇಕ್ಕಟ್ಟಾಗಿದೆ. ಇದರಿಂದ ಭಾರಿ ವಾಹನಗಳ ಚಾಲಕರು ಹರಸಾಹಸ ಪಡುತ್ತಿದ್ದಾರೆ.

ಪಟ್ಟಣದ ಮೂಲಕ ಹಾಯ್ದು ಹೋಗುವ ಈ ರಸ್ತೆ ಕಾಗವಾಡದಿಂದ ಕಲಾದಗಿಯವರೆಗೆ ಅಂದಾಜು 115 ಕಿ.ಮೀ ಇದೆ. ಜಮಖಂಡಿ ಉಪವಿಭಾಗದಲ್ಲಿ 56 ಕಿ.ಮೀ ದೂರ ಇರುವ ಈ ರಾಜ್ಯ ಹೆದ್ದಾರಿ, ಪಟ್ಟಣದ ಬಸ್ ನಿಲ್ದಾಣದಿಂದ ಡಾ.ಅಂಬೇಡ್ಕರ್ ವೃತ್ತದವರೆಗೂ ಇಕ್ಕಟ್ಟಾಗಿದೆ. ಉಪನೋಂದಣಿ ಕಚೇರಿ ಮುಂಭಾಗ ಹಾಗೂ ಯಲ್ಲಮ್ಮ ದೇವಸ್ಥಾನದ ತಿರುವಿನಲ್ಲಿ ತುಂಬಾ ಕಿರಿದಾಗಿದೆ. ಮತ್ತೊಂದು ವಾಹನ ಬಂದರೆ ಪಕ್ಕದಲ್ಲಿ ಜಾಗವಿರದಷ್ಟು ಕಿರಿದಾಗಿದೆ.

ಇದರಿಂದಾಗಿ ಭಾರಿ ವಾಹನಗಳ ಚಾಲಕರು ನಿತ್ಯ ಶಪಿಸುತ್ತಲೆ ಈ ದಾರಿ ಕ್ರಮಿಸಬೇಕಿದೆ. ಬಸ್ ಪ್ರಯಾಣಕ್ಕೂ ಇದರ ಬಿಸಿ ಮುಟ್ಟಿದ್ದು, ನಿತ್ಯವೂ ಚಾಲಕರು, ಪ್ರಯಾಣಿಕರು ಸಂಕಷ್ಟ ಎದುರಿಸುತ್ತಿದ್ದಾರೆ. ರಾಜ್ಯ ಹೆದ್ದಾರಿಗಿರುವ ಕನಿಷ್ಠ ಅಗಲಿಕೆ ಕೂಡ ಇಲ್ಲದ ಈ ರಸ್ತೆ ಗ್ರಾಮೀಣ ರಸ್ತೆಯಂತೆ ಅನಿಸುತ್ತದೆ. ಹಲವು ವರ್ಷಗಳ ಹಿಂದೆ ಈ ರಸ್ತೆ ವಿಸ್ತರಣೆಗೆ ಲೋಕೋಪಯೋಗಿ ಇಲಾಖೆ ಯೋಜನೆ ರೂಪಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿದೆ.

ಇಲಾಖೆ ಹಂತದಲ್ಲಿ ರೂಪಿತವಾದ ಯೋಜನೆ ಅಲ್ಲಿಯೇ ಭದ್ರವಾಗಿದೆ. ಟೆಂಡರ್ ಪ್ರಕ್ರಿಯೆ ಇನ್ನೂ ಆಗಿಲ್ಲ. ಜಿಲ್ಲೆಯ ಯಾವ ಸ್ಥಳದಲ್ಲೂ ಇಷ್ಟು ಕಿರಿದಾಗಿಲ್ಲ. ಅಲ್ಲೆಲ್ಲ ಅಗಲಿಕರಣವಾಗಿರುವ ಈ ರಸ್ತೆ ತೇರದಾಳದಲ್ಲಿ ಮಾತ್ರವೇಕೆ ಕಿರಿದಾಗಿದೆ ಎಂಬ ಪ್ರಶ್ನೆ ಸಾರ್ವಜನಿಕರನ್ನು ಕಾಡುತ್ತಿದೆ.

ಸರ್ಕಾರ, ಇಲಾಖೆ, ಸ್ಥಳೀಯ ಜನಪ್ರತಿನಿಧಿಗಳ ಇಚ್ಛಾಶಕ್ತಿಯ ಕೊರತೆಯೇ ಇದಕ್ಕೆ ಪ್ರಮುಖ ಕಾರಣವಾಗಿದೆ ಎಂಬುದು ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿದೆ. ರಸ್ತೆ ಕಿರಿದಾಗಿ ಮಾತ್ರವಲ್ಲದೆ ಇದರ ತುಂಬ ಗುಂಡಿಗಳೇ ಇರುವುದು ಮತ್ತೊಂದು ಬಹುದೊಡ್ಡ ಸಮಸ್ಯೆ. ಇಲಾಖೆ ಇದರ ದುರಸ್ತಿ ಕೂಡ ಸರಿಯಾಗಿ ಮಾಡದ್ದರಿಂದ ಮಳೆಗಾಲದಲ್ಲಿ ಗುಂಡಿಗಳಲ್ಲಿ ನೀರು ನಿಂತು ದ್ವಿ ಚಕ್ರ ವಾಹನ ಸವಾರರಾದಿಯಾಗಿ ಉಳಿದವರು ಗುಂಡಿಗಳಲ್ಲಿ ಮುಗುಚಿ ಬೀಳುತ್ತಿದ್ದಾರೆ.

## ಪ್ರಗತಿ ಹಂತದ ಕಾಮಗಾರಿಗಳು ತಿಂಗಳಲ್ಲಿ ಮುಕ್ತಾಯಕ್ಕೆ ಗಡುವು




• **ಉದಯವಾಹಿನಿ,ಚಿಂಚೋಳಿ:**

ತಾಲ್ಲೂಕಿನ 32ಗ್ರಾಮಗಳು ಸೇಡಂ ಮತಕ್ಷೇತ್ರಕ್ಕೆ ಒಳಪಡುವ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಜೆಜೆಎಂ,ಅಂಗನವಾಡಿ ಕಟ್ಟಡ,ಶಾಲಾ ಕಟ್ಟಡ,ಚರಂಡಿ ಸಿಸಿ ರಸ್ತೆ,ಪಶು ಆಸ್ಪತ್ರೇ ಸೇರಿದಂತೆ ನಡೆಯುತ್ತಿರುವ ಎಲ್ಲಾ ಕಾಮಗಾರಿಗಳು ಒಂದು ತಿಂಗಳಲ್ಲಿ ಮುಕ್ತಾಯಗೋಳಿಸಬೇಕು ಇಲ್ಲಾದಿದ್ದರೆ ಅಧಿಕಾರಿಗಳ ಮೇಲೆ ಕ್ರಮಕ್ಕೈಗೋಳ್ಳಲಾಗುವುದು ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ್ ಖಡಕ್ ಎಚ್ಚರಿಕೆ ನೀಡಿದರು.

ಸೇಡಂ ಮತಕ್ಷೇತ್ರಕ್ಕೆ ಒಳಪಡುವ ಚಿಂಚೋಳಿ ತಾಲ್ಲೂಕಿನ ಸುಲೇಪೇಟ ಗ್ರಾಮದಲ್ಲಿ ಹಮ್ಮಿಕೋಂಡ ಕೆಡಿಪಿ ಸಭೆಯಲ್ಲಿ 10ಗ್ರಾ.ಪಂ.ಗೆ ಒಳಪಡುವ ಕಾಮಾರಿಗಳ ಕುರಿತು ಮಾತನಾಡಿದ ಅವರು,ಮೂರು ವರ್ಷದಿಂದ ಖರ್ಚಖೇಡ ಗ್ರಾಮದಲ್ಲಿನ ಪಶು ಆಸ್ಪತ್ರೇ ಕಟ್ಟಡ ಮಾಡಿಲ್ಲ,ಗಡಿಕೇಶ್ವಾರ ಗ್ರಾಮದಲ್ಲಿ ಜೆಜೆಎಂ ಕಾಮಾಗಾರಿ ನೆನೆಗುದ್ದಿಗೆ ಬಿದ್ದಿದೆ,30ಗ್ರಾಮಗಳಲ್ಲಿ ವಿದ್ಯುತ್ ಸಮಸ್ಯೆ,ಚರಂಡಿ,ಸಿಸಿರಸ್ತೆ,ವಿವಿಧ ಕಟ್ಟಡ ಕಾಮಾರಿಗಳು ಮತ್ತು ಅರಣ್ಯ ಇಲಾಖೆಯಡಿ ನಡೆಯತ್ತಿರುವ ಕಾಮಾರಿಗಳು ಶ್ರೀಘ್ರದಲ್ಲೇ ಮುಕ್ತಾಯಗೋಳಿಸಲು ಸೂಚಿಸಿದರು ಇಲ್ಲಾದಿದ್ದರೆ ಯಾವುದೇ ಮುಲಾಜಿಲ್ಲದೆ ಅಮಾನತ್ತುಗೋಳಿಸಲಾಗುವುದು ಎಂದರು.

ಸಾಮಾಜಿಕ ಅರಣ್ಯ ಇಲಾಖೆಯಡಿ ಗರಗಪಳ್ಳಿ-ಭಕ್ತಂಪಳ್ಳಿ ಗಣಪೂರ ಕಡೆ ಸಸಿ ನೆಟ್ಟಿರುವ 10ಕಿಮೀ ಉದ್ದ ಕಾಮಗಾರಿಯು ದೂರು ಬಂದಿದೆ ಇದನ್ನು ತನಿಖೆ ನಡೆಸಿ ನನಗೆ ವರದಿ ಸಲ್ಲಿಸುವಂತೆ ಕೃಷಿ ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್ ಅವರಿಗೆ ಸಚಿವರು ಸೂಚಿಸಿದರು,ಗಡಿಕೇಶ್ವರ ಕುಪನೂರ ಗ್ರಾಮಗಳ ಕಡೆ ವಿದ್ಯತ್ ಸಮಸ್ಯೆ ಕಂಬ ಸಮಸ್ಯೆ ಗಂಗಾಕಲ್ಯಾಣ ಸಮಸ್ಯೆ ಪರಿಹರಿಸುವಂತೆ ಸಚಿವರು ಜೇಸ್ಕಾಂ ಇಇ ಪರಮೇಶ್ವರ ಬಿರಾದಾರ ಅವರಿಗೆ ಸೂಚಿಸಿದರು.

ಜಿಲ್ಲಾದ್ಯಂತ 243ಕೋಟಿ ರೂ.ಪರಿಹಾರ,340ಕೋಟಿ ರೂ.ಬೆಳೆವಿಮೆ ಪರಿಹಾರ ಜುಲೈ ತಿಂಗಳಲ್ಲಿ ರೈತರ ಬ್ಯಾಂಕ್ ಖಾತೆಗಳಿಗೆ ಡಿಬಿಟಿ ಮೂಲಕ ಜಮಾ ಆಗಲಿದೆ ಎಂದು ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್ ತಿಳಿಸಿದರು,ವಿವಿಧ ಎಲ್ಲಾ ಇಲಾಖೆಯ ಅಧಿಕಾರಿಗಳೂ ವರ್ಷದ ಪ್ರಗತಿ ವರದಿ ಓದಿ ಹೇಳಿದರು.

# ನನಸಾಗದ ಹಾವೇರಿ ಸರ್ಕಾರಿ ಕಾನೂನು ಮಹಾವಿದ್ಯಾಲಯ

## ಬಸವರಾಜ ಬೊಮ್ಮಾಯಿ ಅವರು ಸಿಎಂ ಆಗಿದ್ದಾಗ ಕಾನೂನು ಮಹಾವಿದ್ಯಾಲಯದ ಕಟ್ಟಡ ಕಾಮಗಾರಿಗೆ ಶಿಲಾನ್ಯಾಸ

• **ಉದಯವಾಹಿನಿ ಹಾವೇರಿ:**

ಉತ್ತರ ಕರ್ನಾಟಕದ ಹೆಬ್ಬಾಗಿಲು ಹಾವೇರಿ. ಹಾವೇರಿ ಜಿಲ್ಲೆಯಾಗಿ 29 ವರ್ಷಗಳೇ ಗತಿಸಿವೆ. ಆದರೂ ಜಿಲ್ಲೆಯಲ್ಲಿ ಒಂದು ಸರ್ಕಾರಿ ಕಾನೂನು ಮಹಾವಿದ್ಯಾಲಯವಿಲ್ಲ. ಬಸವರಾಜ ಬೊಮ್ಮಾಯಿ ಸಿಎಂ ಆಗಿದ್ದಾಗ ಶಿಲಾನ್ಯಾಸ ನೆರವೇರಿಸಲ್ಪಟ್ಟಿದ್ದ ಕಾನೂನು ಮಹಾವಿದ್ಯಾಲಯದ ಕಟ್ಟಡ ಕಾಮಗಾರಿ ಆಮೆಗತಿಯಲ್ಲಿ ಸಾಗಿದ್ದು, ಜಿಲ್ಲೆಯ ಕಾನೂನಾಸಕ್ತರಿಗೆ ಕಾನೂನು ಪದವಿ ಮರೀಚಿಕೆಯಾಗಿದೆ.

**1 : ಎರಡು ಮಹಡಿಯಲ್ಲಿ ಮಹಾವಿದ್ಯಾಲಯ**
**2 : ಗುತ್ತಿಗೆದಾರನಿಗೆ ಮೂರು ಬಾರಿ ನೋಟೀಸ್**
**3 : ಬಾಡಿಗೆ ಕಟ್ಟಡದಲ್ಲಿ ತರಗತಿ ಆರಂಭಿಸಿ**

2022ರಲ್ಲಿ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದ ವೇಳೆ ಹಾವೇರಿಗೆ ಕಾನೂನು ಮಹಾವಿದ್ಯಾಲಯ ಘೋಷಣೆ ಮಾಡಲಾಗಿತ್ತು. ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಆರಂಭವಾಗಬೇಕಿದ್ದ ಕಾನೂನು ಮಹಾವಿದ್ಯಾಲಯ ಮುಂದಿನ ಶೈಕ್ಷಣಿಕ ವರ್ಷದಲ್ಲಿಯಾದರೂ ಆರಂಭವಾಗಬಹುದೇ ಎಂದು ಆಸೆಗಣ್ಣಿನಿಂದ ಕಾಯುತ್ತಿದ್ದವರಿಗೆ, ಆ ಲಕ್ಷಣಗಳೇ ಕಾಣಿಸುತ್ತಿಲ್ಲ. ಇದರಿಂದ ಹಾವೇರಿ ಜಿಲ್ಲೆ ಸೇರಿದಂತೆ ಸುತ್ತಮುತ್ತಲ ಜಿಲ್ಲೆಗಳಲ್ಲಿ ಕಾನೂನು ಪದವಿ ಕನಸು ಕಂಡಿದ್ದ ವಿದ್ಯಾರ್ಥಿಗಳು ಆತಂಕಕ್ಕೊಳಗಾಗಿದ್ದಾರೆ. ಬಿಜೆಪಿ ಸರ್ಕಾರದಲ್ಲಿ




ಬಿಡುಗಡೆಯಾದ ಕಾಲೇಜು ಕಟ್ಟಡಕ್ಕೆ ಕಾಂಗ್ರೆಸ್‌ನವರು ಅನುದಾನ ನೀಡಲು ವಿಳಂಬ ಮಾಡುತ್ತಿದ್ದಾರೆ ಎಂಬ ಆರೋಪಗಳು ಕೇಳಿಬಂದಿವೆ.

ಹಾವೇರಿ ಕಾನೂನು ಮಹಾವಿದ್ಯಾಲಯವನ್ನು ಎರಡು ಮಹಡಿಗಳ ಕಟ್ಟಡದಲ್ಲಿ ನಿರ್ಮಿಸಲಾಗುತ್ತಿದೆ. ಜಿಪ್ಲಸ್ ತ್ರೀ ಮಾದರಿಯಲ್ಲಿ ಕಟ್ಟಡದ ಕಾಮಗಾರಿ ಕೈಗೊಳ್ಳಲಾಗಿದೆ. ನೆಲಮಹಡಿಯಲ್ಲಿ ಮೂರು ಬೋಧನಾ ಕೊಠಡಿಗಳು, ಪ್ರಾಚಾರ್ಯರ ಕೊಠಡಿ, ಗ್ರಂಥಾಲಯ ಕೊಠಡಿ, ಸಿಬ್ಬಂದಿ ಕೊಠಡಿ, ಕಂಪ್ಯೂಟರ್ ಕೊಠಡಿ, ಕಚೇರಿ ಕೊಠಡಿ, ಎಲೆಕ್ಟ್ರಾನಿಕ್ ಕೊಠಡಿ ಸೇರಿದಂತೆ ವಿವಿಧ ಕೊಠಡಿಗಳನ್ನು ನಿರ್ಮಿಸಲಾಗುತ್ತಿದೆ. ಮೊದಲ ಮಹಡಿಯಲ್ಲಿ ಎಲ್ಲಾ ಕೊಠಡಿಗಳ ಕಾಮಗಾರಿ ಮುಗಿದ ಮೇಲೆ ಮೇಲ್ಮಹಡಿಯ ಕಟ್ಟಡ ಕಾಮಗಾರಿ ಆರಂಭವಾಗಲಿದೆ. ಆದರೆ ಮೊದಲ ಮಹಡಿಯಲ್ಲಿನ ಕೊಠಡಿಗಳ ನಿರ್ಮಾಣವೇ ಆಗಿಲ್ಲ. ಇನ್ನೂ ಮೇಲ್ಮಹಡಿಯಲ್ಲಿ ವಿವಿಧ ಕೊಠಡಿಗಳ ನಿರ್ಮಾಣವಾಗಲು ಎಷ್ಟು ವರ್ಷಗಳು ಬೇಕಾಗಬಹುದು ಎಂದು ವಿದ್ಯಾರ್ಥಿಗಳು ಬೇಸರ ವ್ಯಕ್ತಪಡಿಸಿದ್ದಾರೆ. ಹಾವೇರಿ ಸಮೀಪದ ನೆಲೋಗಲ್ ಗುಡ್ಡದ ಮೇಲೆ ಜಿಟಿಟಿಸಿ ಕಾಲೇಜು ಪಕ್ಕದಲ್ಲಿ ಕಾನೂನು ಮಹಾವಿದ್ಯಾಲಯ ಕಟ್ಟಡ ಕಾಮಗಾರಿ ಸಹ ಆರಂಭವಾಗಿತ್ತು.

> **ಕಾಮಗಾರಿ ಆರಂಭವಾಗಿ ಸುಮಾರು ಎರಡು ವರ್ಷಗಳಾಗುತ್ತಾ ಬಂದಿದ್ದರೂ, ಕಟ್ಟಡ ಕಾಮಗಾರಿ ಮಾತ್ರ ಪೂರ್ಣಗೊಳ್ಳುತ್ತಿಲ್ಲ. ಗುತ್ತಿಗೆದಾರರಿಗೆ ಮೂರು ಬಾರಿ ನೋಟಿಸ್ ಸಹ ನೀಡಲಾಗಿದೆ. ಅಲ್ಲದೆ ಕಪ್ಪುಪಟ್ಟಿಗೆ ಸೇರಿಸುವ ಎಚ್ಚರಿಕೆ ಸಹ ನೀಡಲಾಗಿದೆ. ಮೇ 31ಕ್ಕೆ ಕಾಮಗಾರಿ ಪೂರ್ಣಗೊಳಿಸುವ ಭರವಸೆ ನೀಡಿದ್ದ ಗುತ್ತಿಗೆದಾರ ಮೇ 31 ಇರಲಿ ಜೂನ್ ಅಂತ್ಯಕ್ಕೂ ಕಾಮಗಾರಿ ಮುಗಿಸುವ ಲಕ್ಷಣಗಳು ಕಾಣಿಸುತ್ತಿಲ್ಲ ಎಂದು ವಿದ್ಯಾರ್ಥಿಗಳು ಹೇಳಿದ್ದಾರೆ.**

> **ಹಾವೇರಿ ಜಿಲ್ಲಾ ಕೇಂದ್ರಕ್ಕೆ ಸರ್ಕಾರ ಕಾನೂನು ಮಹಾವಿದ್ಯಾಲಯ ಬಿಡುಗಡೆಯಾದ ನಂತರ ಜಿಲ್ಲೆಯಲ್ಲಿ ಖಾಸಗಿಯಾಗಿ ಕೆಲ ಕಾನೂನು ಮಹಾವಿದ್ಯಾಲಯ ಆರಂಭವಾಗಿವೆ. ಜಿಲ್ಲೆಯ ಜನಪ್ರತಿನಿಧಿಗಳು ಇತ್ತ ಗಮನಹರಿಸಿ ಆದಷ್ಟು ಬೇಗ ಕಾನೂನು ಮಹಾವಿದ್ಯಾಲಯದ ಆರಂಭಿಸಬೇಕು ಎಂದು ವಿದ್ಯಾರ್ಥಿಗಳು ಒತ್ತಾಯಿಸಿದ್ದಾರೆ.**

**ಕಾಲೇಜು ಕಟ್ಟಡ ನಿರ್ಮಾಣ ಮತ್ತು ಉದ್ಘಾಟನೆ**

ಈ ಮಧ್ಯ ಕಾಲೇಜು ಕಟ್ಟಡ ನಿರ್ಮಾಣ ಮತ್ತು ಉದ್ಘಾಟನೆ ವಿಳಂಬವಾಗುವುದಾದರೇ ಬಾಡಿಗೆ ಕಟ್ಟಡದಲ್ಲಿ ತರಗತಿ ಆರಂಭಿಸಿ. ಹಾವೇರಿ ನಗರದ ಯಾವುದಾದರೂ ಕಟ್ಟಡದಲ್ಲಿ ತರಗತಿ ಆರಂಭಿಸಿ, ನೆಲೋಗಲ್ ಗುಡ್ಡದಲ್ಲಿರುವ ಕಾನೂನು ಪದವಿ ಮಹಾವಿದ್ಯಾಲಯದ ಕಟ್ಟಡ ಪೂರ್ಣಗೊಂಡ ನಂತರ ಅಲ್ಲಿಗೆ ಬಾಡಿಗೆ ಕಟ್ಟಡದಿಂದ ಮಹಾವಿದ್ಯಾಲಯದ ವರ್ಗಾಯಿಸುವಂತೆ ವಿದ್ಯಾರ್ಥಿಗಳು ಆಗ್ರಹಿಸಿದ್ದಾರೆ.

ಲೋಕೋಪಯೋಗಿ ಇಲಾಖೆಯಿಂದ ಸುಮಾರು 5 ಕೋಟಿ ರೂಪಾಯಿ ವೆಚ್ಚದಲ್ಲಿ ಕಟ್ಟಡ ನಿರ್ಮಾಣವಾಗುತ್ತಿದೆ. ಕಟ್ಟಡ ನಿರ್ಮಾಣದ ಗುತ್ತಿಗೆಯನ್ನು ಮಂಗಳೂರಿನ ಡಿ ಗೋವರ್ಧನ ಎ ಬಾಬು ಮಾಲೀಕತ್ವದ ಮೆ ಗೋರ್ವರ್ಧನ ಆ್ಯಂಡ್ ಕಂಪನಿಗೆ ಗುತ್ತಿಗೆ ನೀಡಲಾಗಿತ್ತು. 2024 ಫೆಬ್ರವರಿ 2 ರಂದು ಗುತ್ತಿಗೆ ನೀಡಿದ್ದ ಸರ್ಕಾರ ಕಾಮಗಾರಿಯನ್ನು 13 ತಿಂಗಳಲ್ಲಿ ಪೂರ್ಣಗೊಳಿಸುವಂತೆ ದಿನ ನಿಗದಿ ಮಾಡಿತ್ತು. ಹಾವೇರಿಯ ಗಾಂಧಿಪುರ ಸರ್ಕಾರಿ ಪದವಿ ಮಹಾವಿದ್ಯಾಲಯದ ಪ್ರಾಚಾರ್ಯ ಪರ್ಜಾನಾ ಪಠಾಣ ಅವರನ್ನು ಸರ್ಕಾರ ಕಾನೂನು ಮಹಾವಿದ್ಯಾಲಯದ ನೋಡಲ್ ಅಧಿಕಾರಿಯಾಗಿ ಸರ್ಕಾರ ನೇಮಿಸಿದೆ. ಅವರು ಸಹ ಕಟ್ಟಡ ಕಾಮಗಾರಿ ಮೇಲೆ ಕಣ್ಣಿಟ್ಟಿದ್ದಾರೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 09:00 ರಿಂದ 10:30 |
| ಗುಳಿಕ ಕಾಲ | ಬೆಳಿಗ್ಗೆ | 06:00 ರಿಂದ 07:30 |
| ಯಮಗಂಡ ಕಾಲ | ಮಧ್ಯಾಹ್ನ | 01:30 ರಿಂದ 03:00 |

**ಮೇಷ** ಆರೋಗ್ಯವು ಇತರರೊಂದಿಗೆ ಸಂತೋಷವನ್ನು ಹಂಚಿಕೊಳ್ಳುವ ಮೂಲಕ ಅರಳುತ್ತದೆ. ಕೆಲವು ದುಃಖದ ಸಮಯದಲ್ಲಿ ನೀವು ಸಂಗ್ರಹಿಸುವ ಹಣ ಮಾತ್ರ ನಿಮ್ಮ ಕೆಲಸಕ್ಕೆ ಬರುತ್ತದೆ ಎಂಬುದನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಿ . ಆದ್ದರಿಂದ ಇಂದು ಹಣವನ್ನು ಸಂಗ್ರಹಿಸುವ ಬಗ್ಗೆ ಆಲೋಚಿಸಿ.

**ವೃಷಭ** ಮನರಂಜನೆ ಮತ್ತು ಮೋಜಿನ ಒಂದು ದಿನ. ಇಂದು, ನೀವು ಸಾಕಷ್ಟು ಸಕಾರಾತ್ಮಕತೆಯೊಂದಿಗೆ ಮನೆಯಿಂದ ಹೊರಬರುತ್ತೀರಿ, ಆದರೆ ಕೆಲವು ಅಮೂಲ್ಯ ವಸ್ತುವಿನ ಕಳ್ಳತನದಿಂದಾಗಿ, ನಿಮ್ಮ ಮನಸ್ಥಿತಿಗೆ ತೊಂದರೆಯಾಗಬಹುದು. ನಿಮ್ಮ ಸಂಗಾತಿ ಬೆಂಬಲ ನೀಡುತ್ತಾರೆ

**ಮಿಥುನ** ನಿಮ್ಮ ಕೆಟ್ಟ ಚಟಗಳು ನಿಮ್ಮನ್ನು ನಾಶಗೊಳಿಸುತ್ತವೆ. ಇಲ್ಲಿಯವರೆಗೆ ಅನಗತ್ಯವಾಗಿ ಹಣವನ್ನು ಖರ್ಚು ಮಾಡುತ್ತಿದ್ದವರು ಜೀವನದಲ್ಲಿ ಹಣದ ಪ್ರಾಮುಖ್ಯತೆ ಏನು ಎಂಬುದನ್ನು ಅರ್ಥಮಾಡಿಕೊಳ್ಳಬಹುದು ಏಕೆಂದರೆ ಇಂದು ಇದ್ದಕ್ಕಿದ್ದಂತೆ ನಿಮಗೆ ಹಣದ ಅಗತ್ಯವಿರುತ್ತದೆ

**ಕರ್ಕಾಟಕ** ನಿಮ್ಮ ಸ್ನಾಯುಗಳಿಗೆ ವಿಶ್ರಾಂತಿ ನೀಡಲು ತೈಲದಿಂದ ನಿಮ್ಮ ದೇಹಕ್ಕೆ ಮಸಾಜ್ ಮಾಡಿ. ವಿಳಂಬಿತ ಪಾವತಿಗಳನ್ನು ಮಾಡುತ್ತಿದ್ದ ಹಾಗೆ ಹಣದ ಪರಿಸ್ಥಿತಿ ಸುಧಾರಿಸುತ್ತದೆ. ನೀವು ಪ್ರೀತಿಸುವವರಿಂದ ಉಡುಗೊರೆಗಳನ್ನು ಪಡೆಯಲು ಹಾಗೂ ನೀಡಲು ಪವಿತ್ರವಾದ ದಿನ. ನೀವು ವಿಶ್ರಾಂತಿ ಪಡೆಯಲು ಸಾಧ್ಯವಾಗುವ ಒಂದು ದಿನ.

**ಸಿಂಹ** ದ್ವೇಷದ ಭಾವನೆ ದುಬಾರಿಯೆನಿಸಬಹುದು. ಇದು ನಿಮ್ಮ ಸಹನೆಯನ್ನು ಕುಂಠಿತಗೊಳಿಸುವುದಷ್ಟೇ ಅಲ್ಲದೇ ನಿಮ್ಮ ವಿವೇಚನಾಶಕ್ತಿಯನ್ನೂ ಕುಂಠಿತಗೊಳಿಸುತ್ತದೆ ಮತ್ತು ಸಂಬಂಧದಲ್ಲಿ ಶಾಶ್ವತ ಬಿರುಕನ್ನು ಸೃಷ್ಟಿಸುತ್ತದೆ. ಇಂದು ನಿಮಗೆ ಹಣದ ಲಾಭವಾಗುವ ಪೂರ್ತಿ ಸಾಧ್ಯತೆ ಇದೆ.

**ಕನ್ಯಾ** ಧ್ಯಾನ ಮತ್ತು ಆತ್ಮ ಸಾಕ್ಷಾತ್ಕಾರ ಪ್ರಯೋಜನಕಾರಿಯಾಗಬಹುದು. ಮನೆಯ ಯಾವುದೇ ಎಲೆಕ್ಟ್ರಾನಿಕ್ ಸರಕುಗಳ ಕೆಟ್ಟು ಹೋಗುವ ಕಾರಣದಿಂದಾಗಿ ನಿಮ್ಮ ಹಣ ಖರ್ಚಾಗಬಹುದು. ಇಂದು ನೀವು ಮನೆಯಲ್ಲಿ ಸೂಕ್ಷ್ಮ ಸಮಸ್ಯೆಯನ್ನು ಬಗೆಹರಿಸಲು ನಿಮ್ಮ ಬುದ್ಧಿವಂತಿಕೆ ಮತ್ತು ಪ್ರಭಾವವನ್ನು ಬಳಸಬೇಕಾಗುತ್ತದೆ.

**ತುಲಾ** ಇತ್ತೀಚೆಗೆ ನಿಮಗೆ ಹತಾಶೆಯೆನಿಸುತ್ತಿದ್ದಲ್ಲಿ ಇಂದು ಸರಿಯಾದ ಆಲೋಚನೆಗಳು ಕಾರ್ಯಗಳು ನಿಮಗೆ ಅಗತ್ಯವಿರುವ ಸಮಾಧಾನವನ್ನು ತರುತ್ತವೆ ಎಂದು ನೀವು ನೆನಪಿಡಬೇಕು. ನಿಮಗಾಗಿ ಹಣವನ್ನು ಉಳಿಸುವ ನಿಮ್ಮ ಬಯಕೆ ಇಂದು ಪೂರ್ಣಗೊಳ್ಳಬಹುದು. ನೀವು ಸೂಕ್ತವಾಗಿ ಉಳಿಸಲು ಸಾಧ್ಯವಾಗುತ್ತದೆ.

**ವೃಶ್ಚಿಕ** ದೇಹದ ನೋವಿನಿಂದ ಬಳಲುವ ಸಾಧ್ಯತೆ ಹೆಚ್ಚಿದೆ. ನಿಮ್ಮ ದೇಹದ ಮೇಲೆ ಹೆಚ್ಚು ಒತ್ತಡ ಹಾಕುವ ಯಾವುದೇ ದೈಹಿಕ ಪರಿಶ್ರಮವನ್ನು ತಪ್ಪಿಸಲು ಪ್ರಯತ್ನಿಸಿ. ಸಾಕಷ್ಟು ವಿಶ್ರಾಂತಿ ತೆಗೆದುಕೊಳ್ಳಿ. ನಿಮ್ಮ ತಂದೆಯ ಯಾವುದೇ ಸಲಹೆ ಇಂದು ಕೆಲಸದ ಸ್ಥಳದಲ್ಲಿ ಇಂದು ನಿಮಗೆ ಹಣದ ಪ್ರಯೋಜನವನ್ನು ನೀಡುತ್ತದೆ.

**ಧನಸ್ಸು** ನಿಮ್ಮ ಕಚೇರಿಯನ್ನು ಬೇಗನೆ ಬಿಡಲು ಮತ್ತು ನೀವು ನಿಜವಾಗಿಯೂ ಆನಂದಿಸುವದನ್ನು ಮಾಡಲು ಪ್ರಯತ್ನಿಸಿ. ನೀವು ಇತರರ ಮೇಲೆ ಹೆಚ್ಚು ಖರ್ಚು ಮಾಡಬಯಸುತ್ತೀರಿ. ಮೊಮ್ಮಕ್ಕಳು ಅಪಾರ ಸಂತೋಷದ ಮೂಲವಾಗುತ್ತಾರೆ. ಪ್ರೇಮನಿವೇದನೆ ನಿಮ್ಮ ಹೊರೆಯನ್ನು ಇಳಿಸುವುದರಿಂದ ನಿಮಗೆ ಆನಂದವಾಗಬಹುದು.

**ಮಕರ** ಆರ್ಥಿಕವಾಗಿ ಇಂದು ನೀವು ಸಾಕಷ್ಟು ಬಲವಾಗಿ ಕಾಣುವಿರಿ, ಗ್ರಹ ಮತ್ತು ನಕ್ಷತ್ರಗಳ ಚಲನೆಯಿಂದ ಇಂದು ನಿಮಗಾಗಿ ಹಣವನ್ನು ಸಂಪಾದಿಸುವ ಅನೇಕ ಅವಕಾಶಗಳು ಉಂಟಾಗುತ್ತವೆ. ನಿಮ್ಮ ಪ್ರೀತಿಪಾತ್ರರ ಜೊತೆ ವಾದಗಳಿಗೆ ಕಾರಣವಾಗಬಹುದಾದ ಸಮಸ್ಯೆಗಳನ್ನು ತಪ್ಪಿಸುವುದು ಒಳ್ಳೆಯದು.

**ಕುಂಭ** ನಿಮ್ಮ ವ್ಯಕ್ತಿತ್ವ ಒಂದು ಸುಗಂಧದಂತೆ ಕೆಲಸ ಮಾಡುತ್ತದೆ. ನೀವು ಅನಗತ್ಯವಾಗಿ ಹಣವನ್ನು ಖರ್ಚು ಮಾಡುವುದನ್ನು ನಿಲ್ಲಿಸಬೇಕು, ಇಲ್ಲದಿದ್ದರೆ ಅಗತ್ಯವಾದ ಸಮಯದಲ್ಲಿ ನಿಮ್ಮ ಹತ್ತಿರ ಹಣದ ಕೊರತೆ ಇರಬಹುದು. ನಿಮ್ಮ ಸ್ನೇಹಿತರು ನಿಮಗೆ ಅವರ ಅವಶ್ಯಕತೆ ಅತ್ಯಂತ ಹೆಚ್ಚಿದ್ದಾಗ ನಿಮ್ಮನ್ನು ನಿರಾಸೆಗೊಳಿಸಬಹುದು.

**ಮೀನ** ನಿಮ್ಮಲ್ಲಿ ಶಕ್ತಿಯ ಕೊರತೆಯಿರದೇ ಆತ್ಮವಿಶ್ವಾಸದ ಕೊರತೆಯಿರುವುದರಿಂದ ನಿಜವಾದ ಸಾಮರ್ಥ್ಯವನ್ನು ಅರಿತುಕೊಳ್ಳಿ. ತ್ವರಿತ ಹಣ ಪಡೆಯುವ ಬಯಕೆ ಹೊಂದಿರುತ್ತೀರಿ. ಈ ಅವಧಿ ನಿಮ್ಮ ಹೊಸ ಯೋಜನೆಗಳು ಹಾಗೂ ಆಲೋಚನೆಗಳ ಬಗ್ಗೆ ನಿಮ್ಮ ಪೋಷಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಒಳ್ಳೆಯದಾಗಿದೆ.

## ಇಂಡಿಯಾ ಬುಕ್ ಆಫ್ ರೆಕಾರ್ಡ್‌ನಲ್ಲಿ ರವೀಂದ್ರ ಹೆಸರು

• **ಉದಯವಾಹಿನಿ, ಮಹಾಲಿಂಗಪುರ:**

ಪಟ್ಟಣದ 2 ವರ್ಷ 6 ತಿಂಗಳ ಪ್ರಾಯದ ರವೀಂದ್ರ, ಢವಳಾಪುರ ತನ್ನ ಅಸಾಧಾರಣ ನೆನಪಿನ ಶಕ್ತಿಯ ಮೂಲಕ ರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದಿದ್ದಾನೆ. ಈ ಪುಟ್ಟ ಬಾಲಕನ ಜ್ಞಾಪಕ ಶಕ್ತಿಯನ್ನು ಗುರುತಿಸಿದ ಪ್ರತಿಷ್ಠಿತ 'ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ಸಂಸ್ಥೆಯು ಆತನಿಗೆ 'ಐಬಿಆರ್ ಅಚೀವರ್' ಎಂಬ ಬಿರುದನ್ನು ನೀಡಿ ಗೌರವಿಸಿದೆ.ಬಾಲಕ ರವೀಂದ್ರ, ತನಗೆ ನೀಡಲಾದ ಚಿತ್ರಗಳು ಮತ್ತು ವಿಷಯಗಳನ್ನು ಅತ್ಯಂತ ವೇಗವಾಗಿ ಹಾಗೂ ನಿಖರವಾಗಿ ಗುರುತಿಸಿ ಹೆಸರಿಸುವ ಮೂಲಕ ಈ ಸಾಧನೆ ಮಾಡಿದ್ದಾನೆ.

ಅದ್ಭುತ ಪ್ರತಿಭೆಯನ್ನು ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ಸಂಸ್ಥೆಯು 2026ರ ಜ.28 ರಂದು ಅಧಿಕೃತವಾಗಿ ದೃಢೀಕರಿಸಿದ್ದು, ಇತ್ತೀಚೆಗೆ ಜೂ.6 ರಂದು ಅಧಿಕೃತ ದಾಖಲೆಯ ಪ್ರಮಾಣಪತ್ರ, ಹಾಗೂ ಪದಕ ವಿತರಿಸಿದೆ.


## ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಜಾರಿಗೊಳಿಸಲು ಆಗ್ರಹ

• **ಉದಯವಾಹಿನಿ, ನರೇಗಲ್:**

'ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರು ಪಂಚಮಸಾಲಿ ಸಮಾಜದ ಮಕ್ಕಳ ಶೈಕ್ಷಣಿಕ ಹಾಗೂ ಸಾಮಾಜಿಕ ಭವಿಷ್ಯದ ಹಿತದೃಷ್ಟಿಯಿಂದ 2ಎ ಮೀಸಲಾತಿ ಜಾರಿಗೊಳಿಸಬೇಕು' ಎಂದು ಪಂಚಮಸಾಲಿ ಸಮಾಜದ ಮುಖಂಡ ರುದ್ರೇಶ್ ಕೊಟಗಿ ಆಗ್ರಹಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿರುವ ಅವರು, 'ಉತ್ತರ ಕರ್ನಾಟಕ ಭಾಗದಲ್ಲಿ ಪಂಚಮಸಾಲಿ ಸಮಾಜವು ಬಹುಸಂಖ್ಯಾತ ಸಮುದಾಯವಾಗಿದ್ದು, ಸಮಾಜದ ಪರವಾಗಿ ಹಲವು ಜನಪ್ರತಿನಿಧಿಗಳು ಆಯ್ಕೆಯಾಗಿದ್ದಾರೆ. ಆದಾಗ್ಯೂ, ಸಮಾಜದ ಪ್ರಮುಖ ಬೇಡಿಕೆಗಳಿಗೆ ಸಮರ್ಪಕ ಸ್ಪಂದನೆ ದೊರೆಯದಿರುವುದು ಬೇಸರದ ಸಂಗತಿಯಾಗಿದೆ' ಎಂದು ಹೇಳಿದರು. ಸರ್ಕಾರವು ಸಮಾಜದ ನ್ಯಾಯಯುತ ಬೇಡಿಕೆಯನ್ನು ನಿರ್ಲಕ್ಷಿಸಿದರೆ, ಮುಂಬರುವ ಚುನಾವಣೆಯಲ್ಲಿ ಪಂಚಮಸಾಲಿ ಸಮಾಜ ತನ್ನ ಅಸಮಾಧಾನವನ್ನು ವ್ಯಕ್ತಪಡಿಸಲಿದೆ ಎಂದು ಅವರು ಎಚ್ಚರಿಕೆ ನೀಡಿದರು.

## ಉದ್ಯಾನ ಆವರಿಸಿದ ಕೊಳಚೆ ನೀರು

• **ಉದಯವಾಹಿನಿ, ನರಗುಂದ:**


ಉದಯವಾಹಿನಿ ಚಿತ್ರ

ಪಟ್ಟಣ ದಿನೇ ದಿನೆ ಬೆಳೆಯುತ್ತಿದ್ದು, ಹೊಸ ಬಡಾವಣೆಗಳು ತಲೆ ಎತ್ತುತ್ತಿವೆ. ಆದರೂ ಮೂಲಸೌಕರ್ಯ ಇಲ್ಲದೆ ನಿವಾಸಿಗಳು ಪರದಾಡುವಂತಾಗಿದೆ.

ದಶಕದ ಹಿಂದೆ ನಿರ್ಮಾಣಗೊಂಡ ಪಟ್ಟಣದ ಕುರ್ಲಗೇರಿ ರಸ್ತೆಗೆ ಹೊಂದಿಕೊಂಡಿರುವ ರಾಣಿ ಚನ್ನಮ್ಮ ನಗರ ಇದಕ್ಕೆ ಸಾಕ್ಷಿಯಾಗಿದೆ.


ಇಲ್ಲಿ ಚರಂಡಿಗಳು ಸರಿಯಾದ ರೀತಿಯಲ್ಲಿ ನಿರ್ಮಾಣಗೊಂಡಿಲ್ಲ. ಒಳಚರಂಡಿಗಳಂತೂ ಇಲ್ಲ. ಚರಂಡಿ ವ್ಯವಸ್ಥೆ ಸರಿ ಇಲ್ಲದ ಕಾರಣ ಮಳೆ ನೀರು ಸರಾಗವಾಗಿ ಹರಿದುಹೋಗುತ್ತಿಲ್ಲ. ಇದರಿಂದಾಗಿ ಬಡಾವಣೆಯಲ್ಲಿರುವ ಉದ್ಯಾನದ ತುಂಬಾ ಕೆಸರು ಆವರಿಸಿದೆ. ಸ್ವಚ್ಛತೆ, ಸ್ವಾಸ್ಥ್ಯಕ್ಕೆ ಮಾದರಿಯಾಗಬೇಕಾದ ಉದ್ಯಾನವು ಕೆಸರಿನ ಹೊಂಡವಾಗಿದೆ. ಇದರಿಂದ ಸ್ಥಳೀಯ ನಿವಾಸಿಗಳು ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ಮಳೆ ನೀರು ಸಂಗ್ರಹವಾಗುವುದರಿಂದ ಸೊಳ್ಳೆ ಮತ್ತು ವಿಷಜಂತುಗಳ ಹಾವಳಿ ಹೆಚ್ಚಿದೆ. ಅನಾರೋಗ್ಯಕರ ವಾತಾವರಣದಿಂದ ಹಲವು ನಿವಾಸಿಗಳು ರೋಗಪೀಡಿತರಾಗಿದ್ದಾರೆ.

ಚನ್ನಮ್ಮ ನಗರದಲ್ಲಿ ದಶಕದ ಹಿಂದೆ ಲಕ್ಷಾಂತರ ರೂಪಾಯಿ ನೀಡಿ, ನಿವೇಶನ ಖರೀದಿಸಿ ಮನೆ ನಿರ್ಮಿಸಿಕೊಂಡಿದ್ದೇವೆ. ಪುರಸಭೆಯವರು ಮೂಲಸೌಕರ್ಯ ಕಲ್ಪಿಸದ ಪರಿಣಾಮ ನೆಮ್ಮದಿಯಿಂದ ಜೀವನ ನಡೆಸಲಾಗುತ್ತಿಲ್ಲ. ಚರಂಡಿ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಪುರಸಭೆ ಅಧಿಕಾರಿಗಳು ಒಂದು ವಾರದಲ್ಲಿ ಒಳಚರಂಡಿ ಮತ್ತು ರಸ್ತೆ ದುರಸ್ತಿ ಮಾಡದಿದ್ದರೆ ಪುರಸಭೆ ಕಚೇರಿ ಮುಂದೆ ಧರಣಿ ಮಾಡುತ್ತೇವೆ' ಎಂದು ಸ್ಥಳೀಯ ನಿವಾಸಿ ನಂದೀಶ ಮಠದ ಎಚ್ಚರಿಸಿದರು.

## ಹಕ್ಕು ಪತ್ರಗಳಿಗಾಗಿ ಒತ್ತಾಯಿಸಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಕಚೇರಿ ಎದುರು ಸ್ಲಂ ನಿವಾಸಿಗಳ ಧರಣಿ

• **ಉದಯವಾಹಿನಿ, ವಿಜಯಪುರ,:**

ಹಕ್ಕು ಪತ್ರಕ್ಕಾಗಿ ಒತ್ತಾಯಿಸಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ 3 ನೇಯ ಉಪವಿಭಾಗ ಎದುರು ಸ್ಲಂ ನಿವಾಸಿಗಳು ಧರಣಿ ನಡೆಸಿ ಪ್ರತಿಭಟನೆ ನಡೆಸಿದರು. ಸುಮಾರು 50 ಜನ ಸ್ಲಂ ನಿವಾಸಿಗಳು ಧರಣಿಯಲ್ಲಿ ಭಾಗವಯಿಸಿ ಬೇಕೆ ಬೇಕು ಹಕ್ಕು ಪತ್ರ ಬೇಕು ಎಂಬ ಘೋಷಣೆಗಳು ಕೂಗುತ್ತಾ ಕಚೇರಿ ಎದುರು ಕೆಲ ಹೊತ್ತು ಧರಣಿ ನಡೆಸಿದರು. ಧರಣಿನಿರತ ಸ್ಲಂ ನಿವಾಸಿಗಳನ್ನು ಉದ್ದೇಶಿಸಿ ಬಿಜಾಪುರ ನಗರ ಸ್ಲಂ ಅಭಿವೃದ್ಧಿ ಸಮಿತಿ ಅಧ್ಯಕ್ಷ ಮುತ್ತು ಭೋವಿ ಮಾತನಾಡಿ, ಶಿಖಾರಖಾನೆ ಭಾಗ -3 ಸ್ಲಂನಲ್ಲಿ 150 ಕಿಂತ ಹೆಚ್ಚು ಕುಟುಂಬಗಳು ವಾಸವಾಗಿದ್ದಾರೆ. ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಕಾಯಿದೆ ಅಡಿ ಘೋಷಣೆವೂ ಸಹ ಆಗಿದೆ ಹಾಗೂ ಹಕ್ಕು ಪತ್ರಗಳಿಗಾಗಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆಯವರು ಇಲಾಖೆಯಿಂದ ಸರ್ವೆ ಮಾಡಿದ್ದಾರೆ.


ಉದಯವಾಹಿನಿ ಚಿತ್ರ

ಕೆಲ ನಿವಾಸಿಗಳು ಹಕ್ಕು ಪತ್ರಕ್ಕಾಗಿ ಮಂಡಳಿಗೆ ಹಣವು ಸಹ ತುಂಬಿದ್ದಾರೆ. ಆದಾಗ್ಯೂ ಒಂದು ವರ್ಷದಿಂದ ಹಕ್ಕು ಪತ್ರ ನೀಡಿಲ್ಲ. ಸುಳ್ಳು ಆಶ್ವಾಸನೆಗಳನ್ನು ನೀಡುವುದು, ಸರ್ವೆ ಮಾಡುವುದು, ಸ್ಲಂ ನಿವಾಸಿಗಳಿಂದ ಪದೇ ಪದೇ ದಾಖಲಾತಿ ಪಡೆಯುವುದು ನಡೆದಿದೆ. ಆದರೆ ಹಕ್ಕುಪತ್ರ ಮಾತ್ರ ನೀಡದೆ ಸತಾಯಿಸಲಾಗುತ್ತಿದೆ. ಇನ್ನಾದರೂ ಹಕ್ಕುಪತ್ರ ಶೀಘ್ರ ನೀಡಬೇಕು ಎಂದು ಹೇಳಿದರು.

ಕರ್ನಾಟಕ ಕೊಳಗೇರಿ ಅಭೀವೃದ್ಧಿ ಮಂಡಳಿಯ ಅಧಿಕಾರಿಗಳಾದ ಮಿನಾಕ್ಷಿ ಚೋರಿ ಹಗೂ ಪಗಲ್ಲಾದ ಅವರು ಧರಣಿ ನಿರತರ ಬಳಿ ಆಗಮಿಸಿ, ಇವತ್ತು ಅಧಿಕಾರಿಗಳು ರಜೆಯಲ್ಲಿ ಇದ್ದಾರೆ.

**ಈಗಾಗಲೇ ಶಿಖಾರಖಾನೆ ಭಾಗ-3 ಸರ್ವೆ ಆಗಿದೆ. ಸ್ಲಂನ ಸರಹದ್ದು ನಿಗದಿ ಪಡಿಸಬೇಕಿದೆ. 15 ದಿನಗಳಲ್ಲಿ ಹಕ್ಕುಪತ್ರ ನೀಡಲಾಗುವುದು ಎಂದು ಆಶ್ವಾಸನೆ ನೀಡಿದರು. ಆಗ ಧರಣಿನಿರತ ಸ್ಲಂ ನಿವಾಸಿಗಳು ಪ್ರತಿಭಟನೆ ಹಿಂಪಡೆದರು.**

## ಜಿಲ್ಲಾ ಕೋರ್ಟ್‌ಗೆ ಬಾಂಬ್ ಬೆದರಿಕೆ




• **ಉದಯವಾಹಿನಿ, ಧಾರವಾಡ:**

ಜಿಲ್ಲಾ ಕೋರ್ಟ್‌ಗೆ ಬಾಂಬ್ ಬೆದರಿಕೆ ಇಮೇಲ್ ಬಂದಿದ್ದು, ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು.ಕೋರ್ಟ್‌ನ ಆಡಳಿತ ಕಚೇರಿಗೆ ಮೇಲ್‌ನಿಂದ ಬೆದರಿಕೆ ಬಂದಿದೆ. ಮುನ್ನೆಚ್ಚರಿಕಾ ಕ್ರಮವಾಗಿ ವಕೀಲರು, ಕಕ್ಷಿಗಾರರನ್ನು ನ್ಯಾಯಾಲಯದಿಂದ ಹೊರಗೆ ಕಳುಹಿಸಲಾಗಿತ್ತು. ಆಡಳಿತ ಕಚೇರಿಗೆ ಮೇಲ್‌ನಿಂದ ಬೆದರಿಕೆ 'ನಿನ್ನೆ ಮಧ್ಯಾಹ್ನ 2 ಗಂಟೆಗೆ ನಿಮ್ಮ ನ್ಯಾಯಾಲಯದಲ್ಲಿ 23 ಸೈನೈಡ್ ವಾಯು ಗುಂಡುಗಳು ಸ್ಫೋಟಗೊಂಡಿವೆ. ನಿನ್ನೆ ನಡೆದಿದ್ದು ಒಂದು ಪರೀಕ್ಷೆಯ ಪ್ರಯತ್ನ. ಇಂದು ನಡೆಯುವುದು ನಿಜ' ಎಂದು ಇಮೇಲ್‌ನಲ್ಲಿ ಬೆದರಿಕೆ ಹಾಕಲಾಗಿದೆ.

ಇದರಿಂದಾಗಿ ಕೋರ್ಟ್ ಸುತ್ತಮುತ್ತ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಸ್ಥಳಕ್ಕೆ ಬಾಂಬ್ ನಿಷ್ಕ್ರಿಯ ದಳ ಆಗಮಿಸಿ ಪರಿಶೀಲನೆ ನಡೆಸಿತು.ಇದಕ್ಕೂ ಹಿಂದೆ ಕಳೆದ ಫೆಬ್ರವರಿಯಲ್ಲೂ ಧಾರವಾಡ ಹೈಕೋರ್ಟ್ ಪೀಠ ಸೇರಿದಂತೆ ಹಲವು ನ್ಯಾಯಾಲಯಗಳಿಗೆ ಹುಸಿ ಬಾಂಬ್ ಬೆದರಿಕೆ ಬಂದಿತ್ತು. ಧಾರವಾಡ ಹೈಕೋರ್ಟ್ ಪೀಠ, ಮಂಗಳೂರು, ದಾವಣಗೆರೆ, ಹಾವೇರಿ, ಕೊಡಗು, ಮಂಡ್ಯ ಮತ್ತು ಉತ್ತರ ಕನ್ನಡ ಜಿಲ್ಲಾ ನ್ಯಾಯಾಲಯಗಳಿಗೆ ಇಮೇಲ್ ಬಾಂಬ್ ಬೆದರಿಕೆ ಬಂದಿತ್ತು. ಪೊಲೀಸರು ತಕ್ಷಣವೇ ಪರಿಶೀಲನೆ ನಡೆಸಿದಾಗ ಇದೊಂದು ಹುಸಿ ಬಾಂಬ್ ಕರೆ ಎನ್ನುವುದು ಗೊತ್ತಾಗಿತ್ತು.

**ದಾವಣಗೆರೆ ಜಿಲ್ಲಾಧಿಕಾರಿ ಮನೆಗೂ ಬಂದಿತ್ತು ಹುಸಿ ಬಾಂಬ್ ಬೆದರಿಕೆ:** ಕಳೆದ ಮಾರ್ಚ್ ತಿಂಗಳಿನಲ್ಲಿ ದಾವಣಗೆರೆ ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಮನೆಗೆ ಹುಸಿ ಬಾಂಬ್‌ಬೆದರಿಕೆ ಬಂದಿತ್ತು. ಪೊಲೀಸ್ ಸಹಾಯವಾಣಿ 112ಗೆ ಕರೆ ಮಾಡಿದ್ದ ಆರೋಪಿಗಳು ಜಿಲ್ಲಾಧಿಕಾರಿ ಮನೆ ಸ್ಫೋಟ ಮಾಡುವುದಾಗಿ ಬಾಂಬ್ ಬೆದರಿಕೆ ಹಾಕಿದ್ದರು. ತಕ್ಷಣ ಪೊಲೀಸರು ದಾವಣಗೆರೆ ನಗರದ ರಿಂಗ್ ರೋಡ್‌ನ ನಿಜಲಿಂಗಪ್ಪ ಬಡಾವಣೆಯಲ್ಲಿ ಇರುವ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಸರ್ಕಾರಿ ನಿವಾಸದ ಬಳಿ ಶ್ವಾನ ದಳ, ಬಾಂಬ್ ನಿಷ್ಕ್ರಿಯ ದಳದಿಂದ ಪರಿಶೀಲನೆ ನಡೆಸಿದ್ದು, ತನಿಖೆಯಲ್ಲಿ ಅದೊಂದು ಹುಸಿ ಎಂದು ಸಾಬೀತಾಗಿತ್ತು.

## ಅಡ್ಡಮತದಾನ ಮಾಡಿದ ಶಾಸಕರು ಬಿಜೆಪಿ ಬಿಟ್ಟು ಹೋಗಿ

**ನೀವು ಕಾರ್ಯಕರ್ತರಿಗೆ ಮೋಸ ಮಾಡಬೇಡಿ. ಶಾಸಕರು ಬಿಜೆಪಿಯ ಚಿಹ್ನೆಯಡಿ ಆಯ್ಕೆಯಾದವರು ಇದನ್ನು ಮರೆಯಬಾರದು.**

• **ಉದಯವಾಹಿನಿ, ಶಿವಮೊಗ್ಗ:**

ವಿಧಾನಪರಿಷತ್ ಚುನಾವಣೆಯಲ್ಲಿ ಅಡ್ಡಮತದಾನ ಮಾಡಿದ ಬಿಜೆಪಿ ಶಾಸಕರುಗಳಿಗೆ ಪಕ್ಷ ಇಷ್ಟವಿಲ್ಲದೆ ಹೋದರೆ, ಪಕ್ಷ ಬಿಟ್ಟು ಹೋಗಿ ಎಂದು ವಿಧಾನ ಪರಿಷತ್ ಸದಸ್ಯ ಡಿ.ಎಸ್.ಅರುಣ್ ಹೇಳಿದ್ದಾರೆ. ಶಿವಮೊಗ್ಗದ ಬಿಜೆಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಧಾನಪರಿಷತ್ ಚುನಾವಣೆಯಲ್ಲಿ ನಡೆದ ಅಡ್ಡಮತದಾನವನ್ನು ನಾನು ವಿರೋಧಿಸುತ್ತೇನೆ. ಅಡ್ಡಮತದಾನ ಮಾಡಿದ ಶಾಸಕರು ಮೊದಲು ತಾವು ಯಾವ ಪಕ್ಷದಿಂದ ಆಯ್ಕೆ ಆಗಿ ಬಂದಿದ್ದೀರಿ ಎಂದು ತಿಳಿದುಕೊಳ್ಳಿ.

ಪಕ್ಷ ನಿಂತ ನೀರಲ್ಲ. ದೇಶದ 21 ರಾಜ್ಯಗಳಲ್ಲಿ ಅಧಿಕಾರ ಚಲಾವಣೆ ಮಾಡುತ್ತಿದ್ದೇವೆ. ಮುಂಬರುವ ಚುನಾವಣೆಯಲ್ಲಿ ಕರ್ನಾಟಕದಲ್ಲೂ ಬಿಜೆಪಿ ಅಧಿಕಾರ ನಡೆಸಲಿದೆ.

ಶಾಸಕರುಗಳೇ ಈಗಲೇ ಯೋಜನೆ ಮಾಡಿ, ನೀವು ನಿಮ್ಮ ತಾಯಿಗೆ ದ್ರೋಹ ಮಾಡಿದಂತಾಗಿದೆ. ರಾಜ್ಯದ ನಾಯಕರನ್ನು ನೀವು ಒಪ್ಪಲ್ಲ ಅಂದ್ರೆ ಮೊದಲೇ ಹೇಳಿ ಪಕ್ಷದಿಂದ ಹೊರಗೆ ಹೋಗಿ.

ಇನ್ನೂ ನಿಮಗೆ ಎರಡು ವರ್ಷ ಇದೆ. ಶಾಸಕರುಗಳೇ ನಿಮಗೆ ಇಷ್ಟವಿಲ್ಲ ಅಂದ್ರೆ ರಾಷ್ಟ್ರೀಯ ನಾಯಕರನ್ನು ಭೇಟಿ ಮಾಡಿ ಮಾತನಾಡಿ, ದಯಮಾಡಿ ನೀವು ಕಾರ್ಯಕರ್ತರಿಗೆ ಮೋಸ ಮಾಡಬೇಡಿ. ಶಾಸಕರು ಬಿಜೆಪಿಯ ಚಿಹ್ನೆಯಡಿ ಆಯ್ಕೆಯಾದವರು ಇದನ್ನು ಮರೆಯಬಾರದು.

ನಮ್ಮ ಪಕ್ಷದಲ್ಲಿ ಈಗ ರಾಜ್ಯಾಧ್ಯಕ್ಷರ ಆಯ್ಕೆಯ ವಿಚಾರದಲ್ಲಿ ಟ್ರಾನ್ಸಿಶನ್ ಪಿರಿಯಡ್‌ನಲ್ಲಿದ್ದೇವೆ. ನೀವು ಅಮಿತ್ ಷಾ, ನಡ್ಡಾ, ನಿತಿನ್ ನಬೀನ್ ಅವರನ್ನು ಆಯ್ಕೆ ಮಾಡಿದ್ದು, ಅವರಿಗೆ ನೀವು ಅಪಮಾನ ಮಾಡುತ್ತಿದ್ದೀರಿ ಎಂದು ಕಿಡಿಕಾರಿದರು.

ಡಿ.ಕೆ.ಶಿವಕುಮಾರ್ ಸಿಎಂ ಆದ ಮೇಲೆ ರಾಜ್ಯದಲ್ಲಿ ಬದಲಾವಣೆ ಕಾಣಬಹುದು ಎಂದು ಕೊಂಡಿದ್ದು, ಆದರೆ ಅದೇ ಭ್ರಷ್ಟಚಾರ, ಮಂತ್ರಿಮಂಡಲ ವಿಸ್ತರಣೆಯಲ್ಲಿಯೇ ಮುಳುಗಿದ್ದಾರೆ. ತಮ್ಮ ಸರ್ಕಾರದ ವಿಸ್ತರಣೆಯಲ್ಲಿ ಮುಳುಗಿದ


ಉದಯವಾಹಿನಿ ಚಿತ್ರ

**ಹೈಕೋರ್ಟ್‌ನಲ್ಲಿ ಪಿಐಎಲ್ ಹಾಕಿದ ಮೇಲೆ ಕೋರ್ಟ್ ಛೀಮಾರಿ ಹಾಕಿದೆ. ಆದರೂ ಸಹ ರಾಜ್ಯದಲ್ಲಿ ಕಾಂಗ್ರೆಸ್ ಭವನ ನಿರ್ಮಾಣಕ್ಕೆ ಮುಂದಾಗಿದೆ. ರಾಹುಲ್ ಗಾಂಧಿ ಬಂದು ಮೊನ್ನೆ ಶಂಕುಸ್ಥಾಪನೆ ಮಾಡಿದ್ದಾರೆ. ಕಾಂಗ್ರೆಸ್ ಇರುವುದು ಬಂಡವಾಳ ಹಾಕಿ ಬಂಡವಾಳ ತೆಗೆಯಲು ಎಂದು ವ್ಯಂಗ್ಯವಾಡಿದರು.**
**-ಎಂಎಲ್ಸಿ ಡಿ.ಎಸ್.ಅರುಣ್**

ಸಿಎಂ ಈಗ ರಾಜ್ಯವನ್ನೇ ಮರೆತಿದ್ದಾರೆ.

ಪ್ರಮುಖ ಮಂತ್ರಿಗಿರಿಯನ್ನು ಹರಾಜು ಮೂಲಕ ನೀಡಿದಂತೆ ಕಾಣುತ್ತಿದೆ. ಜೂನ್‌ನಿಂದ ಶೈಕ್ಷಣಿಕ ವರ್ಷ ಪ್ರಾರಂಭವಾಗಿದೆ. ಆದರೆ ಶಿಕ್ಷಣ ಸಚಿವ ಸ್ಥಾನ ಬೇಕು ಅಂತ ಯಾರು ಕೇಳುತ್ತಿಲ್ಲ. ಇದು ಆಶ್ಚರ್ಯ ತಂದಿದೆ. ಶಿಕ್ಷಣ ಅತಿ ಮುಖ್ಯವಾಗಿದೆ. ಕೆಪಿಎಸ್ ಶಾಲೆಯನ್ನು ಶಿವಮೊಗ್ಗದಲ್ಲಿಯೇ ಪ್ರಾರಂಭೋತ್ಸವ ಮಾಡಬಹುದಾಗಿತ್ತು. ಶಿಕ್ಷಕರ ನೇಮಕಾತಿ ಕುರಿತು ಕೇವಲ ತುಪ್ಪ ಸವರಿದ್ದಾರೆ. ಶಿಕ್ಷಕರ ನೇಮಕಾತಿ ಇಲ್ಲ. ಶಾಲೆಗಳಿಗೆ ಸರಿಯಾದ ಶೆಡ್ಯೂಲ್ ಫಿಕ್ಸ್ ಮಾಡಿಲ್ಲ ಎಂದು ದೂರಿದರು. ರಾಜ್ಯ ಸರ್ಕಾರದ ವಿರುದ್ಧ ಹೋರಾಟ ನಡೆಸುವ ಯೋಜನೆ ಇದೆ. ರಾಜ್ಯದಲ್ಲಿ ಹಗಲು ದರೋಡೆ ನಡೆಯುತ್ತಿದೆ.

### ಎಸ್‌ಆರ್ ದರಕ್ಕೇ ಸೈಟು

**ಸಿಎ ಸೈಟು ನೀಡುವುದು ಸರ್ಕಾರಿ ದರದಂತೆ ನೀಡಲಾಗುತ್ತದೆ. ಎಸ್‌ಆರ್ ದರಕ್ಕೇ ಸೈಟು ನೀಡಬೇಕೆಂದು ಕಾನೂನು ಬದಲಾವಣೆ ಮಾಡಲು ನಿಯಮ ಮಾಡಲಾಗಿದೆ. ಸೂಡದಲ್ಲಿ 288 ಸಿಎ ಸೈಟ್ ಇದೆ. ಇದುವರೆಗೂ ಒಂದೇ ಒಂದು ಅರ್ಜಿ ಹಾಕಿಲ್ಲ. ಸಿಎ ಸೈಟ್‌ಗೆ ಎಸ್‌ಆರ್ ದರ ನೀಡಿದ ಮೇಲೆ ರಿನೀವಲ್ ಮಾಡುವುದು ಸರಿಯಲ್ಲ.**

**ರಾಜ್ಯದಲ್ಲಿ 23 ಕಡೆ ಸಿಎ ಸೈಟು ಬಳಸಿಕೊಳ್ಳಲಾಗಿದೆ. ತುಮಕೂರಿನಲ್ಲಿ 1 ಎಕರೆ ಜಾಗಕ್ಕೆ ಎಸ್‌ಆರ್ ದರ 1.70 ಕೋಟಿ ಇದೆ. ಆದರೆ ಕಾಂಗ್ರೆಸ್‌ನವರು ಎಸ್‌ಆರ್ ದರದ ಶೇ 5 ಅಂದರೆ ಕೇವಲ 8.50 ಲಕ್ಷಕ್ಕೆ ಪಡೆದಿದ್ದಾರೆ. ಇದನ್ನು ಸಚಿವ ಸಂಪುಟದಲ್ಲಿ ಅನುಮೋದನೆ ನೀಡಲಾಗಿದೆ ಎಂದು ಹೇಳಿದರು.**
**-ಎಂಎಲ್ಸಿ ಡಿ.ಎಸ್.ಅರುಣ್**

ಕರ್ನಾಟಕದಲ್ಲಿ ಕಾಂಗ್ರೆಸ್ ಭವನ ನಿರ್ಮಾಣಕ್ಕಾಗಿ 100 ನಿವೇಶನ ತೆಗೆದುಕೊಳ್ಳುತ್ತೇವೆ ಎಂದಾಗ ಯಾವುದೋ ಖಾಸಗಿ ಜಾಗ ಪಡೆಯಬಹುದು ಎಂದುಕೊಂಡೆವು. ಆದರೆ ಕಾಂಗ್ರೆಸ್‌ನವರು ಸಿಎ ಸೈಟ್ ತೆಗೆದುಕೊಳ್ಳುತ್ತಿದ್ದಾರೆ. ಸಿಎ ಸೈಟ್‌ಗಳನ್ನು ಯಾರಿಗೆ ಕೊಡಬೇಕೆಂದು ನಿಯಮವಳಿಗಳಿವೆ. ಇದು ಸಂಘ ಸಂಸ್ಥೆ, ಆಸ್ಪತ್ರೆ ಸೇರಿದಂತೆ ಸಾಂಸ್ಕೃತಿಕ ಕಾರ್ಯ ನಡೆಸುವವರಿಗೆ ನೀಡಬೇಕಿದೆ ಎಂದರು .ಗ್ಯಾರಂಟಿ ಯೋಜನೆ ನೀಡಲು ಆಗದೆ ಈಗ ಪುನಃ ಅರ್ಜಿ ಕರೆದಿದ್ದಾರೆ. ಅನುಷ್ಠಾನ ಸಮಿತಿ ರಚನೆ ಮಾಡಿದ್ರು, ಆದರೆ ಅವರು ಈಗ ಏನು ಮಾಡುತ್ತಿದ್ದಾರೆ ಎಂದು ಪ್ರಶ್ನಿಸಿದರು. ಈ ವೇಳೆ ಬಿಜೆಪಿ ಮುಖಂಡರು ಹಾಜರಿದ್ದರು.

## ಬಿತ್ತನೆ ಬೀಜಕ್ಕೆ ಚಪ್ಪಲಿ ಸರತಿ; ಬಳ್ಳಾರಿಯಲ್ಲಿ ರೈತರ ಪರದಾಟ

• **ಉದಯವಾಹಿನಿ, ಬಳ್ಳಾರಿ :**

ಜಿಲ್ಲೆಯಲ್ಲಿ ಮುಂಗಾರು ಬಿತ್ತನೆ ಚಟುವಟಿಕೆಗಳು ಚುರುಕುಗೊಂಡಿರುವ ಬೆನ್ನಲ್ಲೇ ಬಿತ್ತನೆ ಬೀಜದ ಕೊರತೆ ಎದುರಾಗಿದ್ದು, ರೈತರು ಬೀಜ ಪಡೆಯಲು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ನಗರದ ಬಿತ್ತನೆ ಬೀಜ ಮಾರಾಟ ಕೇಂದ್ರಗಳ ಎದುರು ರೈತರು ತಮ್ಮ ಚಪ್ಪಲಿಗಳನ್ನು ಸರತಿಯಲ್ಲಿ ಇಟ್ಟು ಗಂಟೆಗಟ್ಟಲೆ ಕಾಯುವ ದೃಶ್ಯಗಳು ಕಂಡುಬಂದವು. ಮುಂಜಾನೆಯಿಂದಲೇ ರೈತರು ಅಂಗಡಿಗಳ ಮುಂದೆ ಜಮಾಯಿಸಿದ್ದರು. ಕಚೇರಿ ಬಾಗಿಲು ತೆರೆಯುವ ಮುನ್ನವೇ ಸರತಿಯಲ್ಲಿ ಚಪ್ಪಲಿಗಳನ್ನು ಇಟ್ಟು ತಮ್ಮ ಸ್ಥಾನ ಕಾಯ್ದುಕೊಂಡು ಬೀಜಕ್ಕಾಗಿ ಕಾದರು. ಆದರೆ, ಇಷ್ಟಾದರೂ ಎಲ್ಲಾ ರೈತರಿಗೆ ಅಗತ್ಯ ಪ್ರಮಾಣದಲ್ಲಿ ಬೀಜ ದೊರೆಯುತ್ತಿಲ್ಲ ಎಂಬ ದೂರುಗಳು ಕೇಳಿ ಬಂದಿವೆ.

ರೈತರು ತಮ್ಮ ಚಪ್ಪಲಿಗಳನ್ನು ಸರತಿಯಲ್ಲಿ ಇಟ್ಟು ಬಿತ್ತನೆ ಬೀಜಕ್ಕಾಗಿ ಕಾಯುತ್ತಿರುವುದು ಜಿಲ್ಲೆಯಲ್ಲಿ ಹತ್ತಿ, ಮೆಣಸಿನಕಾಯಿ, ಜೋಳ ಹಾಗೂ ತೊಗರಿ ಬೆಳೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತಿದ್ದು, ಮುಂಗಾರು


ಉದಯವಾಹಿನಿ ಚಿತ್ರ

ಆರಂಭವಾಗುತ್ತಿದ್ದಂತೆ ಬಿತ್ತನೆ ಬೀಜಗಳಿಗೆ ಬೇಡಿಕೆ ಹೆಚ್ಚಾಗಿದೆ. ಬೇಡಿಕೆಗೆ ಅನುಗುಣವಾಗಿ ಪೂರೈಕೆ ಆಗದಿರುವುದರಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಇದರ ನಡುವೆಯೇ ಬಿತ್ತನೆ ಬೀಜಗಳ ಬೆಲೆ ಏರಿಕೆಯೂ ರೈತರ ಆತಂಕವನ್ನು ಮತ್ತಷ್ಟು ಹೆಚ್ಚಿಸಿದೆ. ಈ ಬಾರಿ ತೊಗರಿ ಬಿತ್ತನೆ ಬೀಜದ ಬೆಲೆ ಪ್ರತಿ ಕೆ.ಜಿಗೆ 200ಕ್ಕೆ ತಲುಪಿದ್ದು, ಕಳೆದ ವರ್ಷ ಇದೇ ಅವಧಿಯಲ್ಲಿ 150 ಇತ್ತು ಎಂದು ರೈತರು ತಿಳಿಸಿದ್ದಾರೆ.

ಮುಂಗಾರು ಬಿತ್ತನೆ ಅವಧಿಯಲ್ಲಿ ಬಿತ್ತನೆ ಬೀಜಗಳನ್ನು ಸಮರ್ಪಕವಾಗಿ ಪೂರೈಸಿ, ಕೃತಕ ಅಭಾವ ಮತ್ತು ಬೆಲೆ ಏರಿಕೆಗೆ ಕಡಿವಾಣ ಹಾಕುವಂತೆ ರೈತರು ಕೃಷಿ ಇಲಾಖೆ ಹಾಗೂ ಜಿಲ್ಲಾಡಳಿತವನ್ನು ಒತ್ತಾಯಿಸಿದ್ದಾರೆ.

**ಅಧಿಕಾರಿಗಳು ಹೇಳುವುದೇನು:** ಬಳ್ಳಾರಿ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನ ಬಿತ್ತನೆ ಕಾರ್ಯಕ್ಕೆ ಅಗತ್ಯವಿರುವ ಬಿತ್ತನೆ ಬೀಜ ಹಾಗೂ ರಸಗೊಬ್ಬರದ ದಾಸ್ತಾನು ಸಮರ್ಪಕವಾಗಿದ್ದು, ರೈತರು ಯಾವುದೇ ರೀತಿಯ ಆತಂಕ ಪಡುವ ಅಗತ್ಯವಿಲ್ಲ ಎಂದು ಕೃಷಿ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ. ಜಿಲ್ಲಾದ್ಯಂತ ಮುಂಗಾರು ಮಳೆ ಆರಂಭವಾಗುತ್ತಿದ್ದಂತೆ ರೈತರು ಕೃಷಿ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ.

ರೈತರ ಬೇಡಿಕೆಗೆ ತಕ್ಕಂತೆ ಎಲ್ಲಾ ಕೃಷಿ ಪತ್ತಿನ ಸಹಕಾರ ಸಂಘಗಳು ಹಾಗೂ ಅಧಿಕೃತ ಮಾರಾಟಗಾರರ ಬಳಿ ಅಗತ್ಯ ಪ್ರಮಾಣದ ರಸಗೊಬ್ಬರ ಮತ್ತು ಬಿತ್ತನೆ ಬೀಜಗಳನ್ನು ಸಂಗ್ರಹಿಸಿಡಲಾಗಿದೆ. ರೈತರಿಗೆ ಸಕಾಲದಲ್ಲಿ ಗುಣಮಟ್ಟದ ಕೃಷಿ ಪರಿಕರಗಳನ್ನು ಒದಗಿಸಲು ಇಲಾಖೆ ಸಂಪೂರ್ಣ ಸಿದ್ಧತೆ ಮಾಡಿಕೊಂಡಿದೆ. ಜಿಲ್ಲೆಯ ಕೇಂದ್ರಗಳಲ್ಲಿ ದಾಸ್ತಾನು ಪ್ರಕ್ರಿಯೆ ಪೂರ್ಣಗೊಂಡಿದ್ದು, ಕೊರತೆಯಾಗದಂತೆ ನಿರಂತರ ನಿಗಾ ವಹಿಸಲಾಗಿದೆ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

## ಭರವಸೆ ಮೂಡಿಸಿದ ದಾಳಿಂಬೆ ಬೇಸಾಯ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಕೊಲ್ಹಾರ:**

ವೈಜ್ಞಾನಿಕ ಪದ್ಧತಿಯಲ್ಲಿ ತೋಟಗಾರಿಕೆ ಬೆಳೆ ಬೆಳೆದು, ಲಕ್ಷಾಂತರ ಹಣ ಲಾಭ ಪಡೆದು ಯುವ ರೈತರಿಗೆ ಮಾದರಿ ಆಗಿದ್ದಾರೆ ಪಟ್ಟಣದ ರೈತ ಜಂಪಣ್ಣ ಶೆಂಕ್ರಪ್ಪ ಕಾಖಂಡಕಿ. ಸಾಂಪ್ರದಾಯಿಕ ಬೆಳೆಯಲ್ಲಿ ನಿರೀಕ್ಷಿತ ಲಾಭ ಬಾರದ ಹಿನ್ನೆಲೆ ತೋಟಗಾರಿಕೆ ಕೃಷಿಯಲ್ಲಿ ತೊಡಗಿದ ಇವರನ್ನು ಕೈಹಿಡಿದಿದ್ದು ದಾಳಿಂಬೆ ಬೆಳೆ. ಪಟ್ಟಣದ ಉಪ್ಪಲದಿನ್ನಿ ರಸ್ತೆಯ ಪಕ್ಕದಲ್ಲಿರುವ ತಮ್ಮ ಮೂರು ಎಕರೆ ಜಮೀನಿನಲ್ಲಿ ವೈಜ್ಞಾನಿಕ ಕೃಷಿ ಪದ್ಧತಿಯಲ್ಲಿ ಭಗವಾ ಕೇಸರ್ ದಾಳಿಂಬೆ ಬೆಳೆದು ಉತ್ತಮ ಫಸಲು ಹಾಗೂ ಲಾಭ ಪಡೆಯುತ್ತಿದ್ದಾರೆ. ದಾಳಿಂಬೆ ಬೆಳೆಗೆ ರೋಗದ ಭೀತಿ, ಅಪಾರ ಖರ್ಚು, ಹಣ್ಣುಗಳ ಮಾರಾಟಕ್ಕೆ ಮಾರುಕಟ್ಟೆ ಸಮಸ್ಯೆ ಎಂದು ಬಹುತೇಕ ರೈತರು ಈ ಬೆಳೆ ಬೆಳೆಯಲು ಹಿಂದೇಟು ಹಾಕುತ್ತಾರೆ.

ಆದರೆ, ಉತ್ತಮ ಬೆಳೆ ಬೆಳೆದು ಅಂತಹ ರೈತರಿಗೆ ಜಂಪಣ್ಣ ಮಾದರಿ ಆಗಿದ್ದಾರೆ. 'ಒಂದು ಎಕರೆಗೆ 380ರಂತೆ ಮೂರು ಎಕರೆಯಲ್ಲಿ 1,140 ಸಸಿ ನೆಡಲಾಗಿತ್ತು. ಸಾವಯವ ಗೊಬ್ಬರ ಬಳಸಲಾಗಿತ್ತು. ಹನಿ ನೀರಾವರಿ ಪದ್ಧತಿ ಅಳವಡಿಸಿಕೊಂಡು ಬೆಳೆ ಬೆಳೆಯಲಾಗುತ್ತಿದ್ದು, 18 ತಿಂಗಳ ಮೊದಲೇ ಫಸಲು ಕೈಗೆ ಬಂದಿದೆ. ಸರಾಸರಿ 20 ಟನ್ ಇಳುವರಿ ದೊರೆಯುತ್ತಿದೆ. ಭಗವಾ ಕೇಸರ್ ದಾಳಿಂಬೆಗೆ ಬೆಂಗಳೂರು, ಹೈದರಾಬಾದ್ ಮತ್ತು ಸ್ಥಳೀಯ ಮಾರುಕಟ್ಟೆಯಲ್ಲಿ ಬೇಡಿಕೆ ಇದೆ. ಒಂದು ಕೆ.ಜಿ.ಗೆ 80ರಿಂದ 120 ದರವಿದೆ. 1.5 ಲಕ್ಷ ಖರ್ಚು ತೆಗೆದು 15 ಲಕ್ಷ ಆದಾಯ ದೊರೆತಿದೆ' ಎನ್ನುತ್ತಾರೆ .

'ದಾಳಿಂಬೆ ಹಣ್ಣು ಕಾಳು ಕಟ್ಟುವ ಸಮಯದಲ್ಲಿ ರಾತ್ರಿ ವೇಳೆಯಲ್ಲಿ ಮೋತಿ ಹುಳದ ಕಾಟ ಜಾಸ್ತಿ ಇರುತ್ತದೆ. ರಾತ್ರಿ 12ರವರೆಗೂ ಲೈಟ್ ಲ್ಯಾಂಪ್ ಬ್ಯಾಟರಿ ಬಳಸಿ ಹುಳು ಹಿಡಿದು ರಕ್ಷಣೆ ಮಾಡುವುದು ಬಹಳ ಮುಖ್ಯ' ಎಂದು ಅವರು ಹೇಳುತ್ತಾರೆ. ದಾಳಿಂಬೆ ಕೃಷಿ ಕೇವಲ ಕಲಿತವರ ಬೆಳೆ ಅಲ್ಲ. ಸಾಮಾನ್ಯರೂ ಬೆಳೆಯುವ ಬೆಳೆ. ದಾಳಿಂಬೆ ಬೆಳೆಯುವ ಆಸಕ್ತರಿಗೆ ಮಾರ್ಗದರ್ಶನ, ಸಲಹೆ ನೀಡಲಾಗುವುದು.

## ಬಾಗಲಕೋಟೆ ಲೋಕಾಯುಕ್ತ ಕಚೇರಿಗೆ ಮುತ್ತಿಗೆ ಹಾಕಲು ಯತ್ನ

• **ಉದಯವಾಹಿನಿ, ಬಾಗಲಕೋಟೆ:**

ಇಲ್ಲಿನ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದಲ್ಲಿ (ಬಿಟಿಡಿಎ) ಭ್ರಷ್ಟಾಚಾರ ನಡೆದಿದ್ದು, ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆಯಡಿ ಪ್ರಕರಣ ದಾಖಲಿಸಬೇಕು' ಎಂದು ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಭೀಮವಾದ) ಸದಸ್ಯರು ಲೋಕಾಯುಕ್ತ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು. ಮುತ್ತಿಗೆ ಹಿನ್ನೆಲೆಯಲ್ಲಿ ಲೋಕಾಯುಕ್ತ ಕಚೇರಿ ಸುತ್ತ-ಮುತ್ತಲಿನ ಪ್ರದೇಶದಲ್ಲಿ ಗುರುವಾರ ಬೆಳಿಗ್ಗೆ 6 ರಿಂದ ಶುಕ್ರವಾರ ಬೆಳಿಗ್ಗೆ 6ರವರೆಗೆ ಬಾಗಲಕೋಟೆ ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ ನಿಷೇಧಾಜ್ಞೆ ವಿಧಿಸಿದ್ದರು. ಪೊಲೀಸ್ ಬಂದೋಬಸ್ತ್ ವ್ಯವವಸ್ಥೆ ಮಾಡಲಾಗಿತ್ತು. ಸಮಿತಿ ಮುಖಂಡರು, ಕಾರ್ಯಕರ್ತರು ಬ್ಯಾರಿಕೇಡ್ ದಾಟಿ, ಲೋಕಾಯುಕ್ತ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು. ಪೊಲೀಸರು ಅವರನ್ನು ತಡೆದರು.


ಉದಯವಾಹಿನಿ ಚಿತ್ರ

ಸ್ವಲ್ಪ ಹೊತ್ತಿನ ಬಳಿಕ ಮುಖಂಡರು ಅನುಮತಿ ಪಡೆದು, ಲೋಕಾಯುಕ್ತರ ಕಚೇರಿಗೆ ತೆರಳಿ ಮನವಿ ಸಲ್ಲಿಸಿದರು.

2025ರಲ್ಲಿ ಬಿಟಿಡಿಎ ಅಧಿಕಾರಿಗಳ ವಿರುದ್ಧ ಭ್ರಷ್ಟಾಚಾರ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುವಂತೆ ಆಗ್ರಹಿಸಿ ಮನವಿ ನೀಡಿದರೂ ಕ್ರಮ ಕೈಗೊಂಡಿಲ್ಲ. ಮನೆ ಕಳೆದುಕೊಂಡ ಹಲವರಿಗೆ ಮನೆಗಳನ್ನು ನೀಡಿಲ್ಲ. ಅವರನ್ನು ಹಲವು ವರ್ಷಗಳಿಂದ ಅಲೆದಾಡಿಸಲಾಗುತ್ತಿದೆ' ಎಂದು ಸಮಿತಿಯ ರಾಜ್ಯ ಸಂಘಟನಾ ಸಂಚಾಲಕ ಪರಶುರಾಮ ನೀಲನಾಯಕ ದೂರಿದರು. ನವನಗರದ ಯುನಿಟ್ 2ರ ಸೆಕ್ಟರ್ ನಂ.72ರಲ್ಲಿ ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಸರ್ಕಾರಿ ಶಾಲೆ ಆರಂಭಿಸಲು ಕಟ್ಟಡ ನಿರ್ಮಿಸಲಾಗಿತ್ತು. ಅದನ್ನು ಖಾಸಗಿ ಸಂಸ್ಥೆಯವರಿಗೆ ಕಾನೂನುಬಾಹಿರವಾಗಿ ನೀಡಲಾಗಿದೆ ಎಂದು ಆರೋಪಿಸಿದರು.

## ವಿದ್ಯುತ್ ಖಾಸಗೀಕರಣ ವಿರೋಧಿಸಿ, ಸುಡುವ ಬಿಸಿಲಿನಲ್ಲಿ ಪ್ರತಿಭಟನೆಯಿಳಿದ ರೈತ ಸಂಘ


**ವಿದ್ಯುತ್ ಖಾಸಗೀಕರಣ ಕೈ ಬಿಡುವಂತೆ ಸಿಎಂ ಡಿಕೆ ಶಿವಕುಮಾರವರಿಗೆ ಒತ್ತಾಯ. ರೈತರ ಕಬ್ಬಿನ ತೂಕದ ಅಳತೆ ಮಾಡುವಂತಹ ಡಿಜಿಟಲ್ ಮೀಟರ್ ಅಳವಡಿಸಿ.**

• **ಉದಯವಾಹಿನಿ, ಕೊಲ್ಹಾರ :**

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿದ್ಯುತ್ ಖಾಸಗೀಕರಣ ಮಾಡಲು ಮುಂದಾಗಿರುವುದನ್ನು ಕೈಬಿಡುವಂತೆ ಖಂಡಿಸಿ ಪಟ್ಟಣದ ಬಸವೇಶ್ವರ ವೃತ್ತದಿಂದ ತಾಲ್ಲೂಕು ದಂಡಾಧಿಕಾರಿ ಕಚೇರಿವರೆಗೆ ಸುಡುವ ಬಿಸಿಲಿನಲ್ಲಿ ಪಾದಯಾತ್ರೆ ಮೂಲಕ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ವಿರೋಧ ಘೋಷಣೆ ಕೂಗುತ್ತಾ ಆಕ್ರೋಶ ವ್ಯಕ್ತಪಡಿಸಿದರು. ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ತಾಲ್ಲೂಕು ದಂಡಾಧಿಕಾರಿಗಳ ಮೂಲಕ ಹೆಸ್ಕಾಂ ಇಲಾಖೆ ಅಧಿಕಾರಿಗಳಿಗೆ ಮತ್ತು ಮಾನ್ಯ ಮುಖ್ಯ ಮಂತ್ರಿಗಳಿಗೆ ಶುಕ್ರವಾರ ಹಸಿರು ನಿಶಾನೆ ಬಾವುಟ ಮೂಲಕ ಪ್ರತಿಭಟಿಸಿ ಮನವಿ ಸಲ್ಲಿಸಲಾಯಿತು.

ಈ ವೇಳೆ ರೈತ ಸಂಘದ ತಾಲ್ಲೂಕು ಅಧ್ಯಕ್ಷ ಸೋಮು ಬಿರಾದರ್ ಮಾತನಾಡಿ, ರೈತರ ಕಬ್ಬಿನ ತೂಕದ ಅಳತೆ ಮಾಡುವಂತಹ ಡಿಜಿಟಲ್ ಮೀಟರ್ ಅಳವಡಿಸಿ ಎಂದು ಸರ್ಕಾರಕ್ಕೆ ಒತ್ತಾಯಿಸಿದರು ಸಂಬಂಧವಿಲ್ಲದ ಹಾಗೆ ಮುಂದುವರಿಸಿದ್ದಾರೆ. ಇವಾಗ ವಿದ್ಯುತ್ ಖಾಸಗೀಕರಣಗೂಳಸಿ ಡಿಜಿಟಲ್ ಮೀಟರ್ ಅಳವಡಿಸುವದ್ದನ್ನು ಸಿದ್ದರಾಗಿದ್ದಾರೆ, ಇದನ್ನು ಕೈಬಿಡಬೇಕು.

ಮುಂಗಾರು ಮಳೆ ಕೈ ಬಿಟ್ಟಿರುವುದರಿಂದ ಮತ್ತು ಅಧಿಕಾರಿಗಳು ಪದೇ ಪದೇ ಕಾಡುತ್ತಿದ್ದಾರೆ. ಕಳೆದ ಎರಡು ತಿಂಗಳಿನಿಂದ ಜಮೀನಿನಲ್ಲಿ ಅಳವಡಿಸಿರುವ ಟಿಸಿ ಸುಟ್ಟುರು ದುರಸ್ತಿಗೊಳಿಸದೆ ಅಧಿಕಾರಿಗಳು ನಿರ್ಲಕ್ಷ ತೋರುತ್ತಿದ್ದಾರೆ. ಅಧಿಕಾರಿಗಳು ಮಾಡುವಂತಹ ಕೆಲಸವನ್ನು ರೈತರ ತಮ್ಮ ಸ್ವಂತ ವೆಚ್ಚದಲ್ಲಿ ರಿಪೇರಿ ಮಾಡಿಸುವಂತದಾಗಿದೆ. ವಿದ್ಯುತ್ ಖಾಸಗೀಕರಣದಿಂದ ಗ್ರಾಮೀಣ ಪ್ರದೇಶದ ರೈತರಿಗೆ ನೀಡಲಾಗುತ್ತಿರುವ ಸಬ್ಸಿಡಿ ಹಾಗೂ ವಿವಿಧ ಸೌಲಭ್ಯಗಳಿಗೆ ಧಕ್ಕೆಯಾಗುವ ಸಾಧ್ಯತೆ ಇದೆ. ಆದ್ದರಿಂದ ರಾಜ್ಯ ಸರ್ಕಾರವು ಯಾವುದೇ ಕಾರಣಕ್ಕೂ ವಿದ್ಯುತ್ ಖಾಸಗೀಕರಣ ಪ್ರಕ್ರಿಯೆಯನ್ನು ಮುಂದುವರಿಸದೆ ರೈತರ, ಸಾರ್ವಜನಿಕರ ಹಿತಾಸಕ್ತಿಯಿಂದ ನಿರ್ಧಾರವನ್ನು ಹಿಂಪಡೆಯಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿದ್ದರು. ಈ ಪ್ರತಿಭಟನೆಯಲ್ಲಿ ತಾಲ್ಲೂಕು ದಂಡಾಧಿಕಾರಿ ಎಸ್ ಎಸ್ ಅರಕೇರಿ. ಕೊಲ್ಹಾರ ಹೆಸ್ಕಾಂ ವಿದ್ಯುತ್ ಶಾಖಾಧಿಕಾರಿ ಶ್ರೀಶೈಲ್ ಪಡಸಲಗಿ, ಮಾಂತೇಶ್ ಗಿಡ್ಡಪ್ಪಗೋಳ, ಕಲ್ಲಪ್ಪ ಗಿಡ್ಡಪ್ಪಗೋಳ,ಶಶಿಕಾಂತ್ ಬಿರಾದಾರ್, ಶ್ರೀಶೈಲ್ ಬ್ಯಾಡಗಿ, ಮುದುಕಣ್ಣ ಚಲವಾದಿ, ಮಲ್ಲಪ್ಪ ಗಾಣಿಗೇರ್, ಪುಂಡಲಿಕ್ ಬೆಳ್ಳುಬ್ಬಿ, ಪರಶುರಾಮ್ ಮಮದಾಪುರ, ಮಹೇಶ್ ಗೌಡ ಪಾಟೀಲ್, ಮುದುಕಪ್ಪ ಮುರನಾಳ, ಬಿ ಎಂ ಹಲಗಲಿ, ಮಂಜು ಸೊನ್ನದ್, ಅಶೋಕ್ ತಳಗಿನಮನಿ, ಮತ್ತು ಸುತ್ತ ಮುತ್ತಲಿನ ರೈತ ಮುಖಂಡರು, ಕಾರ್ಯಕರ್ತರು ಪೊಲೀಸ್ ಸಿಬ್ಬಂದಿ ಪಾಲ್ಗೊಂಡಿದ್ದರು.


ಉದಯವಾಹಿನಿ ಚಿತ್ರ

### ವಿದ್ಯುತ್ ಸೌಲಭ್ಯ ರದ್ದಾಗುವ ಅಪಾಯ

**ಕೃಷಿ ಪಂಪ್ ಸೈಟ್‌ಗಳಿಗೆ ನೀಡುತ್ತಿರುವ ವಿದ್ಯುತ್ ಸೌಲಭ್ಯ ರದ್ದಾಗುವ ಅಪಾಯವಿದೆ. ಅಲ್ಲದೇ, ರಾಜ್ಯದ ಲಕ್ಷಾಂತರ ಕುಟುಂಬಗಳಿಗೆ 200 ಯೂನಿಟ್ ವರೆಗೆ ಉಚಿತ ವಿದ್ಯುತ್ ನೀಡುತ್ತಿರುವ ಗೃಹಜ್ಯೋತಿ ಯೋಜನೆಗೆ ತೊಂದರೆಯಾಗಲಿದೆ. ಸಣ್ಣಪುಟ್ಟ ವ್ಯಾಪಾರಸ್ಥರಿಗೆ, ನೌಕರಸ್ಥರ ಭವಿಷ್ಯಕ್ಕೆ ಕತ್ತಲೆ ಉಂಟು ಮಾಡುತ್ತಿದ್ದೀರಿ , ಸಣ್ಣ ಪುಟ್ಟ ಕುಟುಂಬಗಳು ಬೀದಿಗೆ ಬೀಳುತ್ತವೆ.**

ಜಿಎಸ್‌ಟಿ, ಅನುದಾನ ಸೇರಿ ನಾನಾ ಕಾರಣಕ್ಕೆ ರಾಜ್ಯ ಮತ್ತು ಕೇಂದ್ರ ಸರಕಾರದ ಮಧ್ಯೆ ಸಂಘರ್ಷ ಇದೆ. ಆದರೆ, ಈಗ ಪ್ರಧಾನಿ ಮೋದಿ ನಿರ್ಧಾರಕ್ಕೆ ರಾಜ್ಯ ಸರಕಾರ ಏಕೆ ಬೆಂಬಲ ಕೊಡುತ್ತಿದೆ. ಬೆಸ್ಕಾಂ ಸೇರಿ ನಾನಾ ಹೆಸ್ಕಾಂಗಳಿಗೆ ಖಾಸಗಿ ಸಂಸ್ಥೆಗಳು ಸಲ್ಲಿಸಿರುವ ಅರ್ಜಿ ತಿರಸ್ಕರಿಸಿ ಸಿಎಂ ಡಿ.ಕೆ. ಶಿವಕುಮಾರ್ ಕೇಂದ್ರದ ವಿರುದ್ಧ ಸಡ್ಡು ಹೊಡೆಯಬೇಕು. ಗಾಳಿ, ನೀರಿನ ಜತೆಗೆ ವಿದ್ಯುತ್ ಸಹ ಅಗತ್ಯ ವಸ್ತುವಾಗಿದೆ. ಹಾಗಾಗಿ, ಇದನ್ನು ಖಾಸಗೀಕರಣಗೊಳಿಸಲು ಅವಕಾಶವಿಲ್ಲ, ಇದನ್ನು ಮೀರಿ ನೀವು ಖಾಸಗೀರಣಕ್ಕೆ ಮುಂದಾದರೆ, ನಾವು ಅಧಿಕಾರ ಬಿಟ್ಟು ತೊಲಗಿ ಅಂತಾ ಉಗ್ರ ಹೋರಾಟ ಮಾಡಬೇಕಾಗುತ್ತದೆ.
– ಟಿ.ಟಿ ಹೇಗೆದಾಳ ರೈತ ಮುಖಂಡ.